ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ

ನಿಬಂಧಕಾರರು

ಶೋಭ ಹೆಚ್.ಎಸ್.
ಕನ್ನಡ ಎಂ.ಫಿಲ್. ವಿದ್ಯಾರ್ಥಿನಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ

ನಿಬಂಧಕಾರರು

ಶೋಭ ಹೆಚ್.ಎಸ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿನಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ

ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦–೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00475**ರ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ **ಶೋಭ ಹೆಚ್.ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ **"ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೩೦-೦೫-೨೦೧೧

(ಡಾ. ಡಿ.ಸುಮಂಗಳ)
ಮಾರ್ಗದರ್ಶಕರು
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00475**ರ ವಿದ್ಯಾರ್ಥಿನಿಯಾದ ನಾನು ೨೦೧೦-೧೧ನೇ ಸಾಲಿನ ಪರೀಕ್ಷೆಗಾಗಿ ಡಾ. ಡಿ.ಸುಮಂಗಳ, ಕನ್ನಡ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Shobha H.S.

ಮೈಸೂರು
ದಿನಾಂಕ: ೩೦-೦೫-೨೦೧೧

(ಶೋಭ ಹೆಚ್.ಎಸ್.)
೨೦೧೦-೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ

ಪರಿವಿಡಿ

		ಪುಟ ಸಂಖ್ಯೆ
ಅಧ್ಯಾಯ – ೧	:	೧–೩
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ		
ಅಧ್ಯಾಯ – ೨	:	೪–೬
ಡಾ. ಎಂ.ಎಸ್.ವೇದಾರವರ ಪರಿಚಯ		
ಅಧ್ಯಾಯ – ೩	:	೭–೧೪
ಕನ್ನಡ ಸಣ್ಣಕಥೆಗಳ ಉಗಮ ಬೆಳವಣಿಗೆ		
ಅಧ್ಯಾಯ – ೪	:	೧೫–೭೮
ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀಪಾತ್ರಗಳ ಚಿತ್ರಣ – ವಿಶ್ಲೇಷಣೆ ೧) ಮೆದುಧೋರಣೆಯ ಸಾಂಪ್ರದಾಯಿಕ ನಿಲುವಿನ ಸ್ತ್ರೀಪಾತ್ರಗಳು ೨) ಉಗ್ರಸ್ವರೂಪ, ನಿರ್ಧಾರ ತಳೆಯುವ ಸ್ತ್ರೀಪಾತ್ರಗಳು ೩) ಆಧುನಿಕ ವಿವೇಚನೆಯುಳ್ಳ ಸ್ತ್ರೀಪಾತ್ರಗಳು		
ಅಧ್ಯಾಯ – ೫	:	೭೯–೮೨
ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀಪಾತ್ರಗಳ ಒಟ್ಟು ವಿವೇಚನೆ		
ಉಪಸಂಹಾರ	:	೮೩–೮೪
ಪರಾಮರ್ಶನ ಗ್ರಂಥಗಳು	:	೮೫

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಾಚೀನ ಕನ್ನಡ ಸಾಹಿತ್ಯವನ್ನು ನೋಡಿದಾಗ ಸಾಹಿತ್ಯದ ರೂಪ ಪ್ರಕಾರಗಳಲ್ಲಿ ಅಂತಹ ವೈವಿಧ್ಯತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಅಲ್ಲಿ ಬರುವಂತಹ ಪ್ರಮುಖ ಪ್ರಕಾರಗಳೆಂದರೆ ಚಂಪೂ, ರಗಳೆ ಮತ್ತು ಅಲ್ಲೊಂದು ಇಲ್ಲೊಂದು ಎಂಬಂತೆ ಗದ್ಯ ಕೃತಿಗಳು ಕಂಡುಬರುತ್ತವೆ. ಮಧ್ಯಕಾಲದಲ್ಲಿ ಪ್ರಮುಖವಾಗಿ ವಚನಗಳು ಮತ್ತು ಕೀರ್ತನೆಗಳು ಹಾಗೂ ಷಟ್ಪದಿಗಳು ಕಂಡುಬರುತ್ತವೆ. ಆದರೆ ಆಧುನಿಕ ಕನ್ನಡ ಸಾಹಿತ್ಯ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡು ಬಹಳ ಸಮೃದ್ಧವಾಗಿ ಬೆಳೆದಿದೆ.

ಅದರಲ್ಲಿಯು ವಿಶೇಷವಾಗಿ ಸಣ್ಣಕಥಾ ಸಾಹಿತ್ಯವು ಭದ್ರವಾದಂತಹ ಬುನಾದಿಯನ್ನು ಹಾಕಿಕೊಂಡು ಹೆಮ್ಮರವಾಗಿ ಬೆಳೆದು ನಿಂತಿರುವುದಲ್ಲದೆ ಇನ್ನೂ ಸಹ ಬೃಹದಾಕಾರವಾಗಿ ಬೆಳೆವಣಿಗೆಯನ್ನು ಕಾಣುತ್ತಿದೆ. ಕನ್ನಡದ ಕಥನ ಪರಂಪರೆಗೆ ಮೊದಲ ಗದ್ಯ ಕೃತಿ ವಡ್ಡಾರಾಧನೆಯೇ ಮುನ್ನುಡಿಯಾದರೂ ಅದು ಒಂದು ಪ್ರಕಾರವಾಗಿ ಬೆಳೆದುದು ಹೊಸಗನ್ನಡ ಕಾಲಘಟ್ಟದಲ್ಲಿ ಇದು ವಿಶೇಷವಾಗಿ ಬೆಳೆದುದು ಪಾಶ್ಚಾತ್ಯ ಮಾದರಿಗಳ ಪ್ರಭಾವದಿಂದ ಎನ್ನಬಹುದು. ಪಾಶ್ಚಾತ್ಯರಲ್ಲಿ ಮೊದಲು ಕತೆಗಳನ್ನು ರಚಿಸಿದವರು 'ಎಡ್ಗರ್ ಅಲನ್ ಪೋ' ಎಂಬ ಅಮೇರಿಕಾದ ಸಾಹಿತಿ. ೧೮೩೩ರಲ್ಲಿ ಆತ 'ಎ ಮ್ಯಾನ್ಯುಸ್ಕ್ರಿಪ್ಟ್ ಫೌಂಡ್ ಇನ್ ಎ ಪೌಲ್' ಎಂಬ ಮೊದಲ ಕತೆ ಬರೆದ.

ಭಾರತದಲ್ಲಿ ಮೊದಲಿಗೆ ಬಂಗಾಳದಲ್ಲಿ ಆಧುನಿಕ ಸಣ್ಣಕತೆಗಳು ಕಾಣಿಸಿ ಕೊಂಡವು. ರವೀಂದ್ರನಾಥ ಠಾಕೂರ್, ಶರತ್‌ಚಂದ್ರ ಚಟರ್ಜಿ, ಶಾಂತಾದೇವಿ ಮುಂತಾದವರು ಕತೆಗಾರರಾಗಿ ಹೆಸರು ಪಡೆದರು. ವೈವಿಧ್ಯಮಯವಾದ ಕಥಾ ಸಾಹಿತ್ಯದಲ್ಲಿ ಸಣ್ಣ ಕತೆಗಳನ್ನು ಮೊದಲಿಗೆ ಕನ್ನಡ ಸಾಹಿತ್ಯದಲ್ಲಿ ಆಧುನಿಕ ಸಣ್ಣ ಕತೆಯನ್ನು ಮೊದಲಿಗೆ ರಚಿಸಿದವರು ಶ್ರೀ ಪಂಜೆ ಮಂಗೇಶರಾಯರು. ೧೯೦೦ರಲ್ಲಿ ಮಂಗಳೂರಿನಲ್ಲಿ ಪ್ರಕಟಗೊಳ್ಳುತ್ತಿದ್ದ ಸುವಾಸಿನಿ ಮಾಸಪತ್ರಿಕೆಯಲ್ಲಿ ಜುಲೈ ೧ರ ಸಂಚಿಕೆಯಲ್ಲಿ ಇವರ ಮೊದಲ ಸಣ್ಣಕತೆ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಪ್ರಕಟವಾದವು. ಅದೇ ಸಂದರ್ಭದಲ್ಲಿ 'ಹಳೆಯ ಸಬ್ ಎಸಿಸ್ಟಾಂಟನ ಸುಳ್ಳು ಡೈರಿಯಿಂದ', ಕಮಲಾಪುರದ ಹೋಟೆಲ್‌ನಲ್ಲಿ' ಹಾಗೂ 'ನನ್ನ ಹೆಂಡತಿ', ೧೯೦೦ರಿಂದ ೧೯೦೩ರವರೆಗೆ ಪ್ರಕಟಗೊಂಡವು.

ನವೋದಯ ಕಾಲಘಟ್ಟದ ಲೇಖಕರು ಸಮಾಜದ ಲೋಪದೋಷಗಳನ್ನು, ದೌರ್ಬಲ್ಯಗಳನ್ನು ಹಾಗೆಯೇ ಅದರೊಳಗೆ ಇರುವ ಮಾನವೀಯ ಮೌಲ್ಯಗಳನ್ನು ಒಂದು ವ್ಯವಸ್ಥಿತ ಸಮಾಜದ ಸುಖ ದುಃಖ, ಆಂತರಿಕ ಸಾಮರ್ಥ್ಯ, ಪ್ರಕೃತಿ, ಆದರ್ಶ ಮುಂತಾದ ವಿಷಯಗಳನ್ನು ಪ್ರಧಾನವಾಗಿ ತಮ್ಮ ಕೃತಿಯಲ್ಲಿ ಪ್ರತಿಪಾದಿಸಿದರು. ಇವರೆಲ್ಲರಿಗೂ ಆಗ ಇದ್ದ ಒಂದು ಪ್ರಮುಖ ಧ್ಯೇಯವೆಂದರೆ ರಾಷ್ಟ್ರೀಕರಣ ಕರ್ನಾಟಕ ಏಕೀಕರಣ, ಇದು ಕನಸನ್ನು ಸಾಹಿತ್ಯದ ಮುಖೇನ ಜನಮನಕ್ಕೆ ಬಿತ್ತುವ ಜಾಗೃತಗೊಳಿಸುವ ಕಾರ್ಯಕ್ಕೆ ಕಾರಣವಾಯಿತು.

ನವ್ಯ ಲೇಖಕರಿಗೆ ಸಮಾಜಕ್ಕಿಂತಲೂ ವ್ಯಕ್ತಿಯ ವೈಯಕ್ತಿಕ ಸಮಸ್ಯೆಗಳು ದೊಡ್ಡದಾಗಿ ಕಂಡವು. ಈ ಎಲ್ಲಾ ಲೇಖಕರ ಸಾಹಿತ್ಯದ ವಸ್ತು. ಭಾಷೆ, ತಂತ್ರಗಳೆಲ್ಲವು ಪಶ್ಚಿಮದ ಪ್ರಭಾವದಿಂದಲೇ ಬಂದವಾಗಿದ್ದವು. ಇವರು ಒಟ್ಟು ಒಂದು ವ್ಯವಸ್ಥೆಯನ್ನು ವಿರೋಧಿಸುವ ಮಟ್ಟಿಗೆ ಈ ಪ್ರವೃತ್ತಿ ಮುಂದುವರೆಯಿತು. ಈ ಲೇಖಕರಿಗೆ ಧೋರಣೆಗಿಂತ ಸಾಹಿತ್ಯದ ಅಭಿವ್ಯಕ್ತಿ ವಿಧಾನ ಪ್ರಮುಖವಾಗಿ ಕಾಣತೊಡಗಿತು.

ದಲಿತ ಬಂಡಾಯ ಕಾಲಘಟ್ಟದಲ್ಲಿ ಸಮಾಜದ ನಿರ್ಲಕ್ಷಿತ ಜನರ ಶೋಷಣೆಯನ್ನು ಕಟ್ಟಿಕೊಡುವ ಅದರ ಮೂಲಕ ಶೋಷಕರ ವಿರುದ್ಧ ಪ್ರತಿಭಟಿಸುವ, ಶೋಷಿತರಿಗೆ ಜಾಗೃತಿ ಮೂಡಿಸುವ ಕೆಲಸವನ್ನು ತಮ್ಮ ಕಥಾ ಸಾಹಿತ್ಯದ ಮೂಲಕ ಮಾಡುವ ಸಲುವಾಗಿ ಹಲವಾರು ಸಣ್ಣ ಕತೆಗಳನ್ನು ರಚಿಸಿದರು.

ಅಂತೆಯೇ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಕಥಾ ಸಾಹಿತ್ಯವು ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿತು. ಆಧುನಿಕ ಕಥಾ ಸಾಹಿತ್ಯದ ೩ನೇ ತಲೆಮಾರಿಗೆ ಸೇರಿದ ಕತೆಗಾರ್ತಿಯರಲ್ಲಿ ಎಂ.ಎಸ್.ವೇದಾರವರು ಒಬ್ಬರು. ದಲಿತ ಬಂಡಾಯದ ಸಾಹಿತ್ಯದಿಂದ ಸ್ಪೂರ್ತಿಯನ್ನು ಪಡೆದವರು. ಅಂತೆಯೇ ಇವರ ಸಾಹಿತ್ಯದಲ್ಲಿ ದೇವನೂರು ಮಹಾದೇವ ಅವರ ರಚನಾ ಶೈಲಿಯನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಎಂ.ಎಸ್.ವೇದಾರವರ ಕತೆಗಳ ವಸ್ತು ಮತ್ತು ಉದ್ದೇಶಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಎಂ.ಎಸ್.ವೇದಾರವರ ಬಹುಪಾಲು ಕಥೆಗಳ ನಾಯಕಿಯರು ಶೋಷಿತರು. ದೌರ್ಜನ್ಯಕ್ಕೆ ಒಳಗಾದವರು. ಮೂಕವೇದನೆಯನ್ನು ಅನುಭವಿಸಿದಂತವರು. ಹಾಗೆಯೇ ಜೀವನ ತೊಳಲಾಟದಿಂದ ಹೊರಗೆ ಬಂದಂತಹ, ಸಮಾಜದ ಕಟ್ಟು ಕಟ್ಟಲೆಗಳಿಗೆ ಹೆದರದೆ ಸ್ವತಂತ್ರ ಜೀವನವನ್ನು ನಡೆಸುವಂತಹ ಅಂತೆಯೇ ಗ್ರಾಮೀಣ ಪ್ರದೇಶದ ಜನಜೀವನವನ್ನು ಸಹ ಇಲ್ಲಿ ಕಾಣಬಹುದು.

ಇವರು ನಂಜನಗೂಡಿನ ಸುತ್ತಮುತ್ತಲ ಅಚ್ಚ ಗ್ರಾಮೀಣ ಭಾಷಾ ಸೊಗಡನ್ನು ಇವರ ಕತೆಗಳಲ್ಲಿ ಬಳಸಿದ್ದಾರೆ. ದಲಿತ ಮಹಿಳೆಯರ ಸ್ನಿಗ್ಧತೆಯನ್ನು ದಟ್ಟ ಗ್ರಾಮೀಣ ಪರಿಭಾಷೆಯನ್ನು ಕತೆಗಳಲ್ಲಿ ತರುವುದರ ಮೂಲಕ ಹೆಣ್ಣಿನ ಸೂಕ್ಷ್ಮಾತಿ ಸೂಕ್ಷ್ಮ ಸಂವೇದನೆಗಳನ್ನು ಕತೆಗಳಲ್ಲಿ ಅನಾವರಣಗೊಳಿಸಿದ್ದಾರೆ. ದಟ್ಟ ಸ್ತ್ರೀವಾದಿ ಪ್ರಜ್ಞೆಯನ್ನು ಇವರ ಕತೆಗಳಲ್ಲಿ ಗುರುತಿಸಬಹುದಾಗಿದೆ.

ಈ ಮೇಲಿನ ಉದ್ದೇಶಗಳಿಂದ ನಿಬಂಧದಲ್ಲಿ ಕೆಲವು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಲೇಖಕರ ಕೃತಿಯನ್ನು ಅಧ್ಯಯನ ಮಾಡುವಾಗ ಅವರ ವೈಯಕ್ತಿಕ ವಿಚಾರವನ್ನು ತಿಳಿದುಕೊಳ್ಳಬೇಕಾಗಿರುವುದು ಅವಶ್ಯಕವಾದ್ದರಿಂದ ೨ನೇ ಅಧ್ಯಾಯದಲ್ಲಿ ಲೇಖಕಿಯ ಪರಿಚಯವನ್ನು ಮಾಡಿಕೊಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಗಳ ಉಗಮ ಮತ್ತು ಬೆಳವಣಿಗೆಯನ್ನು ವಿವಿಧ ಹಂತಗಳಲ್ಲಿ ತಿಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀಪಾತ್ರ ಚಿತ್ರಣ – ವಿಶ್ಲೇಷಣೆ

ಐದನೇ ಅಧ್ಯಾಯದಲ್ಲಿ ಎಂ.ಎಸ್.ವೇದಾರ ಸ್ತ್ರೀಪಾತ್ರಗಳ ಒಟ್ಟು ವಿವೇಚನೆ ಮಾಡಲಾಗಿದೆ.

ಒಟ್ಟಾರೆ ಮೇಲೆ ಹೇಳಿದ ಎಲ್ಲಾ ಅಂಶಗಳ ಭಿತ್ತಿಯಲ್ಲಿ ಎಂ.ಎಸ್.ವೇದಾರವರ ಕಥಾಸಂಕಲನಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ವಸ್ತು ಮತ್ತು ಉದ್ದೇಶವನ್ನು ಈ ಸಂಬಂಧದಲ್ಲಿ ಪ್ರಮುಖವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ - ೨

ಡಾ. ಎಂ.ಎಸ್.ವೇದಾರವರ ಪರಿಚಯ

ಸ್ವಾತಂತ್ರ್ಯದ ನಂತರ ಇಟ್ಟುಕೊಂಡ ಆಶೋತ್ತರಗಳು ಕಣ್ಮರೆಯಾಗಿ ಅತ್ಯಾಧುನಿಕತೆಯೊಂದಿಗೆ ಹಲವಾರು ಸಮಸ್ಯೆಗಳು ಮನುಷ್ಯನನ್ನು ಕಾಡತೊಡಗಿವೆ. ಅಂತಹ ಸಮಸ್ಯೆಗಳಲ್ಲಿ ಸ್ತ್ರೀ ಸಮಸ್ಯೆಯು ಒಂದು. ಈ ಸ್ತ್ರೀ ಸಮಸ್ಯೆಯನ್ನು ಹಲವಾರು ಲೇಖಕಿಯರು ತಮ್ಮ ತಮ್ಮ ಸಾಹಿತ್ಯದಲ್ಲಿ ತೆರೆದು ತೋರಿಸಿದ್ದಾರೆ. ಅಂತಹ ಕತೆಗಾರ್ತಿಯರಲ್ಲಿ ಎಂ.ಎಸ್.ವೇದಾ ಕೂಡ ಒಬ್ಬರು.

ಎಂ.ಎಸ್.ವೇದಾ ಅವರು ದಿನಾಂಕ ೦೮-೦೫-೧೯೬೫ರಲ್ಲಿ ಮೈಸೂರಿನಲ್ಲಿ ಜನಿಸಿದರು. ತಂದೆ ಸಿ.ಶಿವಣ್ಣ, ತಾಯಿ ಶ್ರೀಮತಿ ದೇವೀರಮ್ಮ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ ಮತ್ತು ಪಿಎಚ್.ಡಿ ಪದವಿಯನ್ನು ಪಡೆದ ಇವರು ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು ಹಲವಾರು ಕಥಾ ಸಂಕಲನಗಳು, ಕವನ ಸಂಕಲನಗಳು, ಕಾದಂಬರಿಗಳು, ನಾಟಕ ಮತ್ತು ಇತರೆ ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ

೧) ಕಥಾ ಸಂಕಲನಗಳು

೧) ಪ್ರೀತಿ ಮತ್ತು ಸಾವು (೧೯೯೩)

೨) ಪಾಲು (೧೯೯೭)

೩) ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ (೨೦೦೨)

೪) ಮುಳ್ಳುಮನೆಯ ಮೇಲೆ (೨೦೦೯)

೨) ಕವನ ಸಂಕಲನಗಳು

೧) ಕಾವ್ಯ ಕೂಸು (೧೯೮೫)

೨) ಗಂಗೋತ್ರಿಯಲ್ಲಿ (೧೯೮೭)

೩) ಬಿಳಲುಗಳು (೧೯೮೯)

೪) ದಾಖಲಾಗುವುದು ಬೇಡ (೨೦೦೪)

೩) ಕಾದಂಬರಿಗಳು:

೧) ಜಮೀನು (೨೦೦೦)

೨) ಜಯ (೨೦೦೪)

೩) ಕಪ್ಪು ಕಿವಿಯ ಬಿಳಿಯ ಕುದುರೆಗಳು (೨೦೦೭)

೪) ನಾಟಕ:

೧) ಉತ್ತರ ಶಾಕುಂತಲಾ (೨೦೦೬)

೫) ಇತರೆ

ಚದುರಂಗ (ಮಾನೋಗ್ರಾಫ್, ೨೦೦೧)

ಅರ್ಧಗರ್ವದ ಹುಡುಗಿ (೨೦೧೦)

(ವೈದೇಹಿಯವರ ಸಾಹಿತ್ಯದ ಸ್ತ್ರೀಸಂಕಥನ ಅಧ್ಯಯನ)

ಪ್ರಶಸ್ತಿಗಳು ಮತ್ತು ಬಹುಮಾನಗಳು

೧) ಗೀತಾದೇಸಾಯಿ ದತ್ತಿನಿಧಿ ಬಹುಮಾನ

೨) ಹೆಚ್.ವಿ.ಸಾವಿತ್ರಮ್ಮ ದತ್ತಿ ನಿಧಿ ಬಹುಮಾನ(ಅಖಿಲ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು)

೩) ಮಾಣಿಕ್‌ಬಾಯ್ ಪಾಟೀಲ್ ಪ್ರಶಸ್ತಿ (ಕಲಬುರ್ಗಿ)

೪) ಹಾವನೂರು ಪ್ರಶಸ್ತಿ (ಹಾವೇರಿ)

೫) ಭಾರತೀಸುತ ಕಾದಂಬರಿ ಪ್ರಶಸ್ತಿ (ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು)

೬) ಗೊರೂರು ಸಾಹಿತ್ಯ ಪ್ರಶಸ್ತಿ (ಬೆಂಗಳೂರು)

೭) ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಥಮ ಬಹುಮಾನ (ವಿಧ್ಯಾವರ್ಧಕ ಸಂಘ ಧಾರವಾಡ)

೮) ಇನ್‌ಪೋಸಿಸ್ ಪ್ರತಿಷ್ಠಾನ ಪ್ರಶಸ್ತಿ (ಧಾರಾವಾಡ) ಇತ್ಯಾದಿ

ವಿಭಿನ್ನ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಕಥೆಯ ಮೂಲಕ ಬಂದಂತಹ ಎಂ.ಎಸ್.ವೇದಾರವರ ಜೀವನ ಮತ್ತು ಸಾಹಿತ್ಯಕ ಸಾಧನೆಯ ವಿವರಗಳು ವೈವಿಧ್ಯತೆ

ಮತ್ತು ವಿಶಿಷ್ಟತೆಗಳಿಂದ ಕೂಡಿವೆ ಎಂದು ಹೇಳಬಹುದು. ಎಂ.ಎಸ್.ವೇದಾರವರ ಬರಹಕ್ಕೆ ಸೃಜನಶೀಲ ಮನಸ್ಸನ್ನು ಮಾನವೀಯ ನೆಲೆಗಟ್ಟಿನಲ್ಲಿ ನೈತಿಕತೆಯ ಚೌಕಟ್ಟಿನಲ್ಲಿ ಪ್ರಜ್ಞಾಪೂರ್ವಕ ರೂಪಿಸುವ ಶಕ್ತಿ ಅಡಗಿದೆ.

"ಆದಿಕಾಲದಿಂದಲೂ ಸ್ತ್ರೀಯರು ಪುರುಷ ಚಕ್ರಾಧಿಪತ್ಯದ ಅಡಿಯಲ್ಲಿ ಸಿಕ್ಕಿ ಅನುಭವಿಸಿದ ನೋವಿನ ಧ್ವನಿ ನೆಲಮುಗಿಲನ್ನು ಆವರಿಸಿತು".[೧] ಇದಕ್ಕೆ ಒಂದು ಕೊನೆಯನ್ನು ಕಾಣಿಸಲು ಹೆಣ್ಣು ಸಹ ಪುರುಷನಿಗಿಂತ ಕಡಿಮೆಯಿಲ್ಲ ಅವಳು ಸಹ ಸ್ವಾತಂತ್ರ್ಯಕ್ಕೆ ಅರ್ಹಳು ಎಂಬುದನ್ನು ತೋರಿಸುವ ಸಲುವಾಗಿ ಸ್ತ್ರೀಸಂವೇದನೆಯ ವೇದಿಕೆಗಳು ಹುಟ್ಟಿಕೊಂಡವು. ಅಂತೆಯೇ ಹಲವಾರು ಸ್ತ್ರೀ ಲೇಖಕಿಯರು ಸ್ತ್ರೀಯರ ಶೋಷಣೆಯನ್ನು ತಮ್ಮ ಕೃತಿಗಳಲ್ಲಿ ಹೇಳುತ್ತಾ ಅವಳ ಬವಣೆಗಳನ್ನು ವರ್ಣಿಸುತ್ತಾ ಜೊತೆಗೆ ಅದರಿಂದ ಹೇಗೆ ಹೊರಬರಬೇಕೆಂಬುದರ ಕರೆಯನ್ನು ಸಹ ನೀಡಿದರು. ಅಂತಹ ಮಹಿಳಾ ಲೇಖಕಿಯರಲ್ಲಿ ೩ನೇ ತಲೆಮಾರಿನ ಲೇಖಕಿಯಾಗಿ (ಮಹಿಳಾ) ಎಂ.ಎಸ್.ವೇದಾರವರು ಕಂಡುಬರುತ್ತಾರೆ.

---

೧. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ವಿವಿಧ ಲೇಖಕರು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬, ಪು. ೧೭೭.

ಅಧ್ಯಾಯ – ೩

ಸಣ್ಣ ಕಥೆಗಳ ಉಗಮ ಮತ್ತು ಬೆಳವಣಿಗೆ

ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದರ ಸ್ಥಾನ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವವಾಗಿದೆ. ಸಮಕಾಲೀನ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ವಿಸ್ತಾರವೂ, ಮಹತ್ವವೂ ಆದ ಸಾಹಿತ್ಯ ಪ್ರಕಾರ ಇದಾಗಿದೆ.

೧೯ನೇ ಶತಮಾನದ ಪೂರ್ವಾರ್ಧದಲ್ಲಿ 'ಎಡ್ಗರ್ ಅಲನ್ ಪೋ' ಎಂಬ ಅಮೇರಿಕಾದ ಸಾಹಿತಿ ಅನೇಕ ಸಣ್ಣ ಕತೆಗಳನ್ನು ರಚಿಸಿದನು. ೧೮೩೩ರಲ್ಲಿ ಆತ "ಎ ಮ್ಯಾನ್ಯುಸ್ಕ್ರಿಪ್ಟ್ ಫೌಂಡ್ ಇನ್ ಎ ಹಾಲ್"[೧] ಎಂಬ ಮೊದಲ ಕತೆ ಬರೆದ.

'ಅತ್ಯಂತ ಕಡಿಮೆ ಸಮಯದಲ್ಲಿ ಓದುಗನ ಮೇಲೆ ಪ್ರಭಾವ ಬೀರುವ ಉದ್ದೇಶ ಸಣ್ಣಕತೆಗಳದು, ಹೀಗಾಗಿ ಸುದೀರ್ಘ ಕಾಲಾವಧಿಯನ್ನು ಬಯಸದೇ ಕ್ಷಿಪ್ರಗತಿಯನ್ನು ಒಳಗೊಂಡ 'ಸಣ್ಣಕತೆಗಳು' ಜಗತ್ತಿನೆಲ್ಲಡೆ ಕ್ಷಿಪ್ರವಾಗಿ ಪ್ರಚಾರವಾಗಿ ಜನಮನ್ನಣೆಗೆ ಪಾತ್ರವಾದವು ಎಡ್ಗರ್ ಅಲನ್‌ಪೋ ನಿಂದ ಆರಂಭಗೊಂಡ ಈ ಸಾಹಿತ್ಯ ಪ್ರಕಾರಕ್ಕೆ ಹಾಥಾರ್ನ್ ಮತ್ತು ಬ್ರೆಟ್ ಹಾರ್ಟ್‌ರವರು ನಿಯಮ ರೂಪುರೇಷೆಗಳನ್ನು ಅಭಿವೃದ್ಧಿಪಡಿಸಿದರು. ಹಳೆಯ ಕೊರತೆಗಳನ್ನು ಇವು ನೀಗಿಸಿದವು'.[೨]

'ಸಣ್ಣ ಕಥೆ ಎಂಬ ಪದ ಇಂಗ್ಲಿಷಿನ Short storyಯ ಅನುವಾದವಾಗಿದೆ. 'ರಿನೈಸಾನ್ಸ್' ಅಥವಾ 'ನವೋದಯ'ವು ಮೊದಲು ಇಟಲಿಯಲ್ಲಿ ನಂತರ ಯೂರೋಪ್‌ನಲ್ಲೆಲ್ಲಾ ಬೆಳಗಿತ್ತು. ಇಟಲಿಯ ಬೊಕ್ಯಾಚಿಯೋ ಬರೆದ 'ಡೆಕಾಮರಾನ್' ಕತೆಗಳು ಸರಳ ಶೈಲಿಯ ಹೃದಯಂಗಮ ಕೃತಿಗಳು. ಹದಿನಾರನೇ ಶತಮಾನದಲ್ಲಿ ಭಾಷಾಂತರಗೊಂಡು ಷೇಕ್ಸ್‌ಪಿಯರ್ ಮತ್ತು ಇತರರಿಗೆ ಮೂಲವಸ್ತುಗಳನ್ನು ಒದಗಿಸಿತು'.[೩]

ಪೇಂಟರ್‌'ನ "ಪ್ಯಾಲೇಸ್ ಆಫ್ ಪ್ಲೆಷರ್ಸ್" ಇಂತಹ ಸಣ್ಣ ಕತೆಗಳ ಸಂಗ್ರಹವಾಗಿದೆ.

---

೧. ನರಸಿಂಹಮೂರ್ತಿ ಕೆ. ಕನ್ನಡ ಕಥೆಯ ಸ್ವರೂಪ ಪ್ರಬುದ್ಧ ಕರ್ನಾಟಕ, ೯೪೦, ಪು. ೨೧.

೨. ಅದೇ

೩. ಅದೇ

"ಹತ್ತೊಂಬತ್ತನೇ ಶತಮಾನದಲ್ಲಿ ಅಮೆರಿಕಾದಲ್ಲಿ ಪ್ರಾರಂಭಗೊಂಡ ಕಥಾ ಸಾಹಿತ್ಯವು ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ಕಡೆಗಳಲ್ಲಿ ಸ್ಥಾನ ಪಡೆಯಿತು. ಇಂಗ್ಲೆಂಡ್‌ನಲ್ಲಿ ಸ್ಟಿವರ್ನ್, ಕಿಪ್ಲಿಂಗ್, ಕಾನ್ರ್ಯಾಡ್, ಕ್ಯಾಥರೀನ್ ಮ್ಯಾನ್ಸ್, ಫೀಲ್ಡ್ ಹಾಗೂ ವೀಲ್ಸ್ ಜೇಕಬ್ಸ್‌ನಂಥ ಸಣ್ಣಕತೆಗಾರರು ಕಂಡುಬಂದರೆ, ರಷ್ಯಾ ದೇಶದಲ್ಲಿ ಪುಷ್ಕಿನ್, ಟರ್ಗಿನೀವ್, ಟಾಲ್‌ಸ್ಟಾಯ್, ಚೆಕಾಫ್, ದೋಸ್ತೋವಸ್ಕಿ ಮತ್ತು ಗಾರ್ಕಿ ಮುಖ್ಯ ಸಣ್ಣ ಕತೆಗಾರರಾಗಿದ್ದಾರೆ".[೧]

ಭಾರತದಲ್ಲಿ ಕಥೆ ಎಂಬುದು ಮೊದಲು ಜನಪದವಾಗಿ ಬೆಳೆದು ಬಂದಿರಬಹುದು ಅಲ್ಲದೆ, ಭಾರತದಲ್ಲಿ ಈಗಿನ ಸಣ್ಣಕತೆಯ ಸ್ವರೂಪವಲ್ಲದಿದ್ದರೂ ಕತೆಯ ಸ್ವರೂಪದ ಬಹುತೇಕ ಅಂಶಗಳನ್ನೊಳಗೊಂಡ ವೇದಗಳಲ್ಲಿ, ಜೈನಸಾಹಿತ್ಯ ಕೃತಿಯಾದ ವಡ್ಡಾರಾಧನೆಯಲ್ಲಿ ಬುದ್ಧನ ಜಾತಕ ಕತೆಗಳಲ್ಲಿ, ಪಂಚತಂತ್ರಗಳಲ್ಲಿ ಬೃಹತ್ಕಥಾಮಂಜರಿ, ನಯಸೇನನ ಧರ್ಮಾಮೃತ, ಕಥಾಸರಿತ್ಸಾಗರ ಮುಂತಾದ ಕೃತಿಗಳಲ್ಲಿ ಕತೆಯ ಹೊಳಹುಗಳನ್ನು ಕಾಣಬಹುದು.

ಕೃಷ್ಣಕುಮಾರ ಕಲ್ಲೂರವರ ಪ್ರಕಾರ "ಸಣ್ಣಕತೆಯ ರೂಪ ಕನ್ನಡದಲ್ಲೇ ಬೆಳೆದುದು ಅದರಲ್ಲಿ ತುಂಬಿದ ಜೀವಾಳ ಕನ್ನಡದ್ದೇ ಹೆಸರು ಮಾತ್ರ ಇಂಗ್ಲಿಷ್‌ನಿಂದ ಎತ್ತಿಕೊಂಡಿದ್ದೇನೋ ನಿಜ"[೨] ಎಂದು ತಮ್ಮ "ಜೀವನ" ಕಥಾ ಸಂಕಲನದಲ್ಲಿ ತಿಳಿಸಿದ್ದಾರೆ.

ಹಾಗಾಗಿ ಕಥೆ ಜನತೆಗೆ ಹೊಸತಲ್ಲ. ಅದು ಮಾನವನು ಮಾತನಾಡುವುದಕ್ಕೆ ಪ್ರಾರಂಭಿಸಿದ ದಿನದಿಂದ ಕಥೆ ಹೇಳುವ ಪ್ರವೃತ್ತಿ ಅವನಲ್ಲಿ ಅಂಕುರಿಸಿತು. ಕಥೆಗಳು ಎಲ್ಲಾ ಸಣ್ಣಕಥೆಯಲ್ಲಿ ಕತೆಗಾರ ಒಂದು ವಿಷಯವನ್ನೆತ್ತಿ ರಸವತ್ತಾಗಿ ವರ್ಣಿಸಿ ಓದುಗನ ಮೇಲೆ ಒಂದು ನಿರ್ದಿಷ್ಟವಾದ ಪರಿಣಾಮವನ್ನುಂಟು ಮಾಡುತ್ತಾನೆ. ಅದರಲ್ಲಿ ನಿರ್ದೇಶಿಸಿರುವ ವಿಷಯ ಒಂದೇ ಒಂದು ಸನ್ನಿವೇಶಕ್ಕೆ ಸಂಬಂಧಪಟ್ಟಿರಬಹುದು. ಅಥವಾ ಅನೇಕ ಸನ್ನಿವೇಶಗಳನ್ನು ಒಳಗೊಂಡಿರಬಹುದು. ಜೀವನದ ಒಂದೇ ಒಂದು ಚಿತ್ರವನ್ನು ಚಿತ್ರಿಸಿರಬಹುದು. ಜೀವನದ ಅನೇಕ ಅಂಶಗಳು ಅದರಲ್ಲಿ ಬಂದಿರಬಹುದು. ಕಥೆ ನಡೆಯುವ ಕಾಲ ಒಂದೇ ದಿನದಲ್ಲಿ ಕೆಲವು ಗಂಟೆಗಳ ಅವಧಿಯಲ್ಲಿ ನಡೆದಿದ್ದಾಗಬಹುದು. ನಡುವೆ ವರ್ಷಗಳ ಅವಧಿಯೂ ಬರಬಹುದು. ಆದರೆ ಕಥೆಯ ವಸ್ತು, ಅಲ್ಲಿನ ಪಾತ್ರ ರಚನೆ ಅದರಲ್ಲಿನ ಆವರಣ ಎಲ್ಲವೂ ಒಂದೇ ಒಂದು

---

೧. ನರಸಿಂಹಮೂರ್ತಿ ಕೆ. ಕನ್ನಡ ಕಥೆಯ ಸ್ವರೂಪ ಪ್ರಬುದ್ಧ ಕರ್ನಾಟಕ, ೯೪೦, ಪು. ೨೧.
೨. ಗಿರಿಜಾಶಾಸ್ತ್ರೀ ಕಥಾಮಾನಸಿ, ಪು. ೧೪.

ಗುರಿಯನ್ನು ಮುಟ್ಟಿಸುವಂತೆ ಪರಿಪೋಷಕವಾಗಿದ್ದು ಓದುಗನಲ್ಲಿ ಒಂದೇ ಒಂದು ಪರಿಣಾಮವನ್ನು ಮೂಡಿಸುವಂತಿದ್ದರೆ ಅದು ಸಣ್ಣಕಥೆ ಎನ್ನಿಸಿಕೊಳ್ಳುತ್ತವೆ."[೧] ದೇಶಗಳಲ್ಲೂ ಎಲ್ಲಾ ಭಾಷೆಗಳಲ್ಲೂ, ಕಿವಿಯಿಂದ ಕಿವಿಗೆ ಹರಿದು ಬಂದಿದೆ. "ಕಥಾ ಎಂಬ ಪದ 'ಕಥ್' ಎಂಬ ಪದದಿಂದ ಬಂದಿದೆ. ಕಥ್ ಎಂದರೆ ಹೇಳು ಎಂದರ್ಥ. ಹಾಗೆ ಹರಿದು ಬಂದ ಕಥೆಗಳಲ್ಲಿ ಕಥಾ ವಸ್ತುವಿಗೆ ಹೆಚ್ಚು ಪ್ರಾಧ್ಯಾನ್ಯತೆ ಇರುವುದು."[೨]

ಸಣ್ಣ ಕತೆಯೆಂದರೆ ಕಥೆಯ ವಸ್ತು ಅಲ್ಲಿನ ಪಾತ್ರ ರಚನೆ, ಅದರಲ್ಲಿನ ಆವರಣ ಎಲ್ಲವೂ ಒಂದೇ ಒಂದು ಗುರಿಯನ್ನು ಮುಟ್ಟಿಸುವಂತೆ ಪರಿಪೋಷಕವಾಗಿದ್ದು ಓದುಗನಲ್ಲಿ ಒಂದೇ ಒಂದು ಪರಿಣಾ ವನ್ನು ಮೂಡಿಸುವಂತಿದ್ದರೇ ಅದು ಸಣ್ಣ ಕಥೆ ಎನಿಸಿಕೊಳ್ಳುತ್ತದೆ.[೩]

ಕನ್ನಡ ಸಣ್ಣ ಕಥೆಯ ಬೆಳವಣಿಗೆಯನ್ನು ಆಧುನಿಕ ಕನ್ನಡ ಸಾಹಿತ್ಯದ ನಾಲ್ಕು ಹಂತಗಳಾಗಿ ಗುರುತಿಸಬಹುದು. ಅವುಗಳೆಂದರೆ

೧) ನವೋದಯ

೨) ಪ್ರಗತಿಶೀಲ

೩) ನವ್ಯ

೪) ದಲಿತ ಬಂಡಾಯ

ಮೊದಲನೆಯದಾಗಿ ನಾವು ನವೋದಯ ಕಾಲಘಟ್ಟವನ್ನು ಗಮನಿಸಿದರೆ ನವೋದಯ ಕಾಲದಲ್ಲಿ ಮತ, ಧರ್ಮದ ಸಖಿಯಾಗಿದ್ದ ಸಾಹಿತ್ಯ ತಾನೇ ರಾಣಿಯಾಗಿ ಮೆರೆಯುವಂತಾಯಿತು. ದೇವತೆಗಳು, ಪೌರಾಣಿಕ ವ್ಯಕ್ತಿಗಳಿಗೆ ಬಹುಮಟ್ಟಿಗೆ ಮೀಸಲಾಗಿದ್ದ ಸಾಹಿತ್ಯ ಸಾಮಾನ್ಯ ವ್ಯಕ್ತಿಯ ಜೀವನಕ್ಕೂ ಪ್ರವೇಶಿಸುವಂತಾಯಿತು. ಹೊಸ ಹೊಸ ಸಾಹಿತ್ಯ ಪ್ರಕಾರಗಳು ಅವರತರಿಸಿದವು. ಭಾಷೆಗೆ ಹೊಸದೊಂದು ಸ್ವಾತಂತ್ರ್ಯ ಚೈತನ್ಯ ಹಾಗೂ ಲವಲವಿಕೆ ಬಂದಿತು.[೪]

ಹೀಗೆ ಹೊಸ ಸ್ವರೂಪ ಸಿದ್ಧಾಂತ ಹೊಂದಿದ್ದ ಸಣ್ಣಕತೆ ಕನ್ನಡದಲ್ಲಿ ಆವರಿಸಿತು. ಒಂದು ಅಥವಾ ಕೆಲವು ಘಟನೆಗಳನ್ನು ಒಂದಕ್ಕೊಂದು ಪೂರಕವಾಗಿ ಬರುವಂತೆ

---

೧. ಬೆಳ್ಳೂರು ಮೈಲಾರ ಶ್ರೀಕಂಠಯ್ಯನವರಿಗೆ ಅವರ ಶಿಷ್ಯರೂ, ಮಿತ್ರರೂ ಒಪ್ಪಿಸಿದ ಪ್ರಬಂಧಗಳ ಸಂಪುಟ – ಸಂಭಾವನೆ, ಪುಟ. ೩೪೪.

೨. ಅದೇ, ಪುಟ. ೩೪೯.

೩. ಅ.ನ.ಕೃ. ಕನ್ನಡದಲ್ಲಿ ಸಣ್ಣಕತೆಗಳು, ಜಯಕರ್ನಾಟಕ, ಪು. ೩೭೧.

೪. ಜಿ.ಎಸ್.ಸಿದ್ಧಲಿಂಗಯ್ಯ (ಸಂ.), ಸಾಲುದೀಪ, ಪು. ೩೮೦.

ಜೋಡಿಸಿ ಒಟ್ಟಾಗಿ ಬಂಧಿಸುವ ಕಥಾಹಂದರವೇ ಕತೆಯ ಪರಿಪೂರ್ಣತೆಗೆ ಕಾರಣವಾಗುತ್ತದೆ. ಗದ್ಯಭಾಷೆಯಿಂದ ನಿರೂಪಿತವಾಗುವ ಕತೆಗಳು ಅರ್ಥ ಕೆಡದಂತೆ ಅರ್ಥೈಸಿಕೊಳ್ಳಲು ಮತ್ತಷ್ಟು ವಿವರ ಬಯಸದಂತೆ ಪೂರ್ಣವಾಗಿದ್ದು ಚಿಕ್ಕ ಹಾಗೂ ಚೊಕ್ಕ ಕಥಾ ನಿರೂಪಣೆಯನ್ನು ಕತೆಗಳು ಹೊಂದಿರುತ್ತವೆ. ಹೀಗೆ ಮೌಖಿಕ ಪರಂಪರೆಯಿಂದ ಕತೆಗಳು ಹೇಳಲ್ಪಡುತ್ತಿದ್ದು ಇಂದಿಗೂ ಅವು ಉಳಿದುಕೊಳ್ಳಲು ಸಾಧ್ಯವಾಗಿದೆ. ಭಾರತದಲ್ಲಿ ಮೊದಲಿಗೆ ಬಂಗಾಳದಲ್ಲಿ ಆಧುನಿಕ ಸಣ್ಣ ಕತೆಗಳು ಕಾಣಿಸಿಕೊಂಡವು. ರವೀಂದ್ರನಾಥ್ ಠಾಕೂರ್, ಶರತ್‌ಚಂದ್ರ ಚಟರ್ಜಿ, ಶಾಂತಾದೇವಿ ಮುಂತಾದವರು ಕತೆಗಾರರಾಗಿ ಹೆಸರು ಪಡೆದರು. ಈ ಕಾಲಘಟ್ಟದಲ್ಲಿ ಸಣ್ಣ ಕಥೆಗೆ ಮಹತ್ವದ ಕೊಡುಗೆಯನ್ನು ಪ್ರಥಮವಾಗಿ ನೀಡಿದವರು ಪಂಜೆಮಂಗೇಶರಾಯರು. ೧೯೦೦ರ ಹೊತ್ತಿಗೆ ಮಂಗಳೂರಿನ 'ಸುವಾಸಿನಿ' ಮಾಸಿಕದಲ್ಲಿ ಅವರು "ನನ್ನ ಚಿಕ್ಕತಾಯಿ', 'ನನ್ನ ಚಿಕ್ಕ ತಂದೆ', ಭಾರತ ಶ್ರವಣ', 'ಕಮಲಾಪುರದ ಹೊಟೇಲ್‌ನಲ್ಲಿ', ನನ್ನ ಹೆಂಡತಿ ೧೯೦೦ ರಿಂದ ೧೯೦೩ರವರೆಗೆ ಪ್ರಕಟಗೊಂಡವು.

ಎಂ.ಎನ್.ಕಾಮತ್, ಕೆರೂರು ವಾಸು ದೇವಾಚಾರ್ಯರು, ಎಂ.ವಿ.ಸೀತಾ-ರಾಮಯ್ಯ, ಶರ್ಮ ಮುಂತಾದವರು ಕತೆಗಾರರಾಗಿ ಬರವಣಿಗೆ ಪ್ರಾರಂಭಿಸಿದರು. ೧೯೨೦ರ ಹೊತ್ತಿಗೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರು ತಮ್ಮ ಸಣ್ಣಕತೆಗಳನ್ನು ಒಟ್ಟುಗೂಡಿಸಿ 'ಕೆಲವು ಸಣ್ಣಕತೆಗಳು' ಸಂಕಲನ ಪ್ರಕಟಿಸಿದರು. ಸರಳವಾಗಿ, ಚಿಕ್ಕದಾಗಿ, ನಾನಾ ಘಟನೆಗಳನ್ನು ತಂತ್ರ, ಶೈಲಿಯ ದೃಷ್ಟಿಯಿಂದ ಬರೆಯತೊಡಗಿ ಅನೇಕ ಲೇಖಕರುಗಳು ಕಥಾ ಸಾಹಿತ್ಯಕ್ಕೆ ತಿರುಗುವಂತೆ ಮಾಡಿದುದರಿಂದ ಸಾವಿರಾರು ಓದುಗರುಗಳು ಸೃಷ್ಟಿಗೊಂಡಿದ್ದರಿಂದ ಮಾಸ್ತಿಯವರನ್ನು 'ಮಾಸ್ತಿ ಕನ್ನಡದ ಆಸ್ತಿ' ಎಂದು 'ಸಣ್ಣ ಕತೆಯ ಪ್ರವರ್ತಕ' ಎಂದೂ ಕರೆಯುತ್ತಾರೆ. ಮಾಸ್ತಿಯ ಬಗ್ಗೆ ವೀಣಾ ಶಾಂತೇಶ್ವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. 'ಮಾಸ್ತಿಯವರು ಆರಂಭದಿಂದಲೂ ನನಗೆ ಬಹಳ ಪ್ರಿಯವಾದ ಕಥೆಗಾರರು ಅವರ ಕಥೆಗಳನ್ನು ನಾನು ಇವತ್ತಿನವರೆಗೂ ತಿರುತಿರುಗಿ ಓದುತ್ತಲೇ ಇದ್ದೇನೆ"[೧]

ಅನಕೃರವರ ಅಭಿಪ್ರಾಯದಲ್ಲಿ ಕಥನಕಲೆ ಇಷ್ಟು ಪ್ರಸಿದ್ಧಿಯಾಗಲು ಕಾರಣ ಹೇಳದೆ ಧರ್ಮವ ಕಲಿಸುವ ಗುರುತ್ವ' ಅವರ ಪ್ರಕಾರ "ಕಥೆಯಿಲ್ಲದ ಕಾವ್ಯ ಕಣ್ಣಿಲ್ಲದ ಮನುಷ್ಯನಿದ್ದಂತೆ"[೨] ಎಂದಿದ್ದಾರೆ. ಮಾಸ್ತಿಯವರ ನಂತರ ಅತ್ಯಂತ ಪ್ರಮುಖರಾದ

೧. ಪ್ರಜಾವಾಣಿ (ಭೂಮಿಕಾ) ಶನಿವಾರ ೩೦ನೇ ಏಪ್ರಿಲ್ ೨೦೧೧, ಪು. ೨.

೨. ಅ.ನ.ಕೃ. ಕನ್ನಡದಲ್ಲಿ ಸಣ್ಣಕತೆಗಳು, ಜಯಕರ್ನಾಟಕ, ಪು. ೩೭೧.

ಕತೆಗಾರರೆಂದರೆ ಆನಂದ ಮತ್ತು ಕೆ.ಗೋಪಾಲಕೃಷ್ಣರಾವ್. ಮಾಸ್ತಿಯಂತೆಯೇ ಸಣ್ಣ ಕಥೆಯ ಮೇಲೆ ಗಮನವನ್ನು ಹರಿಸಿದ್ದವರು.[೧]

ನವೋದಯ ಸಣ್ಣಕಥೆಯ ಗಣ್ಯರೊಲ್ಲಬ್ಬರು ಕುವೆಂಪು ಇವರ "ಸಂನ್ಯಾಸಿ ಮತ್ತು ಇತರ ಕಥೆಗಳು" ಮತ್ತು "ದೇವರು ಮತ್ತು ಇತರ ಕಥೆಗಳು" ಎಂಬ ಎರಡು ಕಥಾ ಸಂಕಲನಗಳು ಪ್ರಕಟವಾದವು.

ಕಡೆಂಗೋಡ್ಲು ಶಂಕರಭಟ್ಟ, ಬೆಟಗೇರಿ ಕೃಷ್ಣಶರ್ಮ, ರಂ.ಶ್ರೀ.ಮುಗಳಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎ.ಆರ್.ಕೃಷ್ಣಶಾಸ್ತ್ರಿಗಳು ಹಳ್ಳಿಯ ಜೀವನ ಚಿತ್ರಣವನ್ನು ತಮ್ಮ ಕತೆಗಳಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ನವೋದಯ ಕಾಲದ ಸಂದರ್ಭದಲ್ಲಿ ಮಹಿಳೆಯರೂ ಸಣ್ಣಕಥೆಗಳನ್ನು ಬರೆದಿದ್ದಾರೆ. ಆರ್.ಕಲ್ಯಾಣಮ್ಮ ಅವರ ಪ್ರಿಯಂವದಾ ಸಂಕಲನ, ಸ್ತ್ರೀಯರ ಆದರ್ಶ, ತ್ಯಾಗ, ನೀತಿ ಇವುಗಳು ಇವರ ಕಥಾ ವಸ್ತುಗಳಾಗಿವೆ. ಕೊಡಗಿನ ಗೌರಮ್ಮ ಇವರ ಕಥಾಸಂಕಲನಗಳು ಚಿಗುರು ಮತ್ತು ಕಂಬನಿ ಇವರು ಸಹ ನವೋದಯ ಕಾಲದಲ್ಲಿ ಬರೆಯುತ್ತಿದ್ದ ಪ್ರಮುಖ ಕಥೆಗಾರರಾಗಿದ್ದಾರೆ.

ಗೌರಮ್ಮನವರು ಹೆಣ್ಣಿನ ಮನಸ್ಸಿನ ತುಮುಲಗಳನ್ನು, ಬಾಳಿನ ತೊಡರುಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವರಲ್ಲದೆ ಹೆಚ್.ವಿ.ಸಾವಿತ್ರಮ್ಮ, ಎಂ.ಕೆ. ಇಂದಿರಾ, ಶಾಂತಾದೇವಿ ಕಣವಿ, ಗೀತ ಕುಲಕರ್ಣಿ ಶ್ಯಾಮಲಾದೇವಿ, ನಿರುಪಮಾ, ಪ್ರೇಮಾಭಟ್ ಮೊದಲಾದವರು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ.

ಪ್ರಗತಿಶೀಲ ಕಾಲಘಟ್ಟದಲ್ಲಿಯೂ ಸಹ ಅನೇಕ ಕಥೆಗಳು ರಚನೆಯಾದವು. ಈ ಕಾಲಘಟ್ಟದಲ್ಲಿ ಅನೇಕ ಸುಪ್ರಸಿದ್ಧ ಲೇಖಕರು ಬಂದರು. ಅವರಲ್ಲಿ ಅ.ನ.ಕೃ. ನಂತರ ತ.ರಾ.ಸು, ನಿರಂಜನ, ಚದುರಂಗ, ಕಟ್ಟೀಮನಿ ಮುಂತಾದವರು ಪ್ರಮುಖರಾಗಿದ್ದಾರೆ. ನಿರಂಜನರ 'ರಕ್ತ ಸರೋವರ' ಮತ್ತು 'ಸಂಧಿಕಾಲ', 'ಕೊನೆಯ ಗಿರಾಕಿ' ಯಶಸ್ವಿಯಾದ ಕಥಾ ಸಂಕಲನಗಳು. ಬಸವರಾಜ ಕಟ್ಟೀಮನಿಯವರ ಮೊದಲ ಕಥಾ ಸಂಕಲನ 'ಕಾರವಾನ್' ೧೯೪೪ರಲ್ಲಿ ಪ್ರಕಟವಾಯಿತು. 'ಸುಂಟರಗಾಳಿ', 'ಸೈನಿಕನ ಹೆಂಡತಿ', 'ಸೆರೆಯಿಂದ ಹೊರಗೆ', 'ಹುಲಿಯಣ್ಣನ ಮಗಳು', 'ಗುಲಾಬಿ ಹೂ', 'ಆಗಸ್ಟ್ ಒಂಭತ್ತು' ಮುಂತಾದುವು.

೧. ಎಂ.ಎಸ್.ವೇದಾರವರ ಸಣ್ಣಕತೆಗಳು, ಈ ತುಕ ಸಂವಹನ, ೨೦೧೦, ಪು. ೧೯.

ಮತ್ತೊಬ್ಬ ಪ್ರಮುಖ ಪ್ರಗತಿಶೀಲ ಲೇಖಕರೆಂದರೆ ತ.ರಾ.ಸು.ರವರು ಇವರ ಮೊದಲ ಕಥಾ ಸಂಕಲನ 'ರೂಪಸಿ'. ೧೯೪೬ರಲ್ಲಿ ಪ್ರಕಟವಾಯಿತು. 'ತೊಟ್ಟಿಲು ತೂಗಿತು', 'ಗಿರಿಮಲ್ಲಿಗೆಯ ನಂದನದಲ್ಲಿ', 'ಇವೇ ನಿಜವಾದ ಸಂಪತ್ತು', 'ಮೂರು ಮತ್ತೊಂದು' ಹೆಸರಿನಲ್ಲಿ ಪ್ರಮುಖವಾದವುಗಳಾಗಿವೆ."[೧]

ಪ್ರಗತಿಶೀಲರ ನಂತರ ನವ್ಯ ಸಾಹಿತ್ಯ ಕಾಲಿಟ್ಟಿತು. ಇವರು ನವೋದಯದವರ ಆದರ್ಶ. ಪ್ರಗತಿಶೀಲರ ಆವೇಶದ ಬಗೆಗೆ ಅನುಮಾನದಿಂದ ನೋಡುವಂತಹ ದೃಷ್ಟಿಯನ್ನು ಬೆಳೆಸಿಕೊಂಡರು. ಇವರ ಕಥೆಯ ಮುಖ್ಯ ಲಕ್ಷಣ ತಾತ್ವಿಕ ಅಂತರ್ಮುಖತೆ ಎಂದು ಹೇಳಬಹುದು. ಇವರಲ್ಲಿ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಜಿ.ಎಸ್.ಸದಾಶಿವ, ತೇಜಸ್ವಿ ಪ್ರಮುಖರಾಗಿದ್ದಾರೆ.

ಯು.ಆರ್.ಅನಂತಮೂರ್ತಿಯವರ 'ಪ್ರಶ್ನೆ ಮತ್ತು ಮೌನ' ಸಂಕಲನಗಳು ಮಹತ್ವದ್ದಾಗಿದ್ದು ಈ ಕಥೆಗಳನ್ನು ೨ ಗುಂಪುಗಳನ್ನಾಗಿ ಮಾಡಬಹುದು. ಇವರ ನಂತರ ಇವರ ಸಮಕಾಲೀನರಾದ ಯಶವಂತ ಚಿತ್ತಾಲರು. ಇವರು ಕಾಪ್ಕಾ ಮಾದರಿಯ ಕೆಲವು ಪ್ಯಾಂಟಸಿಗಳನ್ನು ಬರೆದಿದ್ದಾರೆ. ಇವರ ಕತೆಗಳು ಹೆಚ್ಚು ಕಲಾತ್ಮಕವಾಗಿವೆ. ಹಾಗೂ ಇವರು ಅಪ್ರತಿಮ ಕತೆಗಾರರಾಗಿದ್ದಾರೆ. 'ಸಂದರ್ಶನ' ಅಬೋಲಿನ 'ಆಟ' ಮುಂತಾದ ಕಥಾ ಸಂಗ್ರಹಗಳು ಹಲವು ಕಥೆಗಳಲ್ಲಿ ನಮ್ಮನ್ನು ತೀವ್ರ ತರವಾಗಿ ಕಾಡುವ ವಸ್ತುವಾಗಿವೆ. ಕಥೆಯಾದಳು ಹುಡುಗಿ (೧೯೪೦) 'ತಮಟೆಗೆ ಬಂದ ಕಿಂದರಜೋಗಿ' 'ಸಿದ್ಧಾರ್ಥ' ಮುಂತಾದವುಗಳಲ್ಲಿ ಹೆಚ್ಚಿನ ಮಟ್ಟದ ಚಿಂತನೆಯಿಂದ ಕೂಡಿದ ಅನುಭವದ ಪರಿಶೋಧನೆಯನ್ನು ಕಾಣಬಹುದು.

ನವ್ಯ ಕತೆಗಾರರಲ್ಲಿ ಪಿ.ಲಂಕೇಶರು ಪ್ರಮುಖರಾಗಿದ್ದಾರೆ. ಇವರ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', 'ನಾನಲ್ಲ', 'ಕಲ್ಲು ಕರಗುವ ಸಮಯ' ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, 'ಉಲ್ಲಂಘನೆ' ಮುಂತಾದವುಗಳು ಇವರ ಕತೆಗಳಲ್ಲಿ ಪ್ರಮುಖವಾಗಿ ಮನುಷ್ಯನ ದುಷ್ಟ ನಡವಳಿಕೆ ಸಣ್ಣತನದ ಅನಾವರಣವನ್ನು ಕಾಣಬಹುದು.

ನವ್ಯ ಕತೆಗಾರರಲ್ಲಿ ಮತ್ತೊಂದು ಪ್ರಮುಖವಾದ ಹೆಸರೆಂದರೆ ಪೂರ್ಣಚಂದ್ರ ತೇಜಸ್ವಿ ಯವರು. ಅವರು ತಮ್ಮದೇ ಆದ ಭಿನ್ನ ನೆಲೆಯಲ್ಲಿ ಕತೆಗಳನ್ನು ರಚಿಸಿದ್ದಾರೆ. ಸಾಮಾಜಿಕ ದೃಷ್ಟಿಕೋನದ ಬದುಕನ್ನು ತಮ್ಮ 'ಕಿರಂಗೂರಿನ ಗಯ್ಯಾಳಿಗಳು', 'ಹುಲಿಯೂರಿನ ಸರಹದ್ದು,' ಅಬಚೂಲಿನ ಪೋಸ್ಟಾಪೀಸು'ಗಳಲ್ಲಿ ಚಿತ್ರಿಸಿದ್ದಾರೆ.

---

೧. ಜಿ.ಎಸ್.ಸಿದ್ಧಲಿಂಗಯ್ಯ (ಸಂ) ಸಾಲುದೀಪ, ಪು. ೩೮೦.

ನವ್ಯ ಪಂಥದ ನಂತರ ಕೊನೆಯದಾಗಿ ಬಂದಂತಹ ಯುಗವೇ ದಲಿತ ಬಂಡಾಯ ಸಾಹಿತ್ಯ ಇಲ್ಲಿ ದೇವನೂರು ಮಹದೇವ, ಕಾಳೇಗೌಡ ನಾಗವಾರ, ಅರವಿಂದ ಮಾಲಗತ್ತಿ, ಬೆಸಗರಗಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಮೊಗಳ್ಳಿ ಗಣೇಶ್, ಸಾರಾ ಅಬೂಬಕ್ಕರ್, ಬಾನು ಮಸ್ತಾಕ್ ಮುಂತಾದವರು. 'ಮಾರಿಕೊಂಡರು', 'ಅಮಾಸ', 'ಮೂಡಲ ಸೀಮೇಲಿ ಕೊಲೆಗಿಲೆ', ಮುಂತಾದವು ಇಲ್ಲಿನ ಪ್ರಮುಖ ಕತೆಗಳಾಗಿವೆ.

ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಲೋಕಕ್ಕೆ ಸೇವೆ ಸಲ್ಲಿಸಿದವರಲ್ಲಿ ಲೇಖಕಿಯರು ತಮ್ಮದೇ ಆದ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ನವೋದಯ ಕಾಲದಲ್ಲಿ ಕತೆಗಳನ್ನು ರಚನೆ ಮಾಡಿದಂತಹ ಮೊದಲನೇ ತಲೆಮಾರಿನ ಲೇಖಕಿಯರಾದ ಕಲ್ಯಾಣಮ್ಮ, ಸರಸ್ವತಿ ಬಾಯಿ ರಾಜವಾಡೆ ಕೊಡಗಿನ ಗೌರಮ್ಮ, ಹೆಚ್.ವಿ. ಸಾವಿತ್ರಮ್ಮ, ಶ್ಯಾಮಲಾದೇವಿ, ಸುನಂದ ಬೆಳಗಾಂಕರ್, ಸಿ.ಎನ್.ಜಯಲಕ್ಷ್ಮೀದೇವಿ, ಲೀಲಾಬಾಯಿಕಾಮತ್ ಮುಂತಾದವರಲ್ಲದೆ ೩ನೇ ತಲೆಮಾರಿನ ಲೇಖಕಿಯರಾದ ತ್ರಿವೇಣಿ, ಎಂ.ಕೆ.ಇಂದಿರಾ, ಅನುಪಮಾ ನಿರಂಜನ, ಶಾಂತಾದೇವಿ ಕಣವಿ, ಆರ್ಯಾಂಭಪಟ್ಟಾಭಿ, ಪ್ರೇಮಾಭಟ್, ಜಯಲಕ್ಷ್ಮಿ ಈಚಲೂರು, ಕಮಲಹಂಪನಾ, ಹೆಚ್.ಎಸ್. ಪಾರ್ವತಿ, ವಾಣಿ ಮುಂತಾದ ಲೇಖಕಿಯರು ಸಹ ಹಲವಾರು ಕತೆಗಳನ್ನು ರಚಿಸಿದ್ದಾರೆ.

ಅಂತೆಯೇ ಕತೆಗಳ ರಚನೆಯಲ್ಲಿ ೩ನೇ ತಲೆಮಾರಿನ ಲೇಖಕಿಯರಾದ ವೈದೇಹಿ, ವೀಣಾಶಾಂತೇಶ್ವರ, ಸಾರಾ ಅಬೂಬಕರ್, ಬಾನುಮಸ್ತಾಕ್, ನೇಮಿಚಂದ್ರ, ಮಾಲತಿಪಟ್ಟಣಶೆಟ್ಟಿ, ಗಂಗಾಪಾದೇಕರ್, ಜಿ.ಟಿ.ಜಾಹ್ನವಿ, ಬಿ.ಟಿ.ಲಲಿತಾನಾಯಕ್, ಮಿತ್ರ ವೆಂಕಟ್ರಜಿ, ಎಂ.ಎಸ್. ವೇದಾ ಮುಂತಾದವರು.

ಹೀಗೆ ೩ನೇ ತಲೆಮಾರಿನ ಲೇಖಕಿಯರು ತಮ್ಮ ಕತೆಗಳಲ್ಲಿ ಹೆಣ್ಣಿನ ಪಾತ್ರಗಳನ್ನು ಚಿತ್ರಿಸುತ್ತಾ ಅವಳು ಅನುಭವಿಸುವ ಯಾತನೆ, ಸಮಾಜದಲ್ಲಿ ಯಾವ ರೀತಿಯ ಬಂಧನಕ್ಕೆ ಆಕೆ ಒಳಗಾಗಿದ್ದಾಳೆ. ಅವಳು ತನ್ನ ಈ ಶೋಚನೀಯ ಶೋಷಣೆಯ ಸ್ಥಿತಿಯಿಂದ ಹೇಗೆ ಹೊರಬಂದು ತಾನು ಸ್ವತಂತ್ರ ಜೀವನವನ್ನು ನಡೆಸಬಹುದು ಎಂಬುದನ್ನು ತನ್ನ ಕತೆಗಳ ಮೂಲಕ ವ್ಯಕ್ತಪಡಿಸುತ್ತಾ ಹೋಗುತ್ತಾರೆ. ಇಲ್ಲಿ ವೇದಾರವರ ಕತೆಗಳಲ್ಲಿ "ಹೆಣ್ಣು ಯಾವಾಗಲೂ ಪರರ ಆಶ್ರಯದಲ್ಲಿ" ಎಂಬ ಮಾತಿದೆ. ಆದರೆ ಹೆಣ್ಣು ಬೇರೆಯವರ ಆಶ್ರಯದಲ್ಲಿಯೇ ಬದುಕಬೇಕೆಂಬ ಭಾವನೆಯನ್ನು ತೊರೆದು ತನಗಾಗಿ ಬಾಳುವುದನ್ನು ರೂಢಿಸಿಕೊಳ್ಳಬೇಕಾದ ಅಗತ್ಯವನ್ನು ವೇದಾರ ಕಥೆಗಳು ವಿವೇಚಿಸುತ್ತವೆ.[೧]

---

೧. ಎಂ.ಎಸ್.ವೇದಾರ ಸಣ್ಣ ಕತೆಗಳು ಈ ತನಕ, ಸಂವಹನ, ಮೈಸೂರು, ೨೦೧೦., ಪು. ೧೯.

ವೇದಾರವರ ಕತೆಗಳು ಸ್ತ್ರೀ ಶೋಷಣೆಯ ವಿವಿಧ ನೆಲೆಗಳನ್ನು ಹುಡುಕುವುದರ ಜೊತೆಗೆ ಅಲ್ಲಿನ ದಲಿತ ಪಾತ್ರಗಳ ಬವಣೆಗಳನ್ನು ಚೆನ್ನಾಗಿ ಅತ್ಯಂತ ಸೂಕ್ಷ್ಮವಾಗಿ ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ.

ಹಾಗಾಗಿ ನಾನು ಈ ನಿಯೋಜಿತ ನಿಬಂಧಕ್ಕಾಗಿ ಎಂ.ಎಸ್.ವೇದಾರವರ ಕತೆಗಳನ್ನು ಆಯ್ದುಕೊಂಡೆನು.

ಅಧ್ಯಾಯ – ೪

ಡಾ. ಎಂ.ಎಸ್.ವೇದಾರವರ ಕಥಾಸಂಕಲನಗಳ ಸ್ತ್ರೀ ಪಾತ್ರ ಚಿತ್ರಣ : ವಿಶ್ಲೇಷಣೆ

ಆಧುನಿಕ ಕನ್ನಡ ಸಾಹಿತ್ಯದ ಕತೆಗಾರ್ತಿಯರಲ್ಲಿ ಮೂರನೇ ತಲೆಮಾರಿನ ಲೇಖಕಿಯರಲ್ಲಿ ಎಂ.ಎಸ್.ವೇದಾ ಕೂಡ ಒಬ್ಬರು. ಇವರು ಸ್ತ್ರೀವಾದಿ ಚಿಂತನೆಗಳು ಪರಿಪಕ್ವವಾಗಿದ್ದ ಸಂದರ್ಭದಲ್ಲಿ ಕಥಾ ಲೋಕಕ್ಕೆ ಪಾದಾರ್ಪಣೆ ಮಾಡಿದಂತಹ ಲೇಖಕಿಯಾಗಿದ್ದು ನಂಜನಗೂಡಿನ ಸುತ್ತಮುತ್ತಲಿನ ಗ್ರಾಮೀಣ ಪರಿಭಾಷೆಯನ್ನು ತಮ್ಮ ಹೆಚ್ಚಿನ ಕತೆಗಳಲ್ಲಿ ಬಳಸಿದ್ದಾರೆ.

ಇವರು ಕಥಾ ಸಂಕಲನದ ಸ್ತ್ರೀಪಾತ್ರ ಚಿತ್ರಣವನ್ನು ಅಧ್ಯಯನದ ದೃಷ್ಟಿಯಿಂದಾಗಿ ವಿಭಾಗ ಮಾಡಿಕೊಳ್ಳಲಾಗಿದೆ.


೧) ಮೆದು ಧೋರಣೆಯ ಸಾಂಪ್ರದಾಯಿಕ ನಿಲುವಿನ ಸ್ತ್ರೀಪಾತ್ರಗಳು

೨) ಉಗ್ರಸ್ವರೂಪ ನಿರ್ಧಾರ, ತಳೆಯುವ ಗ್ರಾಮೀಣ ಸ್ತ್ರೀಪಾತ್ರಗಳು

೩) ಆಧುನಿಕ ವಿವೇಚನೆಯುಳ್ಳ ಸ್ತ್ರೀಪಾತ್ರಗಳು

೧) ಮೆದು ಧೋರಣೆಯ ಸಾಂಪ್ರದಾಯಿಕ ನಿಲುವಿನ ಸ್ತ್ರೀಪಾತ್ರಗಳು

ಎಂ.ಎಸ್.ವೇದಾರ **'ಪ್ರೀತಿ ಮತ್ತು ಸಾವು'** ಕಥಾಸಂಕಲನದಲ್ಲಿನ **ಉರಿದವರು** ಕತೆಯಲ್ಲಿ ಬರುವ ಅನುರಾಧ, ಜಯಂತಿ ಪಾತ್ರಗಳು ಶೋಷಣೆಯ ವಿರುದ್ಧ ದನಿಯೆತ್ತಲು ಹೋಗಿ 'ಬಡವನ ಕೋಪ ದವಡೆಗೆ ಮೂಲ' ಎಂಬ ಮಾತಿಗೆ ಪೂರಕವಾಗಿ ನಿಲ್ಲುತ್ತದೆ. ಜಯಂತಿ ಎಂಬ ವಿದ್ಯಾರ್ಥಿನಿ ಕಾಲೇಜಿನಲ್ಲಿ ಓದುತ್ತಿರಬೇಕಾದರೆ ಅಲ್ಲಿಯೇ ಕೆಲಸ ಮಾಡಿಕೊಂಡಿದ್ದ ಚಂದ್ರಕಾಂತಯ್ಯ ಆ ಕಾಲೇಜನ್ನು ನಡೆಸುತ್ತಿದ್ದ ಸ್ವಾಮೀಜಿಗೆ ಹತ್ತಿರದವನಾಗಿದ್ದನು. ಇವನು ಜಯಂತಿಯನ್ನು ಸ್ಟಾಫ್ ರೂಮಿನಲ್ಲಿ ಕೈಹಿಡಿದು ತಪ್ಪು ಮಾಡುತ್ತಾನೆ. ತಪ್ಪು ಮಾಡಿದ ಚಂದ್ರಕಾಂತಯ್ಯ ಖುಲಾಸೆಗೊಂಡು ಹೊರಬಂದ. ಆದರೆ ತಪ್ಪು ಮಾಡದ ನಿರ್ದೋಷಿ ಜಯಂತಿ ಕೆಟ್ಟ ಅವಹೇಳನಕ್ಕೆ, ಅಪವಾದಕ್ಕೆ ಈಡಾಗಿ ಬಂದ ಗಂಡುಗಳ್ಯಾರೂ ಅವಳನ್ನು ಒಪ್ಪದೇ ಇದ್ದಾಗ ಕೊನೆಗೆ ಷಂಡ ವ್ಯಕ್ತಿತ್ವದವನನ್ನು ಮದುವೆಯಾಗುತ್ತಾಳೆ. ಪರಿಸ್ಥಿತಿಯೊಂದಿಗಿನ ಅನುಸಂಧಾನ ಗುಣವನ್ನು ಅವಳ ಈ ಪಾತ್ರದಲ್ಲಿ ಗುರುತಿಸಬಹುದು.



ಮೆದುಧೋರಣೆ ಸ್ತ್ರೀಪಾತ್ರಕ್ಕೆ ಉದಾಹರಣೆಯಾಗಿ

ಅನುರಾಧಾಮಿಸ್ ತಂದೆಯ ಮರಣದ ನಂತರ ತಾಯಿ ಪಾರ್ಶ್ವವಾಯುವಿಗೆ ತುತ್ತಾದ ಸಂದರ್ಭದಲ್ಲಿ ಕೆಲಸಕ್ಕೆ ಸೇರಿದವಳು ಜಯಂತಿಯಂತೆಯೇ ಚಂದ್ರಕಾಂತಯ್ಯನ ಕಾಮುಕ ದೃಷ್ಟಿಗೆ ಗುರಿಯಾಗಿ ಆತಂಕಕ್ಕೆ ಒಳಗಾಗುತ್ತಾಳೆ. ವಿದ್ಯಾರ್ಥಿ ಪ್ರತಿನಿಧಿ ಶಂಕರೇಗೌಡ ಮತ್ತು ಅವನ ಗೆಳೆಯರು ಹೋರಾಟ ಮಾಡಿ ನಿಮಗೆ ನ್ಯಾಯ ದೊರಕಿಸಿ ಕೊಡುತ್ತೇವೆಂದು ಹೇಳಿದಾಗ ಅವರಿಗೆ ಬುದ್ಧಿವಾದ ಹೇಳುತ್ತಾಳೆ. "ಇದೆಲ್ಲಾ ಗಲಾಟೆ ಯಾಕ್ರಪ್ಪ? ಚಂದ್ರಕಾಂತಯ್ಯ ಕೊಚ್ಚೆ ಅಂತ ಗೊತ್ತು: ಅದನ್ಯಾಕೆ ಪುನಃ ಕೆದಕಬೇಕು. ಕೆದಕ್ತಾ ಹೋದರೆ ಕೊಚ್ಚೆಯಿಂದ ನಮ್ಮ ಬಟ್ಟೆ ಕೆಡುತ್ತೆ"[೧] ಎಂದು ಹೇಳಿದಾಗ ಸದಾನಂದ "ನರಿ ಜೊತೆ ಹೊಡೆದಾಡಿ ಗೆಲವು ಸಾಧಿಸುವುದಕ್ಕಿಂತ ಹುಲಿ ಜೊತೆ ಹೋರಾಡಿ ಮೈ ಪರಚಿಕೊಳ್ಳೋದು ಮೇಲು ಅಂತ ಸದಾ ಹೇಳುತ್ತಿದ್ದ ನೀವೆ ಆ ನರಿಗೆ ಹೆದರ್ತಿರಾ" ಎಂದು ಕೇಳಿದಾಗ ಅನುರಾಧ "ಆದರ್ಶಗಳಿಗೂ ವಾಸ್ತವ ಜೀವನಕ್ಕೂ ಅಜಗಜಾಂತರ ವ್ಯತ್ಯಾಸ ಇದೆ ಸದಾನಂದ ಆದರ್ಶಗಳೇನಿದ್ದರೂ ತರಗತಿಯಲ್ಲಿ ಪ್ಲಾಟ್‌ಫಾರಂ ಮೇಲೆ ನಿಂತು ಹೇಳಿ ನಿಮ್ಮಂಥ ವಿದ್ಯಾರ್ಥಿಗಳ ತಲೆ ಕೆಡಿಸೋಕಷ್ಟೇ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ, ಪ್ರೀತಿ ಮತ್ತು ಸಾವು, ಉರಿದವರು, ಪು. ೫೪



ಸಾಧ್ಯ. ಆದರೆ ವಾಸ್ತವ ಜೀವನ"[1] ತಮ್ಮನ್ನು ತಾವೇ ಪ್ರಶ್ನಿಸಿಕೊಂಡು ತಾರಸಿಯ ಕಡೆ ಮುಖ ಎತ್ತುತ್ತಾರೆ.

"ಜೀವನದಲ್ಲಿ ನನಗಂತಹ ಆದರ್ಶಗಳೇನೂ ಇಲ್ಲ. ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಬಂಧು-ಬಳಗ ಯಾರೂ ಇಲ್ಲದ ನನಗೆ ತಾಯೊಯೊಬ್ಬರೇ ಆಧಾರ. ಬಿದ್ದು ಹೋಗುವ ಮರ ಬೀಸಿ ಹೋಗುವ ಗಾಳಿಯಂತಹ ನನ್ನಂಥ ಅಸಹಾಯಕ ಹೆಣ್ಣಿಗಾಗಿ ನೀವು ಯಾಕಾದರೂ ಹೋರಾಟ ಮಾಡ್ತೀರಪ್ಪಾ ನನಗಾಗಿ ನೀವು ನಿಮ್ಮ ಜೀವನದ ಭವಿಷ್ಯನಾ ಹಾಳು ಮಾಡಿಕೊಳ್ಳಬೇಡಿ ಸ್ವಾಮೀಜಿಗೆ ಹೇಳಿ ನಾನೇ ಟ್ರಾನ್ಸ್‌ಫರ್‌ಗೆ ಪ್ರಯತ್ನ ಪಡ್ತಿನಿ"[2] ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತ-ಪಡಿಸುತ್ತಾಳೆ.

ಮುಂದೆ ಚಂದ್ರಕಾಂತಯ್ಯನವರ ಕಡೆಯವರು ಅನುರಾಧಳಿಗೆ ಕೆಲಸವಿಲ್ಲದಂತೆ ಮಾಡಿ ಅವಳ ತಾಯಿಯನ್ನು ಸಾಯಿಸುವ ಬೆದರಿಕೆ ಹಾಕಿದಾಗ ಅನುರಾಧ ಹೆದರಿ ಊರು ಬಿಟ್ಟು ಹೊರಡುತ್ತಾಳೆ. ಬಸ್‌ಸ್ಟ್ಯಾಂಡಿನಲ್ಲಿ ಸಿಕ್ಕ ಸುರೇಶನ ಜೊತೆ ಅನುರಾಧ "ಈಗ ನನಗೆ ಅನ್ನ, ಬಟ್ಟೆ, ಮನೆಗಿಂತ ನನ್ನ ತಾಯಿ ಪ್ರಾಣ, ನನ್ನ ಮಾನ ಹೆಚ್ಚಾಗಿದೆ. ಶಂಕರೇಗೌಡ ಸಿಕ್ಕಿದರೆ ಈ ಹತಭಾಗಿನಿ ಅನುರಾಧನ್ನ ಪ್ರೀತಿಸು ಕೃಪೆ ಮಾಡೋಕೆ ಹೇಳಿ"[3] ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ.

ಪರಿಸ್ಥಿತಿಯ ಒತ್ತಡ ಅಸಹಾಯಕತೆಯ ಹೆಣ್ಣಾಗಿ ಈ ಕತೆಯಲ್ಲಿನ ಅನುರಾಧ ಕಂಡುಬರುತ್ತಾಳೆ. ಶೋಷಣೆಯ ವಿರುದ್ಧ ಹೋರಾಡುವ ಹೆಣ್ಣಾಗದೆ ಪಲಾಯನ ವಾದಿ ಹೆಣ್ಣಾಗಿ ಕಂಡುಬರುತ್ತಾಳೆ.

ಇವರ **ಕಪ್ಪು ಚರಿತ್ರೆಯ ಬಿಳಿಟಿಪ್ಪಣಿ** ಕತೆಯಲ್ಲಿನ ಶ್ರೀದೇವಿ ದೇವಸ್ಥಾನದ ಅರ್ಚಕ ನಾರಾಯಣಭಟ್ಟರ ಮಗಳು, ಇವಳು ಮೃದು ಸ್ವಭಾವದ ಹೆಣ್ಣಾಗಿದ್ದಳು. ಇವಳು ನಾಗೇಶ್‌ಭಟ್ ಎಂಬಾತ ತುಂಬಾ ಸುಂದರ ಯುವಕ ಅಸಿಸ್ಟೆಂಟ್ ಇಂಜನಿಯರ್ ಆಗಿ ಅ ಊರಿಗೆ ಬಂದವನು ಶ್ರೀದೇವಿ ಸೌಂದರ್ಯಕ್ಕೆ ಮನಸ್ಸು ನೀಡಿ ಮದುವೆಯಾಗಲು ಬಯಸಿದಾಗ ಶ್ರೀದೇವಿ ಒಪ್ಪುವುದಿಲ್ಲ. ಅವನು ಬೇರೆ ಊರಿಗೆ ತೆರಳಿದಾಗ ಅವನನ್ನು ಅವಳು ಪ್ರೀತಿಸತೊಡಗುತ್ತಾಳೆ. ನಾಗೇಶ್‌ಭಟ್‌ಗೆ ವರ್ಗಾವಣೆ ಆಗಿದೆ ಮತ್ತೆ ಬರುವುದಿಲ್ಲವೆಂದು ತಿಳಿದಾಗ "ನೋಡಿದೆಯಾ ಬೇಗಂ ಹಳ್ಳಿ ಹುಡುಗಿ:

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ, ಪ್ರೀತಿ ಮತ್ತು ಸಾವು, ಉರಿದವರು, ಪು. ೫೪.

೨. ಅದೇ,

೩. ಅದೇ, ಪು. ೬೧

ಒಂದು ಕೈ ನೋಡೋಣ ಅಂದುಕೊಂಡದ್ದನೇನೋ ಜೊತೆಗೆ ಪ್ರೀತಿಯ ನಾಟಕ ಬೇರೆ"[೧] ಎಂದು ತನ್ನ ದುಃಖವನ್ನು ಸ್ನೇಹಿತೆಯಾದ ಬೇಗಂನೊಂದಿಗೆ ಹೇಳಿಕೊಳ್ಳುತ್ತಾಳೆ.

ಮತ್ತೊಮ್ಮೆ ಬೇಗಮ್‌ಗೆ ಕೆರೆಯಲ್ಲಿ ಶ್ರೀದೇವಿ ಸಿಕ್ಕಾಗ "ಅಪ್ಪಯ್ಯ ಆ ಗಂಡೂ ಈ ಗಂಡೂ ಅಂತ ಓಡಾಡ್ತ ಇದ್ದಾರೆ, ಯಾಕೋ ಏನೋ ಗಂಡ ಅಂದ್ರೆ ನಾಗೇಶನೇ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿ ನನಗೆ ಹೇಳದೆ ಕೇಳದೇನೆ ಆಳವಾಗಿ ಬೇರೂರಿಬಿಟ್ಟಿದೆ. ಅವನು ನನ್ನ ಮರೆತಿದ್ದರೂ ಪರವಾಗಿಲ್ಲ. ಅವನೇ ನನ್ನ ಗಂಡ ಅನ್ನೋ ನೆಮ್ಮದೀಲಿ ನಾನು ಜೀವನ ಪೂರ್ತಿ ಒಂದೇ ಸೂರಿನಡಿಯಲ್ಲಿ ಬಾಳ್ತೀನಿ ಅನ್ನೋ ಶಕ್ತಿ ನನಗಿಲ್ಲ ಬೇಗಂ"[೨] ಎಂದು ನಾಗೇಶ್‌ಭಟ್ ಬಗ್ಗೆ ಇಟ್ಟುಕೊಂಡಿದ್ದ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ.

ಹೀಗಾಗಿ ನಾಗೇಶ್ ಮನೆಯನ್ನು ಗುರುತಿಸುತ್ತೇನೆಂದು ನಗರದಲ್ಲಿ ತನ್ನ ಮುಖವನ್ನು ಯಾರು ಗುರುತು ಹಿಡಿಯಬಾರದೆಂದು ಬೇಗಂನಿಂದ ಬುರ್ಖಾ ಎರವಲು ಪಡೆದಿದ್ದು, ನಾಗೇಶ್‌ಭಟ್ ಸಿಕ್ಕದೇ ಇದ್ದಾಗ ಬೇಸರದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಈ ಕತೆಯಲ್ಲಿನ ಶ್ರೀದೇವಿ ಸ್ತ್ರೀ ಸಹಜ ಸಂಕೋಚ, ನಾಚಿಕೆ ಕೀಳರಿಮೆಯಿಂದ ನಾಗೇಶ್‌ಭಟನ ಪ್ರೀತಿಯನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾಗದ ಆತಂಕಕ್ಕೆ ಒಳಗಾಗುತ್ತಾಳೆ. ಆದರೆ ನಾಗೇಶ್‌ಭಟ್‌ನನ್ನು ಕಳೆದುಕೊಂಡ ತಪ್ಪಿಗಾಗಿ ಆತ್ಮಹತ್ಯೆಗೆ ಶರಣಾಗುವ ದುರ್ಬಲ ಮನಸ್ಸಿನ ಚಿತ್ರಣವನ್ನು ಇಲ್ಲಿ ಶ್ರೀದೇವಿ ಪಾತ್ರದಲ್ಲಿ ನೋಡಬಹುದು.

ಈ ಕತೆಯಲ್ಲಿನ ಮತ್ತೊಂದು ಸ್ತ್ರೀಪಾತ್ರ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಅಂಜು ಬಾನುವಿನದು ಹಳ್ಳಿಯಲ್ಲಿನ ಧರ್ಮ ಬೇಧ, ಜಾತಿ ಪದ್ಧತಿ ತಿಳಿದಿದ್ದರೂ ಪಟೇಲರ ಮಗ ಗೋಪಿಯೊಂದಿಗೆ ನಗರಕ್ಕೆ ತೆರಳಿ ಮದುವೆಯಾಗಿಬಿಡುತ್ತಾಳೆ.

ಪ್ರೀತಿ ಕಡಲು ಬದುಕು ಇತ್ಯಾದಿ ಎಂಬ ಕತೆಯಲ್ಲಿನ ಮಯೂರ ಸೂಕ್ಷ್ಮ ಸ್ವಭಾವದ ಮುಗ್ಧ ಹೆಣ್ಣು ಶ್ರೀನಿವಾಸರ ಮಗಳು ಅಪ್ಪನ ಮುಂದೆ ನಿಂತು ಮಾತನಾಡುವುದಕ್ಕೂ ಸಹ ಹೆದರುವಂತವಳು.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಕಪ್ಪು ಚರಿತ್ರೆಯ ಬಿಳಿ ಟಿಪ್ಪಣಿ, ಪು. ೧೨೧

೨. ಅದೇ,

ಇವಳು ರಿಚಿ ಎಂಬ ಹುಡುಗನನ್ನು ಪ್ರೀತಿಸುತ್ತಾಳೆ. ತಂದೆ ತಮ್ಮ ಮದುವೆಗೆ ಒಪ್ಪುವುದಿಲ್ಲವೆಂದು ತಿಳಿದು ರಿಚಿಯೊಂದಿಗೆ ವಾದಿಸುತ್ತಾಳೆ. "ರಿಚಿ ನನಗೆ ಹೆದರಿಕೆ ಆಗ್ತಿದೆ"[೧] ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ.

ಮಯೂರ ಮತ್ತು ರಿಚಿ ಕಡಲದಡದಲ್ಲಿ ಕುಳಿತಾಗ ರಿಚಿ "ನಿಮ್ಮ ತಂದೆ ಕಡಲು ನೋಡಿದ್ದಾರಾ. ಮಯೂರ?" ದಂಡೆಯಮೇಲೆ ಕುಳಿತು ಕ್ಷಿತಿಜದಲ್ಲಿ ಒಂದಾದ ಕಡಲ ಅಂತ್ಯವನ್ನು ಆನೆಗಾತ್ರದ ಅಲೆಗಳನ್ನು ಮಜಲು ಮಜಲಾಗಿ ವಿಸರ್ಜಿಸಿ ದಂಡೆಗೆ ಮುತ್ತಿಡುತ್ತಿದ್ದ ಕಡಲನ್ನೇ ನೋಡುತ್ತಾ ರಿಚಿ ಕೇಳಿದಾಗ, ತನ್ನ ಪ್ರಶ್ನೆಗೆ ಅದು ಉತ್ತರವಲ್ಲವೆಂಬ ಅನಿಸಿಕೆಯಲ್ಲಿ ನಗುಬಂದರೂ ಅದನ್ನು ತಡೆದ ಮಯೂರ "ನನ್ನ ನೋಡೋದಿಕ್ಕೆಂತ ಮಂಗಳೂರಿಗೆ ಬಂದಾಗ ಒಂದೆರಡು ಬಾರಿ ನೋಡಿರಬಹುದು. ಆದರೆ ಈಗ ಯಾಕೆ ಆ ಪ್ರಶ್ನೆ"[೨] ಎಂದು ಕೇಳಿದಾಗ ಅದಕ್ಕೆ ರಿಚಿ "ಈ ಕಡಲಿನ ಮುಂದೆ ಕುಳಿತರೆ ನಾವು, ನಮ್ಮ ಬದುಕು, ವಿಚಾರ, ನಮಗೆ ಸಂಬಂಧಸಿದ್ದೆಲ್ಲವೂ ಎಷ್ಟು ಕ್ಷುದ್ರ ಅನ್ನಿಸುತ್ತೆ ಅಲ್ಲವಾ? ಅದು ನಮ್ಮಲ್ಲಿರೋ ಕ್ಷುದ್ರತೇನಾ ಎತ್ತಿತೋರಿಸುತ್ತೆ. ಸೃಷ್ಟಿಯಲ್ಲಿ ತಾನೇ ಬ್ರಹ್ಮ ಸರ್ವಸ್ವ ಅಂದುಕೊಂಡಿರೋ ಮನುಷ್ಯ ಒಮ್ಮೆಯಾದರೂ ಕಡಲನ್ನು ನೋಡಬೇಕು. ಯಾಕೆಂದರೆ ಅದು ನಮ್ಮ ಕ್ಷುದ್ರತೇನಾ ಗುರುತಿಸೋಕೆ ಮತ್ತೆ ಅದನ್ನು ಕಳೆದುಕೊಳ್ಳೋಕೆ ಎರಡು ರೀತಿಯಲ್ಲಿ ಸಹಾಯ ಮಾಡುತ್ತೆ" ಎಂದು ರಿಚಿ ಪ್ರತ್ಯುತ್ತರ ನೀಡಿದಾಗ "ಸಮುದ್ರವನ್ನು ನೋಡದ ಮಂದಿ ಕ್ಷುದ್ರತೆ ಉಳಿಸಿಕೊಂಡಿರಬಹುದು. ಆದರೆ ಕಡಲನ್ನು ನೋಡಿಯೂ ಮಾನವನಲ್ಲಿ ಉಳಿದುಕೊಳ್ಳೋ ಕ್ಷುದ್ರತೆಗಳ ಬಗ್ಗೆ ಏನು ಹೇಳ್ತೀಯಾ? ಕಡಲನ್ನು ಕಂಡೂ ಕ್ಷುದ್ರತೆಯನ್ನು ಉಳಿಸಿಕೊಂಡ ಎಷ್ಟು ಬದುಕುಗಳು ನಮ್ಮ ಕಣ್ಣಮುಂದೆ ಇಲ್ಲ" ಎಂದು ಕೋಪದಿಂದ "ನನ್ನ ಅಭಿಪ್ರಾಯದಲ್ಲಿ ಬದುಕಿನ ಕ್ಷುದ್ರತೆ ಗೆಲ್ಲೋ ಏಕಮಾತ್ರ ವಸ್ತು ಅಂದ್ರೆ ಸಾವೆಷ್ಟೇ" ಎಂದು ತನ್ನ ವಾದವನ್ನು ಮಂಡಿಸುತ್ತಾಳೆ. ರಿಚಿಯೊಂದಿಗೆ ವಾದಿಸುತ್ತಾಳೆ.

"ನನಗೆ ನನ್ನ ತಂದೇನಾ ಎದುರಿಸೋ ತಾಕತ್ತೇ ಇಲ್ಲ ಅನ್ನಿಸುತ್ತದೆ...."[೩] ಎಂದು ದುಃಖಿಸುತ್ತಾಳೆ. ಅದಕ್ಕೆ ಪ್ರತಿಯಾಗಿ ರಿಚಿ "ಪ್ಲೀಸ್ ಮಯೂರ ಆಶಾವಾದಿಯಾಗಿರ–

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಪತ್ತು ಸಾವು, ಪ್ರೀತಿ ಕಡಲು ಬದುಕು ಇತ್ಯಾದಿ, ಪು. ೧೬೩

೨. ಅದೇ, ಪು. ೧೬೧.

೩. ಅದೇ ಪು. ೧೬೪

ಬೇಕು. ಈ ಬಂಡೆಗಳನ್ನು ದಿನಾ ನೋಡಿಯೂ ನಿನ್ನ ಗುಂಡಿಗೆ ಅಳ್ಳೆದೆಯಾಗಿಯೇ ಉಳಿದಿದೆಯೂ ಇನ್ನೂ?" ಎಂದು ಮಯೂರಳನ್ನು ಸಮಾಧಾನಪಡಿಸುತ್ತಾನೆ.

ಹೀಗೆ ಮಾತನಾಡಬೇಡ ಈ ಬಂಡೆಯಂತೆ ನಿನ್ನ ಮನಸ್ಸನ್ನು ಗಟ್ಟಿ ಮಾಡಿಕೋ ಎಂದಾಗ ಅದು ನನ್ನಿಂದ ಸಾಧ್ಯವಿಲ್ಲ. "ಜೀವನ ಪೂರ್ತಿ ನನಗೆ ಈಗ ಕಂಡಿರೋ ಸತ್ಯವನ್ನಷ್ಟೇ ಪರಮಾರ್ಥ ಅಂತ ಅಂದ್ಕೊಂಡು ನಾನು ಈ ಸ್ಥಿತಿಲೇ ಇದ್ದು ಬಿಡ್ತೀನಿ"[೧] ಎಂದು ತನ್ನ ವ್ಯಾಕುಲತೆ ವ್ಯಕ್ತಪಡಿಸಿದಳು.

"ಹುಚ್ಚಮ್ಮಾ; ಈ ಕಡಲಿನಂಥ ಕಡಲಿಗೇ ಸ್ಥಿತಿ ಸಾಧ್ಯ ಇಲ್ಲ. ಇನ್ನು ನಮ್ಮ ಬದುಕಿಗೆ ಅದು ಸಾಧ್ಯನಾ? ಬದುಕು ಸ್ಥಿತ್ಯಂತರದ್ದು. ಅದೇ ಜೀವಂತಿಕೆಯ ಲಕ್ಷಣ ಕೂಡ. ಅವಸ್ಥೆಗಳಿಲ್ಲದ ಬದುಕು ತುಕ್ಕುಹಿಡಿದ ಕಬ್ಬಿಣ ಆಗ್ತದೆ ಅಷ್ಟೆ. ಪರಿಸ್ಥಿತೀನಾ ಎದುರಿಸುವ ತಾಕತ್ತಿಲ್ಲಾಂತ ಸ್ಥಿತ್ಯಂತರಗಳನ್ನೇ ನಿರಾಕರಿಸೋದು ಬದುಕನ್ನೇ ನಿರಾಕರಿಸಿದಂತೆ" ಎಂದು ಬುದ್ಧಿ ಹೇಳುತ್ತಾನೆ ರಿಚಿ.

ಮಯೂರ ಧೈರ್ಯ ಮಾಡಿ "ಅಪ್ಪಾ ರಿಚೀನಾ ನಾನು ಪ್ರೀತಿಸ್ತಾ ಇದ್ದೀನಿ"[೨] ಎಂದು ಹೇಳಿದಳು. ಅದಕ್ಕೆ ತಂದೆ "ತಿಳಿವಳಿಕೆ ಇಲ್ಲ, ತಿಳಿವಳಿಕೆ ಇಲ್ಲಾಂತ ಹೀಗೆ ಮುದ್ದು ಮಾಡಿದ್ದಕ್ಕೆ ನನ್ನ ಎದುರೆ ನಿಂತು ಆ ಜಾತಿಯಲ್ಲದ ಜಾತಿಯ ರಿಚೀನಾ ಪ್ರೀತಿಸ್ತೀನಿ ಅಂತ ಹೇಳೋ ಹಾಗೆ ಕೊಬ್ಬಿದ್ದಾಳೆ. ಹೊಡೆಯೋದೇನು ಖೂನಿ ಮಾಡಿಬಿಡ್ತೀನಿ"[೩] ಎಂದು ತಂದೆ ರೇಗುತ್ತಾರೆ. ತಾಯಿಯು ಸಹ ಬುದ್ಧಿ ಹೇಳಿದಾಗ "ಅಮ್ಮಾ ರಿಚಿಗೆ ಮೋಸ ಮಾಡೂಂತ ಹೇಳಬೇಡಾಮ್ಮ"[೪] ಎಂದು ರೋಧಿಸುತ್ತಾಳೆ.

ಮಯೂರಳನ್ನು ನೋಡಲು ಬಂದ ರಿಚಿಗೆ ಅವಳೊಂದಿಗೆ ಮಾತನಾಡಲು ಬಿಡದೆ ಟಿಕ್ ೨೦ ಹಳೆಯ ಶೀಶೆ ಹಿಡಿದು ಬೆದರಿಸಿದಾಗ ಮಯೂರ 'ರಿಚಿ ನನ್ನನ್ನು ಕ್ಷಮಿಸಲಿ'[೫] ಎಂದು ಕೇಳಿಕೊಳ್ಳುತ್ತಾಳೆ.

ಬೇರೆ ಹುಡುಗನೊಂದಿಗೆ ಮಯೂರಳಿಗೆ ಹುಡುಗನನ್ನು ನೋಡುವ ಶಾಸ್ತ್ರ ಮುಗಿಸಿ ಆ ಹುಡುಗ ಮಯೂರಳಿಗೆ ಹೊಂದಿಕೆಯಾಗುತ್ತಾನೆಂದು ಮಯೂರಳನ್ನು ಕೇಳಿದಾಗ ಅವಳು ಇಷ್ಟವಿಲ್ಲವೆಂಬಂತೆ ತಲೆಯಾಡಿಸಿದಾಗ ಎರಡನೇ ಅಕ್ಕ "ಇನ್ಯಾವನು

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಪ್ರೀತಿ ಕಡಲು ಬದುಕು ಇತ್ಯಾದಿ, ಪು. ೧೬೪.

೨. ಅದೇ., ಪು. ೧೫೮

೩. ಅದೇ, ಪು. ೧೫೯.

೪. ಅದೇ,

೫. ಅದೇ, ಪು. ೧೬೮.

ಇಷ್ಟ? ಆ ಜಾತಿಯಿಲ್ಲದ ಜಾತಿಯ ರಿಚಿ ಇಷ್ಟಾನಾ? ನಾಚಿಕೆಗೆಟ್ಟೋಳೆ. ಇನ್ನೂ ಅವನನ್ನು ಮರೆತಿಲ್ಲವಾ" ಎಂದು ಬೈದಾಗ "ಹೌದು ನಾನು ರಿಚೀನಾ ಪ್ರೀತಿಸ್ತೀನಿ. ಅವನಿಲ್ಲದ ಈ ಭೂಮಿ, ಈ ಬದುಕು. ಈ ಸಂಬಂಧಗಳು ನನಗೆ ಬೇಡಾ. ಕಡಲ ಆಳದಲ್ಲಿ ರತ್ನಗಳಿಂದ ಅರಮನೆ ಕಟ್ಟಿ, ಮುತ್ತಿನ ತೋರಣ ಹಾಕಿ ರಿಚಿಯೊಂದಿಗೆ ಬಾಳಬೇಕಾದ ಬದುಕಿಗೆ ಕಾಯ್ತೀನಿ" ಎಂದು ರಿಚಿಯ ಬಗ್ಗೆ ಇದ್ದ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ.

ಕೊನೆಗೆ ತಂದೆಯನ್ನು ಎದುರಿಸಿ ರಿಚಿಯೊಂದಿಗೆ ಬಾಳುವುದು ಸಾಧ್ಯವಿಲ್ಲವೆಂದು ತಿಳಿದಾಗ "ನಾನು ರಿಚಿನಾ ಪ್ರೀತಿಸ್ತೀನಿ"[೧] ಎಂದು ಗಟ್ಟಿಯಾಗಿ ಕೂಗಿ ಸಮುದ್ರದ ತೆರೆಗಳ ನಡುವೆ ಮರೆಯಾಗಿ ತನ್ನ ಬದುಕನ್ನು ಕೊನೆಗಾಣಿಸಿಕೊಳ್ಳುತ್ತಾಳೆ.

ಇಲ್ಲಿ ಕಂದಾಚಾರ ಜಾತಿ, ನಂಬಿಕೆಗಳಿಂದಾಗಿ ಯಾವ ರೀತಿ ಅನಾಹುತ ವಾಗುತ್ತದೆಂದು ಹೇಳುವುದರ ಜೊತೆಗೆ ಸ್ತ್ರೀಯ ಶೋಷಣೆ ಹೇಗೆ ಸಾಗಿದೆ ಹೆಣ್ಣಿಗೆ ಎಲ್ಲಿಂದ ಎಲ್ಲಿಗೆ ಹೋದರೂ ಸಹ ಸ್ವತಂತ್ರಳಾಗಿ ಇರಲು ಪ್ರಪಂಚ, ಕುಟುಂಬ, ಸಮಾಜ ಬಿಡುವುದಿಲ್ಲ. ಕೊನೆಗೆ ಅವಳಿಗೆ ಜೀವನವೇ ಬೇಜರಾಗಿ ಸಾಯುವಂತಹ ಸ್ಥಿತಿಗೆ ತಂದು ನಿಲ್ಲಿಸುತ್ತದೆ ಎಂಬುದಾಗಿ ಚಿತ್ರಿಸಿದ್ದಾರೆ. ಅಂತೆಯೇ ಹೆಣ್ಣು ಹೇಡಿಯಾಗಿ ಹೆದರಿ ಸಾಯುವುದರಲ್ಲಿ ಹುರುಳಿಲ್ಲ, ರವಿಯಂತಹ ಗಂಡಿನಂತೆ ತಂದೆಯ ಮನಸ್ಸನ್ನು ಪರಿವರ್ತಿಸಿ ನಂದಾಳೊಂದಿಗಿನ ವಿವಾಹಕ್ಕೆ ಒಪ್ಪಿಸಿದ ರೀತಿಯಲ್ಲಿ ತಾನು ಗಟ್ಟಿಗಳಾಗಿ ತಂದೆಗೆ ತನ್ನ ಪ್ರೀತಿಯನ್ನು ಅರ್ಥಮಾಡಿಸಿದ್ದರೆ ಅವಳು ಸಾಯುವ ಸ್ಥಿತಿ ಬರುತ್ತಿರಲಿಲ್ಲ.

ಈ ಕತೆಯಲ್ಲಿನ ಮಯೂರಳು ದ್ವಂದ್ವ ನಿಲುವುಳ್ಳ ಮೃದು ಸ್ವಭಾವದ ಹೆಣ್ಣು. ರಿಚಿಯನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವ ಇವಳಿಗೆ ತಂದೆಯ ಮಾತನ್ನು ಮೀರಿ ಬದುಕನ್ನು ಕಟ್ಟಿಕೊಳ್ಳುವ ಧೈರ್ಯವಿಲ್ಲದ ರಿಚಿಯನ್ನು ಬಿಟ್ಟು ಬದುಕಲು ಇಷ್ಟವಿಲ್ಲದೆ ಅಂತಿಮವಾಗಿ ಬದುಕಿಗೆ ಬೆನ್ನು ತಿರುಗಿಸಿ ದುರ್ಬಲ ಮನಸ್ಸಿನ ಹೇಡಿಯ ನಿರ್ಧಾರವನ್ನೇ ಅಪ್ಪಿಕೊಳ್ಳುತ್ತಾಳೆ.

ಎಂ.ಎಸ್.ವೇದಾ ಅವರ **ಪಾಲು** ಕಥಾಸಂಕಲನದ **ಪರಕೀಯರು** ಈ ಕತೆಯಲ್ಲಿನ ಮೃದು ಸ್ವಭಾವದ ಹೆಣ್ಣಾದ ಮನನಳನ್ನು ಅವರ ತಾಯಿ ಹಳ್ಳಿಗೆ ಜಾತ್ರೆಗೆಂದು ಕರೆದುಕೊಂಡು ಹೋಗುವುದು ಅಲ್ಲಿನ ವಾತಾವರಣ, ಜನರ ನಡವಳಿಕೆ ಅವಳಿಗೆ ಬೇಸರ ತರಿಸುತ್ತದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಪ್ರೀತಿ ಕಡಲು ಬದುಕು ಇತ್ಯಾದಿ, ಪು. ೧೭೦.

ರಾತ್ರಿ ಮಲಗಿದ್ದ ಸಂದರ್ಭದಲ್ಲಿ ನಿದ್ದೆಯಿಲ್ಲದೇ ಒದ್ದಾಡುತ್ತಿದ್ದ ಮನನಳಿಗೆ "ನನ್ನ ಮಕ್ಳು ನನ್ನ ಒಡ್ದು ಬಾವಿಗ್ ಹಾಕ್ಬುಡ್ತಾ ಅವ್ರೆ ಯಾರಾದ್ರೂ ಕಾಪಾಡ್ರಪ್ಪಾ"[೧] ಎಂದು ಕೂಗಿಕೊಂಡಾಗ ಮನನಳಿಗೆ ಅದು ಚಳಿಯನ್ನು ತರಿಸುತ್ತದೆ. ಚೆನ್ನೂರಜ್ಜನ ಸಾವು ನಿಜವೆಂದು ತಿಳಿದಾಗ ಮಕ್ಕಳು ತಂದೆಯನ್ನು ಕೊಂದ ಬಗೆ ಅವಳಿಗೆ ಗಾಬರಿ ಹುಟ್ಟಿಸುತ್ತದೆ. ಪೋಸ್ಟ್‌ಮಾರ್ಟಂ ಮಾಡಲು ಬಂದ ಡಾಕ್ಟರ್‌ನಿಂದ ಮನನಳಿಗೆ ಚಿಕಿತ್ಸೆ ನೀಡಲು ಕರೆತರುತ್ತೇವೆಂದಾಗ ಡಾಕ್ಟರ್ ಕ್ರೂರತೆ ತಿಳಿದಿದ್ದ ಅವಳು ಡಾಕ್ಟರ್ ಬೇಡವೆಂದು ಹಠಹಿಡಿದಾಗ ತಾತಾ ಅವಳಿಗೆ ನರ್ಸ್‌ನಿಂದ ಚಿಕಿತ್ಸೆ ಕೊಡಿಸುತ್ತಾರೆ. ಬೆಳಿಗ್ಗೆ ತನ್ನ ತಂದೆ ತನ್ನನ್ನು ಕರೆದುಕೊಂಡು ಹೋಗಲು ಬಂದಿದ್ದಾರೆಂದು ತಿಳಿದಾಗ ಮನನ ಸಂತೋಷಗೊಳ್ಳುತ್ತಾಳೆ. ತಂದೆಯ ಹಣೆಯ ಮೇಲೆ ಬೆರಳಿಟ್ಟು "ಮನು ಮಾನಣ್ಣ"[೨] ಎಂದಾಗ ಮನು ಐಸಿರಿ ಸಿಕ್ಕ ಸಂತಸದಲ್ಲಿ ಅಪ್ಪಿ ಮೈಸೂರಿಗೆ ಹೊರಡಲು ತಯಾರಾಗುತ್ತಾಳೆ.

ಇಲ್ಲಿ ಕತೆಗಾರ್ತಿ ಮುಗ್ಧ ಕುತೂಹಲಭರಿತ ಹೆಣ್ಣಿನ ಚಿತ್ರಣವನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

ಕಾಲುವೆ ಕತೆಯಲ್ಲಿನ ಗೌರಿ ಬಸಪ್ಪಗೌಡನ ಮಗಳು ಊರಿಗೆ ಕಾಲುವೆ ಕೆಲಸಕ್ಕಾಗಿ ಬಂದ ಇಂಜಿನಿಯರ್‌ನನ್ನು ಪ್ರೀತಿಸುತ್ತಾಳೆ. ಆದರೆ ಕಿಟ್ಟಪ್ಪನ ಕಿತಾಪತಿಯಿಂದ ಅದು ಸಾಧ್ಯವಾಗದೇ ನೀರಿಗೆ ಬೀಳುತ್ತಾಳೆ. ಆದರೆ ಅಲ್ಲಿ ಅದನ್ನು ಕಂಡವರು ಅವಳನ್ನು ಬದುಕಿಸುತ್ತಾರೆ. ತಂದೆಯ ಪ್ರೀತಿಪಾತ್ರ ಮಗಳಾದ ಗೌರಿ ಆಸೆಯನ್ನು ತಂದೆ ನೆರವೇರಿಸಲು ಮುಂದಾದರೂ ಸಹ ಅದು ಕೈಗೂಡದೆ ಗೌರಿಗೆ ನಿರಾಸೆಯನ್ನು ಮೂಡಿಸುತ್ತದೆ.

ಗ್ರಾಮೀಣ ಬದುಕಿನ ಚಿತ್ರಣವನ್ನು ಇಲ್ಲಿ ತಿಳಿಸ ಹೊರಟ ಕತೆಗಾರ್ತಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ನಗರ ಪ್ರದೇಶದ ಗಂಡುಗಳಿಗೆ ಹೇಗೆ ಮಾರು ಹೋಗಿ ಮನಸ್ಸು ಕೆಡಿಸಿಕೊಳ್ಳುತ್ತಾರೆಂಬುದನ್ನು ತಮ್ಮ ಕತೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಅಲಕಾಳ ಡೈರಿಯ ಪ್ರೀತಿಯ ಪುಟಗಳು ಕತೆಯಲ್ಲಿನ ಅಲಕಾ ತನ್ನಲ್ಲಿ ಪ್ರೀತಿ ರೂಪ ತಾಳುವುದಕ್ಕೆ ಮುನ್ನ ಅವಳು ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಳು. ಶಾಲೆಗೆ ಹೋಗುವ ಹಾದಿಯಲ್ಲಿ ಒಂದು ಹುಡುಗ ಐ ಲವ್ ಯೂ ಎಂದು ಹೇಳಿದ್ದನ್ನು ರಂಪಮಾಡಿ ಬುದ್ಧಿ ಕಲಿಸುತ್ತಾಳೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಪಾಲು, ಪರಕೀಯ, ಪು. ೨೦೬.

೨. ಅದೇ, ಪು. ೨೨೪.

ಅಲಕಾಳು ಹೈಸ್ಕೂಲಿಗೆ ಹೋದಾಗ ವೆಂಕಟರಮಣ ದಿನವು ಬಂದು ಗುಲಾಬಿ ಹೂವನ್ನು ತಂದು ಇವಳಿಗೆ ಕೊಡುತ್ತಿದ್ದರಿಂದ ತಾನು ಸುಂದರಿಯೆಂದು ಮನದಲ್ಲಿ ಭಾವಿಸಿ ಅದನ್ನು ಬೇರೆಯವರಿಗೂ ಒಂದೊಂದು ದಿನ ತಂದುಕೊಡುವಂತೆ ಹೇಳುತ್ತಾಳೆ. ಅವನನ್ನು ಪರೋಕ್ಷವಾಗಿ ತಿರಸ್ಕರಿಸುತ್ತಾಳೆ.

ಅಲಕಾಳ ಡೈರಿಯ ಪ್ರೀತಿಯ ಪುಟಗಳು ಅಲಕಾ ಹೊಟೇಲ್‌ನಲ್ಲಿ ವಿಷ ಸೇವಿಸಿ ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದಾಗ ಅವಳ ಡೈರಿಯಲ್ಲಿ ಈ ರೀತಿ ಬರೆಯಲ್ಪಟ್ಟಿತು. "ಪ್ರೀತಿ ಅನೈತಿಕವಾದುದು. ನಾಶ ಮತ್ತು ಅಪವಿತ್ರತೆಗಳೇ ಅದರ ಮೂಲಗುಣ. ಇಲ್ಲದಿದ್ದರೆ ಪ್ರೀತಿಗೊಳಗಾದ ಆ ಪ್ರೇಮಿಗಳು ಆತ್ಮಹತ್ಯೆ ಯಾಕೆ ಮಾಡಿಕೊಳ್ಳುತ್ತಿದ್ದರು? ಅವರ ಈ ಅಕಾಲ ಅಂತ್ಯವನ್ನು ಸಮಾಜ ಎಷ್ಟು ನಿರ್ಲಿಪ್ತವಾಗಿ, ನೀರಸವಾಗಿ 'ಉಪ್ಪು ತಿಂದವರು ನೀರು ಕುಡೀತಾರೆ' ಎಂದು ಬಹಳ ಬೇಜವಾಬ್ದಾರಿಯಿಂದ ನೆಮ್ಮದಿಯಿಂದ ಏಕೆ ಸ್ವೀಕರಿಸುತ್ತಿತ್ತು? ಸಾವಿನಂತಹ ದುಃಖದ ಸಂದರ್ಭದಲ್ಲಿಯೂ ಲೈಲಾ–ಮಜ್ನು, ರೋಮಿಯೋ–ಕೊಲಿಯೆಟ್ ಎಂದು ಏನೇನೋ ಹೆಸರುಗಳನ್ನು ಹೇಳಿ ಒಬ್ಬರಿಗೊಬ್ಬರು ಕಾಣದಂತೆ ಇಡೀ ಸಮಾಜ ಯಾಕೆ ಮುಸಿಮುಸಿ ನಗುತ್ತಿತ್ತು?"[೧] ಎಂದು ಪ್ರಶ್ನೆ ಮಾಡಿಕೊಳ್ಳುತ್ತಾಳೆ.

ಹೀಗೆ ಇದ್ದಂತಹ ಅಲಕಾಳ ಮನಸ್ಸು ಪ್ರೀತಿಯ ಕಡೆಗೆ ವಾಲತೊಡಗಿತು. ಆದರೂ ತಾನು ಪ್ರೀತಿಯ ಬಗ್ಗೆ ಕಂಡ ವಿಷಯಗಳನ್ನು ನೋಡಿದಾಗ ಅದರ ಬಗ್ಗೆ ಭಯ ಮೂಡುತ್ತಿತ್ತು. ಅದೇ ರೀತಿ ಅವಳು ಹುಡುಗರ ಬಗೆಗಿನ ನಿರ್ಲಕ್ಷತೆ ವ್ಯಕ್ತಪಡಿಸಿದ್ದು ತಂದೆತಾಯಿಗಳಿಗೆ ಹೆಮ್ಮೆ ತರುತ್ತಿತ್ತು.

ತನ್ನನ್ನು ಪ್ರೀತಿಸುತ್ತಿದ್ದ ನರೇಂದ್ರನ ಬಗ್ಗೆಯೂ ಮತ್ತದೇ ಉದ್ದೇಶಪೂರ್ವಕ ನಿರ್ಲಿಪ್ತತೆ. ನಿಸ್ಪಂದಗಳ ನಿರಾಸಕ್ತಿ ನೀರಸಗಳ ಮುಖವಾಡ. ಮನೆಯವರಿಂದ "ನಮ್ಮ ಅಲಕಾ ಸರಿಯಪ್ಪಾ ಹುಡುಗರಿಂದ ಮಾರುದೂರ, ಕತ್ತೆ ವದ್ದಂಗೆ ಮುಖವಾಡ"[೨] ಎಂದು ಹೊಗಳುತ್ತಾರೆ.

ಅಲಕಾ ತಾನು ಹೇಗಿರಬೇಕೆಂಬುದನ್ನು ತನ್ನ ಡೈರಿಯಲ್ಲಿ ಬರೆದುಕೊಂಡಿದ್ದಳು. "ತಂದೆ, ಚಿಕ್ಕಪ್ಪ ಎಲ್ಲರೂ ಅವಳು ಯಾವುದೋ ಪ್ರೀತಿಯಲ್ಲಿ ಬಿದ್ದಿದ್ದಾಳೆಂದು ಆತಂಕ ವ್ಯಕ್ತಪಡಿಸಿದಾಗ ನೀವೆಲ್ಲಾ ತಿಳಿದಿರುವಂತೆ ನಾನು ಯಾರನ್ನಾದರೂ ಪ್ರೀತಿಸಿ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈ ತನಕ, ಪಾಲು, ಅಲಕಾಳ ಡೈರಿಯ ಪ್ರೀತಿಯ ಪುಟಗಳು, ಪು ೨೬೦.

೨. ಅದೇ. ಪು ೨೬೪.

ಓಡಿಹೋಗುವುದಿಲ್ಲ ಚಿಕ್ಕಪ್ಪ. ನಾನೂ ಹಾಗೆಯೇ ಮಾಡಬಹುದೆಂದುಕೊಂಡಿದ್ದೆ ಆದರೆ ಅದು ಸಾಧ್ಯವಿಲ್ಲವೆಂದು ನನಗೀಗ ಗೊತ್ತಾಗಿದೆ. ಯಾಕೆಂದರೆ ಪ್ರೀತಿಗಾಗಿ ಪ್ರೀತಿಸುವ ಗುಣ ನನ್ನಲ್ಲಿ ಇಲ್ಲವೇ ಇಲ್ಲ. ಓದು ಮುಗಿದ ಅನಂತರ ನೀವು ತೋರಿಸುವ ಹುಡುಗನೊಂದಿಗೇ ನಾನು ಮದುವೆಯಾಗಲು ನಿರ್ಧರಿಸಿದ್ದೇನೆ."[೧] ಎಂಬುದಾಗಿ ಹೇಳುತ್ತಾಳೆ.

ಈ ಕತೆಯಲ್ಲಿನ ಅಲಕಾ ಪ್ರೀತಿ ಪ್ರೇಮದ ಬಗ್ಗೆ ಮಡಿವಂತಿಕೆ ಇಟ್ಟುಕೊಂಡವಳು. ಮುಂದೆ ಕಾಲೇಜಿನಲ್ಲಿ ಓದುವಾಗ ಪ್ರೀತಿಸಬೇಕೆಂದುಕೊಂಡು ಮನಸ್ಸು ಒಪ್ಪದು, ತಾನು ಒಪ್ಪಿದ ರವಿ ಇವಳನ್ನು ನಿರಾಕರಿಸಿದಾಗ ತನ್ನನ್ನು ಇದುವರೆಗೂ ಮೆಚ್ಚಿದ ಹುಡುಗರನ್ನು ನೆನಪಿಸಿಕೊಳ್ಳುತ್ತಾ "ಹುಡುಗರಾ ನಾನು ನಿಮ್ಮೆಲ್ಲರನ್ನೂ ಮನಸಾರೆ ಪ್ರೀತಿಸುತ್ತೇನೆ"[೨] ಎಂದು ಕೂಗುತ್ತಾಳೆ.

ಮುಂದೆ ಮದುವೆಯಾಗುವಾಗ ಹಿರಿಯರು ತೋರಿಸುವ ಹುಡುಗನೊಟ್ಟಿಗೆ ಮದುವೆ ಆಗಲು ನಿರ್ಧರಿಸುತ್ತಾಳೆ, ಹೆಣ್ಣಿನ ಸೂಕ್ಷ್ಮ ಒಳಮನಸ್ಸು ಅಂತರಾಳವನ್ನು ಈ ಕತೆ ಎಳೆ ಎಳೆಯಾಗಿ ಕಟ್ಟಿಕೊಡುತ್ತದೆ.

ಎಂ.ಎಸ್.ವೇದಾರ **ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ** ಕಥಾಸಂಕಲನದಲ್ಲಿನ **ನೀರು** ಕತೆಯಲ್ಲಿನ ರೇಣು ಎಂಬ ಬಾಲಕಿಯು ಚಿಕ್ಕ ವಯಸ್ಸಿನಲ್ಲಿಯೇ ನೀರು ಹಾಕಿಕೊಂಡು ನಂತರದ ತಿಂಗಳ ಮೇಲೆ ಹದಿನೈದು ದಿನವಾದರೂ ನೀರು ಹಾಕಿಕೊಳ್ಳದೆ ಇದ್ದಾಗ ಬೇರೆಯವರ ವಿಷಯದೊಂದಿಗೆ ತನ್ನ ವಿಷಯವನ್ನು ಹೋಲಿಸಿ ನೋಡಿ ಆತಂಕಗೊಳ್ಳುವುದನ್ನು ಕಾಣಬಹುದು.

ನೀರು ಹಾಕಿಕೊಳ್ಳುವುದು ಎಂದರೆ ಹಳ್ಳಿಗಳಲ್ಲಿ ಮೈನೆರೆದ ಋತುಮತಿಯಾದ ಹೆಣ್ಣು ಎಂದರ್ಥ. ಚನ್ನೂರಕ್ಕ ಎಂಬುವಳು ಬೇರೆ ಜಾತಿಯ ಡ್ರೈವರ್ ಜೊತೆ ಸಂಗ ಬೆಳೆಸಿ ನಾಲ್ಕು ತಿಂಗಳ ಗರ್ಭಿಣಿಯಾಗಿರುವ ವಿಷಯ ಪಂಚಾಯಿತಿಗೆ ಬರುತ್ತದೆ. ಗರ್ಭಕ್ಕೆ ಕಾರಣರಾದವರು ಯಾರು ಎಂಬ ಪ್ರಶ್ನೆಗೆ ಡ್ರೈವರ್ ಎಂಬ ಹೆಸರು ಹೇಳಿದಳು. ಆದರೆ ತಾನು ನೀರು ಹಾಕಿಕೊಂಡು ಒಂದು ತಿಂಗಳ ಮೇಲೆ ಹದಿನೈದು ದಿನವಾಯ್ತಲ್ಲ ಎಂಬ ಆತಂಕಕ್ಕೆ, ತುಮುಲಕ್ಕೆ ಒಳಗಾದ ರೇಣು ತನಗೂ ಮುಂದೆ ಪಂಚಾಯ್ತಿ ಸೇರಿಸಿ ಕೇಳಿದರೆ ಯಾರ ಹೆಸರು ಹೇಳಬೇಕು ಎಂಬ ಗೊಂದಲಕ್ಕೆ ಬಿದ್ದು

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈ ತನಕ, ಪಾಲು, ಅಲಕಾಳ ಡೈರಿಯ ಪ್ರೀತಿಯ ಪುಟಗಳು, ಪು ೨೬೪.

೨. ಅದೇ, ಪು, ಪು ೨೬೭.

ತನ್ನೂರಿನ ಹೊಸ ಡಾಕ್ಟರ್ ಹೆಸರು ಹೇಳಿಬಿಡಲೇ ಎಂದು ಯೋಚಿಸುವ ಮುಗ್ಧೆ. ತನ್ನ ಮುಟ್ಟು ಮುಂದೆ ಹೋದ ಕಾರಣ ತಿಳಿಯದೆ ಆತ್ಮಹತ್ಯೆ ಮಾಡಿಕೊಳ್ಳಲು ಕೆರೆಬಳಿ ಹೋದಾಗ ರೇಣು ತಾಯಿಯೊಂದಿಗೆ "ಅಜ್ಜಿ ಯೋಳ್ತಿತ್ತಲ್ಲ ಅದ್ನೇ ಕ್ಯಾಳ್ತ ಇದ್ದಿ, ಹಿಂದ್ಲ ಓಣಿ ಆವಮ್ಮ ಮಾಡಿದ್ದ ಅಜ್ಜಿ ಸರಿ ಅಂತದೆ. ಚೆನ್ನೂರಕ್ಕ ನ್ಯಾಣ್ ಹಾಕ್ಕಂಬೇಕು. ಅನ್ನಾಹಂಗೆ ವೂರೆಲ್ಲಾ ಮಾತಾಡ್ತು. ಅದ್ಯಾಕ್ ಹಂಗೆ ಅಂತೀನಿ. ಕುಂತಿ ಮಾಡುದ್ ಸರಿ ಅಂದ್ರಾ ಆವಮ್ಮ ಮಾಡಿದ್ ಸರಿ. ಆವಮ್ಮ ಮಾಡಿದ್ ಸರಿ ಅಂದ್ರಾ ಚೆನ್ನೂರಕ್ಕ ಮಾಡಿದ್ ಸರಿ. ಚೆನ್ನೂರಕ್ಕ ಮಾಡಿದ್ ಸರಿ ಅಂದ್ರಾ...." ಎಂದು ಮಾತು ಮುಗಿಸುವ ಮೊದಲೇ ಅವಳ ತಾಯಿ "ನೀ ಮಾಡಾದ್ ಸರಿ ಅಂತ್ಲಾ. ಅಯ್ಯಾ ಅಯ್ಯಾ ಚಂಡಾಲ್ ಮುಂಡೇದೆ. ನೀನಾಡ ಮಾತಗೋಳ್ ಮರ್ವಾದೆಯಾಗಿ ನಾಕ್ ಜನದಂಗೆ ಇವ್ನಿ ಅಂತಲಾ ನಿಂಗೆ ಇಂತಾ ಮಾತಾಡಿ ಬುದ್ಧಿ ಬಂದದ್ದು" ಎಂದು ತಾಯಿ ಮಗಳನ್ನು ಹೊಡೆಯುತ್ತಾಳೆ.

ಅದಕ್ಕೆ ಜಗುಲಿಯ ಮೇಲಿದ್ದ ಅಜ್ಜಿ "ಅದ್ಯಾಕಮ್ಮಿ ಹಂಗೆ ದನುಕ್ ಬಡ್ಡಂಗೆ ಬಡ್ದಯಿ" ಎಂದು ಕೂಗು ಹಾಕಿದ್ದಳು. ನರ್ಸ್ "ಏಯ್ ಯಾರದು? ಮಾದೇವಿ ಮಗಳಲ್ಲವಾ? ರೇಣೂ" ದೊಡ್ಡ ಧ್ವನಿ ಹತ್ತಿರದಲ್ಲಿಯೇ ಕೇಳಿದಂತಾಗ ನೋಡುತ್ತಾಳೆ. "ನಾನೂ ಆವಾಗಿಂದ ನೋಡ್ತಾನೆ ಇದ್ದೀನಿ. ಇದ್ಯಾಕ್ ಇಲ್ಲಿ ಕುಳಿತಿದ್ದಿ ಸ್ಕೂಲ್ ಇಲ್ಲವಾ"? ಎಂದು ಪ್ರಶ್ನಿಸುತ್ತಾಳೆ.

"ಆಡುವ ವಯಸ್ಸಿನಲ್ಲಿ ನೀರು ಹಾಕಿಕೊಂಡು ಬಿಟ್ಟರೆ ಹಾಗೇನೇ ಬೇಜಾರು ಅಲ್ಲಾ. ಏನ್ ಮಾಡಕ್ಕೆ ಆಗುತ್ತೆ. ಅವೆಲ್ಲಾ ನಮ್ಮ ಕೈಯಲ್ಲಿ ಇದ್ಯಾ. ಅವೆಲ್ಲ ಮಾಮೂಲು ಅಂತ ಮಾಮೂಲಿನಂತೆ ಇರಬೇಕು" ಎಂದು ಹೇಳುತ್ತಾಳೆ.

ರೇಣು "ನಾನಿನ್ನೂ ನೀರೇ ಹಾಕಂಡಿಲ್ಲ. ಇನ್ನೇನ್ ಎರಡು ತಿಂಗ್ಳಿಗೆ ಬಂತು..." ಯಾವುದೇ ತಯಾರಿ ಇಲ್ಲದೆ ರೇಣುವಿನ ಬಾಯಿ ನುಡಿದು ಕಂಗಳಿಂದ ನೀರು ಹರಿಯುತ್ತದೆ.

"ಅರೆರೆ ಹುಚ್ಚಿ, ಹೊಸದಾಗಿ ಆದಾಗ ಹಾಗೆ ಒಬ್ಬೊಬ್ಬರಿಗೆ ಪಿರಿಯಡ್ಸ್ ಸರಿಯಾಗಿ ಆಗಲ್ಲ. ಆಮೇಲೆ ಸರಿಹೋಗ್ತದೆ. ಆಮೇಲೂ ಸರಿ ಹೋಗ್ಲಿಲ್ಲಾಂದ್ರೆ ಆಸ್ಪತ್ರೆಗೆ ಬಾ. ಚೆಕಪ್ ಮಾಡಿ ಔಷ್ಧಿ ಕೊಡ್ತಾರೆ. ರೆಗ್ಯೂಲರ್ ಆಗಿ ಬಿಡ್ತದೆ" ಎಂದು ನರ್ಸಮ್ಮ ನೀರಿನ ಬಗ್ಗೆ ರೇಣುವಿಗಿದ್ದ ಆತಂಕವನ್ನು ಹೋಗಲಾಡಿಸಿ ತನ್ನ ಮಾತನ್ನು ಮುಂದುವರೆಸಿದಳು. "ಹಾಗಾದ್ರೆ ಏನು ಆಗಲ್ಲವಾ" ಎಂದು ರೇಣು ಕೇಳಿದಾಗ

ರೇಣುವಿನ ಭುಜದ ಮೇಲೆ ತನ್ನೆರಡೂ ಕೈಗಳನ್ನು ಇರಿಸಿ ಅಗಾಧ ಧೈರ್ಯ ನುಡಿಯುತ್ತಾ "ಖಂಡಿತ ಏನೂ ಇಲ್ಲ" ಎಂದು ಹೇಳುತ್ತಾಳೆ.

ರೇಣುವಿಗೆ ನೆಮ್ಮದಿಯಾಗಿ ಲಂಗ ಒದ್ದೆಯಾಗತೊಡಗಿದಾಗ ಮನೆಗೆ ಬಂದ ರೇಖಳನ್ನು ಅಜ್ಜಿ "ಇದ್ಯಾಕಮ್ಮಿ ಇಸ್ಕೂಲ್ ಇಸ್ಟ್ ಬ್ಯಾಗ ಬುಟ್ಬುಬುಡ್ತಾ" ಎಂದು ಕೂಗಿ ಕೇಳಿದಾಗ "ಇಲ್ಲ ಕವ್ವಾ, ನೀರ್ ಹಾಕ್ಕಂಬೇಕು. ಅದ್ಕ ವಾಪಸ್ ಬಂದುಬಿಟ್ಟೆ" ಎಂದು ನಗುತ್ತಾ ನುಡಿಯುತ್ತಾಳೆ. ಇಲ್ಲಿ ನರ್ಸ್ ಅವಳ ಮೂಢ ನಂಬಿಕೆಯನ್ನು ಪರಿಹರಿಸಿ ಬದುಕುವ ವಿಶ್ವಾಸ ತುಂಬುತ್ತಾಳೆ.

ರಂಗಶೆಟ್ಟಿಯೆಂಬ ತತ್ವಜ್ಞಾನಿಯ ನೆನಪುಗಳು ಕತೆಯಲ್ಲಿನ ಪುಟ್ಟ ಹುಡುಗಿ ಯೊಬ್ಬಳು ತನ್ನ ಮನೆಗೆ ರೇಷ್ಮೆ ಹುಳು ಮೇಯಿಸಲು ಬಂದ ರಂಗಶೆಟ್ಟಿಯೆಂಬ ವ್ಯಕ್ತಿಯ ಸೂಕ್ಷ್ಮಾವಲೋಕನವನ್ನು ತಿಳಿಸುತ್ತದೆ. ಕೂಲಿ ಹೆಚ್ಚಿಸದೇ ಇದ್ದಾಗ ಅವನು ಹೊಟ್ಟೆ ನೋವು ಎಂದು ನಾಟಕವಾಡುವುದು, ಅವನ ಹೆಂಡತಿ ಸಾಹುಕಾರನೊಟ್ಟಿಗೆ ಸಂಬಂಧ ಬೆಳೆಸಿರುವ ಸೂಕ್ಷ್ಮಾತಿಸೂಕ್ಷ್ಮಗಳನ್ನು ನವಿರಾಗಿ ವಿವರಿಸಿದ್ದಾಳೆ. ಒಂದು ಮುಗ್ಧ ಕುತೂಹಲಭರಿತ ಹೆಣ್ಣು ಮಗುವಿನ ಬೆರಗು ನೋಟದ ಚಿತ್ರವನ್ನು ಈ ಕತೆಯಲ್ಲಿ ನೊಡಬಹದು.

ಎಂ.ಎಸ್.ವೇದಾರ **ನನ್ನ ದುಃಖಕ್ಕೂ ಇಷ್ಟು ಬೆಲೆ** ಎಂಬ ಕತೆಯ ಕಥಾನಾಯಕಿ ಸ್ವಾತಿ. ನಗರ ಪ್ರದೇಶದ ಸುಶಿಕ್ಷಿತ ಹೆಣ್ಣು ಹಾಗೂ ಕುಂಚ ಕಲಾವಿದೆ. ತಂದೆಯ ಮನೆಯಲ್ಲಿ ಅವಳ ಕಲೆಗೆ ಅವರ ತಂದೆ ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು. ಆದರೆ ಮದುವೆಯಾದ ಮೇಲೆ ಪತಿ ಮಿಹಿರನ ಲೆಕ್ಕಾಚಾರದ ವ್ಯಾಪಾರಿ ಧೋರಣೆ ಪ್ರತಿಯೊಂದು ಮಾತಿಗೂ ಅಣಕು ಇವು ಸ್ವಾತಿಗೆ ಹಿಡಿಸದೇ ದುಃಖಿಸುತ್ತಾಳೆ. ಗೌರಿ ಎಂಬ ಸ್ನೇಹಿತೆ ಅವಳಿಗೆ ಬುದ್ಧಿವಾದ ಹೇಳುತ್ತಿದ್ದಳು. "ಮದುವೆಯೂ ಸಹ ಬದುಕಿನ ಒಂದು ಸತ್ಯ" ಎಂಬುದಾಗಿ ಹೇಳುತ್ತಾಳೆ. ಇಲ್ಲಿ ಸಮಾಜ ಹೆಣ್ಣು ಮಕ್ಕಳನ್ನು ಹೇಗೆ ನಡೆಸಿಕೊಳ್ಳುತ್ತದೆ. ಪುರುಷರು ಯಾವ ರೀತಿ ಹೆಣ್ಣು ಮಕ್ಕಳನ್ನು ತನ್ನ ಹಿಡಿತದಲ್ಲಿರಬೇಕೆಂದು ಬಯಸುತ್ತಾರೆ ಎಂಬುದನ್ನು ಬಿಂಬಿಸುತ್ತದೆ. ಆದರೆ ಸ್ನೇಹಿತೆಯಾದ ಗೌರಿ ಹೆಣ್ಣಿನ ದುಃಖ ಹೆಣ್ಣಿಗೆ ತಾನೇ ತಿಳಿಯುವುದು ಎಂಬಂತೆ ಸಮಾಧಾನ ಮಾಡುತ್ತಾಳೆ.

ಸ್ಥಳೀಯ ಸಂಸ್ಥೆಯೊಂದರ ಸಹಕಾರದಿಂದ ಏರ್ಪಡಿಸಿದ್ದ ಅವಳದೇ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಯಾರು ಅವಳನ್ನು ಕ್ಯಾರೆ ಎನ್ನದೆ ನಂತರ 'ಮೇಡಂ ನೀವೇ ಸ್ವಾತಿಯಂತೆ ಎಂದು ಅತ್ಯಂತ ಅಭಿಮಾನ ಪ್ರದರ್ಶಿಸಿದ ಸಂದರ್ಭವನ್ನು ನೆನೆಯುತ್ತಾಳೆ.

ಅವಳು ಕನ್ನಡಿಯ ಮುಂದೆ ನಿಂತು "ಓರ್ವ ಕಲಾವಿದೆ ಲಕ್ಷಣಗಳು ತನ್ನಲ್ಲಿ ಇಲ್ಲವಾ ತನ್ನ ಮುಖ ಅಷ್ಟು ಪೆದ್ದು ಪೆದ್ದಾಗಿ ಇದೆಯಾ"[೧] ಎಂದು ಗೌರಿಯನ್ನು ಪ್ರಶ್ನಿಸುತ್ತಾಳೆ ಅದಕ್ಕೆ ಗೌರಿ ಸಮಜಾಯಿಸಿ ಕೊಡಲು ಹೋದಾಗ "ಸಾಕು ಮಾರಾಯ್ತಿ ಸಾಹಿತ್ಯ ಮಾತಾಡಬೇಡ"[೨] ಎಂದು ಸ್ವಾತಿಗೆ ಕೈಯನ್ನು ಮುಗಿಯುತ್ತಾಳೆ.

ಮಿಹಿರನ ಲೆಕ್ಕಾಚಾರದಿಂದ ಬೇಸತ್ತು "ಬದುಕು ಲೆಕ್ಕಾಚಾರದ್ದಲ್ಲ"[೩] ಎಂದು ರೇಗಿದ್ದಳು.

ಗೌರಿ "ನಿನ್ನ ಗಂಡ ಬಹಳ ನೆರಸ್ತ ಅವನ ಅನುಭವಾನೂ ಸತ್ಯವಾದುದೇ ಸ್ವೀಕರಿಸಬೇಕು" ಎಂದಾಗ ಸ್ವಾತಿ "ನೀನು ಏನೇ ಹೇಳು ಈ ಲೆಕ್ಕಾಚಾರದ ಬದುಕು ನನಗೆ ಆಗ್ತಾ ಇಲ್ಲ ಉಸಿರು ಕೆಟ್ತದೆ"[೪] ಎಂದಳು ದುಃಖದಿಂದ.

ಮಿಹಿರ ಒಮ್ಮೊಮ್ಮೆ ಸ್ವಾತಿ ಅವನ ಮಾತಿಗೆ ಅಳುವಾಗ "ಯಾಕ್ ಅಳ್ತೀಯಾ ಬಿಡು ಸ್ವಾತಿ. ನಾನು ಏನು ಹೇಳಿದ್ರೂ ತಿಳಿವಳಿಕೆ ಇಲ್ಲ ನಿಂಗೆ" ಎಂದಾಗ "ತಕ್ಕಷ್ಟು ತಿಳಿವಳಿಕೆ ನನಗಿದೆ ನೀನೊಬ್ಬನೇ ಸರ್ವಜ್ಞ ಬೃಹಸ್ಪತಿ ಅನ್ಕೋಬೇಡಾ ಬಿಡು ಮಿಹಿರ"[೫] ಎಂದು ನಗುತ್ತಿದ್ದಳು.

ಗೌರಿ ಅವಳಿಗೆ ಪ್ರತಿಕ್ಷಣವೂ ಸಹ ಸಮಾಧಾನ ಹೇಳಿ ಧೈರ್ಯ ತುಂಬುತ್ತಾಳೆ. ಅವಳಲ್ಲಿ ಮತ್ತೆ ಚೈತನ್ಯ ತುಂಬಿ ಚಿತ್ರ ಕಲೆಯಲ್ಲಿ ತೊಡಗುವಂತೆ ಮಾಡುತ್ತಾಳೆ. ತನ್ನ ಕಣ್ಣೀರಿನ ಕತೆಯನ್ನೇ ಕಲೆಯ ವಸ್ತುವಾಗಿಸಿ ಬರೆದು ಸ್ವಾತಿ 'ನಾರಿ' ಎಂದು ಶೀರ್ಷಿಕೆ ಬರೆಯುತ್ತಾಳೆ. ಕುದಿಯುವ ಜ್ವಾಲೆಯಲ್ಲೇ ಮನೆ ಸಿಡಿದರೂ ಅದನ್ನು ಆಧರಿಸಿ ನಿಂತವಳು ಹೆಣ್ಣು ಎಂಬ ಅರ್ಥದ ಕಲಾಕೃತಿ ರಚಿಸುತ್ತಾಳೆ. ಈ ಕಲಾಕೃತಿ ಚಿತ್ರಕಲಾ ಪರಿಷತ್ತಿನ ಬಹುಮಾನ ಪಡೆದು ವಿದೇಶಿಯರೊಬ್ಬರ ಮೆಚ್ಚುಗೆಗೆ ಪಾತ್ರವಾಗಿ ಅತಿಹೆಚ್ಚು ಬೆಲೆಗೆ ಮಾರಾಟಗೊಳ್ಳುತ್ತದೆ.

"ಗಂಡ ಮಿಹಿರನ ಪ್ರೀತಿ ಮೆಚ್ಚಿಗೆಯು ಸಿಗುತ್ತದೆ. ಒಂದು ವೇಳೆ ಆಕೆ ಏನಾದರೂ ಹಿಂಜರಿಕೆಯಿಂದ ನಲುಗಿ ಬೆಂಡಾಗಿದ್ದರೆ ಅದು ಕಲೆಯಲ್ಲಿ ವ್ಯಕ್ತಗೊಳ್ಳದಿದ್ದರೆ ಅವಳಿಗೆ ಮಾನ್ಯತೆ ಸಿಗುತ್ತಿರಲಿಲ್ಲ. ನೀರಸವಾದ ಬದುಕಿನಿಂದ ದೂರ ಹೋಗುವ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನನ್ನ ದುಃಖಕ್ಕೂ ಇಷ್ಟು ಬೆಲೆ, ಪು. ೩೫೬ ಮತ್ತು ೩೫೭.

೨. ಅದೇ, ಪು. ೩೫೭.

೩. ಅದೇ, ಪು. ೩೫೮.

೪. ಅದೇ, ಪು. ೩೫೯.

೫. ಅದೇ, ಪು. ೩೬೦.

ಯೋಚನೆಯನ್ನು ಸ್ವಾತಿ ಮಾಡಿರುತ್ತಾಳೆ. ಸಾಯುವ ನಿರ್ಧಾರ ಕೂಡ ಆಕೆಯ ಮನಸ್ಸಿನಲ್ಲಿ ಹುಟ್ಟಿರುತ್ತದೆ"[೧]

ಈ ಬದುಕು ಈ ಗಂಡ ಯಾವುದು ಬೇಡ ಅನ್ನುವಾಗ ಹುಟ್ಟಿದ ಈ ಕಲಾಕೃತಿ ಗಂಡನ ಬಗ್ಗೆ ಸಂಸಾರದ ಬಗ್ಗೆ ಮತ್ತೆ ಆಕರ್ಷಣೆ ತರುತ್ತದೆ. ನನ್ನ ದುಃಖಕ್ಕೂ ಇಷ್ಟು ಬೆಲೆ ಇದೆಯಾ? ಎಂಬ ಸ್ವಾತಿ ಪ್ರಶ್ನೆಗೆ ಅವಳ ಗೆಳತಿ ಕೊಡುವ ಸಾಂತ್ವಾನವೆಂದರೆ "ಎಸ್ ಮೈ ಡಿಯರ್' ಇನ್ನು ನಿನ್ನ ಜೀವನಕ್ಕೆ ಎಷ್ಟು ಬೆಲೆ ಇರಬಹುದು ಯೋಚ್ನೆ ಮಾಡು"[೨] ಎಂಬ ಸಾಂತ್ವಾನದ ಮಾತೇ ಅವಳಿಗೆ ಚೈತನ್ಯ ತುಂಬುತ್ತದೆ.

ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ ಕತೆಯಲ್ಲಿ ಮಂಜುಳ ಸುಂದರವಾದ ಮೃದು ಸ್ವಭಾವದ ಹೆಣ್ಣಾಗಿರುತ್ತಾಳೆ. ಇವಳು ಚೆನ್ನಾಗಿದ್ದರಿಂದ ಪುಂಡರಿಗಳು, ಪೋಕರಿಗಳು ಅವಳನ್ನು ರೇಗಿಸುತ್ತಿರುತ್ತಾರೆ. ಆದ್ದರಿಂದ ಅವಳು ಶಾಲೆಯನ್ನು ಬಿಟ್ಟು ಮನೆಯಲ್ಲಿ ಇರುವಂತಹ ಪರಿಸ್ಥಿತಿ ಉಂಟಾಗುತ್ತದೆ.

ನಂತರ ತಂದೆ ತಾಯಿಗಳು ಮದುವೆ ಮಾಡಬೇಕೆಂದು ನಿಶ್ಚಯಿಸಿದಾಗ ಪೋಕರಿಗಳು ಬಂದ ಗಂಡುಗಳಿಗೆಲ್ಲಾ ಯಾವುದಾದರೊಂದು ಸುಳ್ಳನ್ನು ಹೇಳಿ ಮದುವೆಯಾಗದಂತೆ ತಡೆಯುತ್ತಾರೆ.

ಕೊನೆಗೆ ಪಕ್ಕದೂರಿನ ಕೃಷ್ಣಯ್ಯ ಬಂದು ಹೆಣ್ಣು ಕೇಳಿದಾಗ ಮಂಜುಳ ತಂದೆ ಅವನು ದುರ್ವರ್ತನೆಯುಳ್ಳವನು ಮಂಜುಳಗಿಂತ ೧೫ ವರ್ಷ ದೊಡ್ಡವನೆಂದು ತಿಳಿಯದೇ ಮದುವೆ ಮಾಡುತ್ತಾರೆ.

ಮದುವೆಯಾದ ನಂತರ ಗಂಡನ ಭವ್ಯವಾದ ದೇಹ ಆಕಾರ ಕಂಡು ಹೆದರಿಕೆ ಹುಟ್ಟಿಸಿಕೊಂಡು ಬಿಳಚಿಕೊಂಡು ಕೈಕಾಲು ಒದರಲು ಪ್ರಾರಂಭಿಸುತ್ತವೆ. ಇದೇ ಕಾರಣದ ನೆಪದಿಂದ ಹೆಂಡತಿಯನ್ನು ನಿರ್ಲಕ್ಷಿಸಿ ಗಂಡ ನಾಟಕದವರನ್ನು ಮನೆಗೆ ಕರೆತಂದು ಅಕ್ರಮ ಸಂಬಂಧ ಇರಿಸಿಕೊಳ್ಳುತ್ತಾನೆ. ಆಗಲೂ ಸಹ ಮಾತನಾಡದೇ ತನ್ನ ಅಸಹಾಯಕತೆಯಿಂದ ಸುಮ್ಮನಾಗುತ್ತಾಳೆ. ಅಂತೆಯೇ ಇವಳು ಗಂಡನಿಗೆ ಹೆದರಿ ಕೊಂಡು ಹೋಗುವುದನ್ನು ಕಂಡ ನಾಟಕದವಳು ಇವಳನ್ನು ಅಣಕಿಸಿದರೂ ಗಂಡನ ಹೆದರಿಕೆಯಿಂದ ಮೌನವಹಿಸುತ್ತಾಳೆ.

---

೧. ಡಿ.ಸುಮಂಗಳ 'ಆಧುನಿಕ ಕಥಾ ಸಾಹಿತ್ಯದಲ್ಲಿ (ಸಣ್ಣಕತೆಗಳು) ಸ್ತ್ರೀ ಪ್ರತಿಭಟನೆಯ ವಿನ್ಯಾಸಗಳು ಪು. ೩೩೨.

೨. ಎಂಎಸ್.ವೇದಾರ ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನನ್ನ ದುಃಖಕ್ಕೂ ಇಷ್ಟು ಬೆಲೆ; ಪು. ೩೬೫.

ಕೊನೆಗೆ ಗಂಡನ ವರ್ತನೆಯನ್ನು ವಿರೋಧಿಸಲು ಸಾಧ್ಯವಿಲ್ಲದೆ ಅವನು ಹತ್ತಿರಕ್ಕೆ ಬಂದರೆ ಮೂರ್ಛೆ ಬಂದವಳಂತೆ ಬೀಳುತ್ತಾಳೆ. ಅತ್ತೆಯಿಂದ ದುಂಡವ್ವನ ಕತೆ ಕೇಳಿದ್ದ ಮಂಜುಳ ದೆವ್ವ ಹಿಡಿದವಳಂತೆ ಆಡುತ್ತಾಳೆ.

ಪೂಜಾರಪ್ಪ ಎಲ್ಲಾ ವಿಚಾರಿಸಿ ದೆವ್ವ ಬಿಡಿಸಲು ಬಂದಾಗ ಅವಳಿಗೆ ನಿನಗೆ ದೆವ್ವ ಹಿಡಿದಿಲ್ಲ ಆದರೂ ಯಾಕೆ ಹೀಗೆ ಆಡುತ್ತೀಯಾ ಎಂದು ಕೇಳಿದಾಗ "ನನಗೆ ದುಂಡವ್ವ ಆಗ್ಬೇಕು ಅಂತ ಅನ್ನುಸ್ತದೆ ಕಣ್ ಪೂಜಾರಯ್ಯ"[೧].

ಸುಪ್ತವಾದ ಬಯಕೆಯನ್ನು ಬಿಚ್ಚಿಡುತ್ತಾಳೆ. ಮತ್ತು ತನಗೂ ನೆಮ್ಮದಿ ಬೇಕೆಂದೂ ಹೇಳುತ್ತಾಳೆ. ಅದಕ್ಕೆ ಪೂಜಾರಪ್ಪ ಇಂಥ ಮಾರ್ಗ ಹಿಡಿಯದೆ ತನ್ನ ಬದುಕಿಗಾಗಿ ಹೆಣ್ಣುಮಕ್ಕಳು ಸ್ವಲ್ಪ ಬಾಯಿ ಕಲಿತುಕೊಳ್ಳಬೇಕೆಂಬ ಕಿವಿಮಾತಿನಿಂದ ಮಂಜುಳ ಹಾಗೆ ಮಾಡುವ ನಿರ್ಧಾರ ಕೈಗೊಳ್ಳುತ್ತಾಳೆ.


೨) ಉಗ್ರ ಸ್ವರೂಪ, ನಿರ್ಧಾರ ತಳೆಯುವ ಗ್ರಾಮೀಣ ಸ್ತ್ರೀ ಪಾತ್ರಗಳು

ಎಂ.ಎಸ್.ವೇದಾರ **ಪ್ರೀತಿ ಮತ್ತು ಸಾವು** ಕಥಾಸಂಕಲನದಲ್ಲಿನ **ಮಳೆಯ ಒಂದು ರಾತ್ರಿಯಲ್ಲಿ** ಕತೆಯ ಕಥಾನಾಯಕಿ ಚಿತ್ರ. ಚಿತ್ರಾಳು ತನಗೆ ಓದುವ ಆಸೆಯಿದ್ದರೂ ಸಹ ತಂದೆ ತಾಯಿ ಆಸೆಯಂತೆ ಮದುವೆಗೆ ಒಪ್ಪಿ ಹೇಮಂತ್ ಎಂಬ ಶ್ರೀಮಂತ ಹುಡುಗನೊಂದಿಗೆ ಮದುವೆಯಾಗುತ್ತಾಳೆ. ಇದು ಅವಳ ಮುಗ್ಧತೆ ಮತ್ತು ತಂದೆತಾಯಿಗಳ ಮೇಲಿನ ಅವಳ ಪ್ರೀತಿಯನ್ನು ಗೌರವವನ್ನು ತೋರಿಸುತ್ತದೆ.

ಇಲ್ಲಿ ಹೇಮಂತ್ ಚಿತ್ರಾಳ ತಂದೆಯಿಂದ ಹಣವನ್ನು ಪಡೆದೇ ಮದುವೆಯಾಗಿದ್ದರೂ ಚಿತ್ರಾಳು ತಾನು ಹೇಮಂತನಿಗಿಂತ ಹೆಚ್ಚು ಓದಿಲ್ಲದವಳು ಎಂಬ ಅವಳ ಹಿಂಜರಿಕೆಯ ಸ್ವಭಾವವನ್ನು ಅರಿತು ತನ್ನಂತೆ ಅವಳನ್ನು ನಡೆಸಿಕೊಳ್ಳುತ್ತಾನೆ. ಮದುವೆಯಾದ ಮೂರು ವರ್ಷಗಳಲ್ಲಿ ಮೂರ್‍ನಾಲ್ಕು ಬಾರಿ ಅವಳಿಗೆ ಅಬಾರ್ಷನ್ ಮಾಡಿಸಿ ಅವಳು ನರದೌರ್ಬಲ್ಯಕ್ಕೆ ಒಳಗಾಗುವಂತೆ ಮಾಡುತ್ತಾನೆ. "ಈಗಲೇ ನಮಗೆ ಮಕ್ಕಳು ಯಾಕೆ ಚಿತ್ರಾ ಇನ್ನು ಒಂದೆರಡು ವರ್ಷ ಹಾಯಾಗಿರೋಣ" ಎಂದು ಕನಸಿನ ಸೌಧ ಕಟ್ಟಿ ಅವಳ ಎರಡು ಕಾಲುಗಳು ಶಕ್ತಿಹೀನವಾಗಲು ಕಾರಣವಾಗುತ್ತಾನೆ.

---

೧. ಎಂಎಸ್.ವೇದಾರ ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನನ್ನ ದುಃಖಕ್ಕೂ ಇಷ್ಟು ಬೆಲೆ, ಪು. ೪೧೦.



ಉಗ್ರ ಸ್ವರೂಪ, ನಿರ್ಧಾರ ತಳೆಯುವ ಸ್ತ್ರೀಪಾತ್ರಗಳಿಗೆ ಉದಾಹರಣೆಯಾಗಿ.

ಗಂಡನ ಆಸೆಯಂತೆ ನಡೆದುಕೊಂಡು ನರದೌರ್ಬಲ್ಯದಿಂದ ಕಾಲುಗಳ ಶಕ್ತಿಯನ್ನು ಕಳೆದುಕೊಂಡು ನಡೆಯಲಾರದೆ ತೆವಳಿಕೊಂಡು ಓಡಾಡುವ ಚಿತ್ರಾಳನ್ನು ಅವಳ ಗಂಡ ಪ್ರತಿಬಾರಿಯೂ ಕುಂಟಿ ಕುಂಟಿ ಎಂದು ಕರೆದು ಅವಳನ್ನು ತವರಿಗೆ ಓಡಿಸಲು ಇಚ್ಛಿಸುತ್ತಾನೆ. ಜೊತೆಯ ತಾಯಿಯು ಮಗನಿಗೆ ಬೇರೊಂದು ಹುಡುಗಿಯನ್ನು ಮದುವೆ ಮಾಡಲು ಹುಡುಕುತ್ತಾ ನಳಿನಿ ಎಂಬ ಹುಡುಗಿಯನ್ನು ಗೊತ್ತುಪಡಿಸುತ್ತಾರೆ. ತನ್ನಿಂದಲೇ ತನ್ನ ಹೆಂಡತಿಗೆ ಈ ಪರಿಸ್ಥಿತಿ ಒದಗಿ ಬಂದಿದೆ ತಾನು ಅವಳಿಗೆ ಮೋಸ ಮಾಡಬಾರದು ಅವಳಿಗೆ ಮಾನಸಿಕ ಸ್ಥೈರ್ಯ ತುಂಬಬೇಕು ಎಂಬುದನ್ನು ಬಿಟ್ಟು ಕುಂಟಿ ಎಂದು ಜರಿದಾಗ ಆತನ ವರ್ತನೆಗಳನ್ನು ಖಂಡಿಸುತ್ತಾ "ಯಾಕೆ ಹೀಗೆ ಸದಾ ಕುಂಟಿ ಕುಂಟಿ ಅಂತ ಹೇಳ್ತಿರಾ ಡಾಕ್ಟರೇ ಹೇಳಿಲ್ವಾ ನನ್ನ ಈ ಸ್ಥಿತಿಗೆ ಕಾರಣ ಏನೂಂತ, ನೀವು ತಾನೇ ನನ್ನ ಈ ಸ್ಥಿತಿಗೆ ತಂದಿದ್ದು ನನಗೆ ಧೈರ್ಯ ತುಂಬಿ ಒಲವಿನಿಂದ ನೋಡಿಕೊಳ್ಳಬೇಕಾದ ನೀವೆ ಹೀಗೆ ಆಡಿಕೊಂಡರೆ ನನಗ್ಯಾರು ಈ ಗತಿ"[೧]

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಮಳೆಯ ಒಂದು ರಾತ್ರಿಯಲ್ಲಿ, ಪು. ೪೭.



ಎಲ್ಲರ ಎದುರಿಗೆ ಸೊಸೆಯನ್ನು ಪ್ರೀತಿಯಿಂದ ನೋಡಿಕೊಳ್ಳುವ ಅತ್ತೆ. ಅವಳು ಒಬ್ಬಳೇ ಇರುವಾಗ ಅವಳನ್ನು ಮೊನಚಾದ ಮಾತುಗಳಿಂದ ಚುಚ್ಚಿ ನೋಯಿಸುತ್ತಾಳೆ. ಇದನ್ನೆಲ್ಲಾ ಸಹಿಸಲು ಆಗದೆ ತಂದೆಯ ಮನೆಗೆ ಹೋಗೋಣವೆಂದರೆ ತಂದೆಯನ್ನು ಕೇಳಿದಾಗ ಸರ್ಕಾರಿ ಅಧಿಕಾರಿಯಾಗಿರುವುದರಿಂದ ಲಾಯರ್‌ನೊಂದಿಗೆ ಮಾತನಾಡಿ ಮುಂದಿನ ಹೆಜ್ಜೆ ಇಡುವವರೆಗೆ ಇಲ್ಲಿಯೇ ಇರಲು ಸಲಹೆ ನೀಡುತ್ತಾರೆ. ಹೇಮಂತ್ ತಾನು ಎರಡನೇ ಮದುವೆಯಾಗಲಿರುವ ನಳಿನಿಯ ಪೋಟೋವನ್ನು ತಂದು ತೋರಿಸಿ ಆಕೆಯೊಡನೆ ತಾನು ಹೋದ ಪಿಕ್‌ನಿಕ್ ಮತ್ತು ಫಿಲಂಗಳ ಬಗ್ಗೆ ವರ್ಣಿಸಿ ಚಿತ್ರಾಳ ಮನ ನೋಯಿಸುತ್ತಾಳೆ. ಆದರೆ ಚಿತ್ರಾ ಇದ್ಯಾವುದಕ್ಕೂ ಹೆದರದೆ ಇದ್ದಾಗ ಅವಳು ಹೆದರಿ ಸಾಯಲೆಂದು ಊರ ಹೊರಗಿನ ಬಯಲಿನಲ್ಲಿ ಇರುವ ಒಂಟಿ ಮನೆಯಲ್ಲಿ ಆಕೆಯನ್ನು ತಂದಿರಿಸುತ್ತಾನೆ.

ರಾತ್ರಿಯ ಭೀಕರ ಮೌನದಲ್ಲಿ ಸುರಿಯುವ ಮಳೆಯಲ್ಲಿ ಒಬ್ಬಳನ್ನೇ ಬಿಟ್ಟು ಹೋಗಿದ್ದ ಹೆಮಂತ್ ಬಂದು ಬಾಗಿಲನ್ನು ಬಡಿಯುತ್ತಾನೆ. ಕರೆಂಟ್ ಹೋದ ಸಂದರ್ಭವಾದ್ದರಿಂದ ಮೊಂಬತ್ತಿಗಾಗಿ ಹುಡುಕಾಡುತ್ತಿದ್ದ ಚಿತ್ರಾಳಿಗೆ ಕೇಳಿಸಲೆಂದು ಜೋರಾಗಿ ಬಾಗಿಲು ಬಡಿಯುತ್ತಾನೆ. ಈ ಬಡಿತವನ್ನು ಕೇಳಿ ಹೆದರಿಕೊಂಡ ಚಿತ್ರ ಹೆದರಿಕೆಯಿಂದ ಬಾಗಿಲನ್ನು ತೆರೆಯುತ್ತಾಳೆ. ಒಳ ಬಂದವನೆಂದರೆ ಕ್ರೌರ್ಯ ತುಂಬಿದ ದೆವ್ವದ ರೂಪದ ಗಂಡ ಹೇಮಂತ್. ಹೆದರಿದವಳನ್ನು ಮತ್ತಷ್ಟು ಹಂಗಿಸುತ್ತಾ "ಎಂತಹ ದರದ್ರದ ಹೆಂಡತಿಯನ್ನು ನನ್ನ ತಲೆಗೆ ಕಟ್ಟಿದೆಯೋ ಭಗವಂತಾ ನೆನೆದು ಬಂದೋನಿಗೆ ಒಂದು ಟವೆಲ್ ಕೊಡುವ ಜನಾನು ಗತಿ ಇಲ್ಲವಲ್ಲ" ಎಂದು ಹಂಗಿಸುತ್ತಾನೆ.

"ನನ್ನ ಪಂಚೆ ಎಲ್ಲಿ ಚಿತ್ರಾ" ಎಂದು ಕಿರುಚಿದ ಗಂಡನಿಗೆ ಪ್ರತ್ಯುತ್ತರ ಕೊಡಲಾಗದೆ ಇರುವಾಗ ಹೇಮಂತ 'ನಿನ್ನ ಬರೀ ಕುಂಟಿ ಅಂದುಕೊಂಡಿದ್ದೆ ಕುರುಡೀನೂ ಆಗಿ ಹೋದೆಯಾ?" ಎಂದು ಹೀಯಾಳಿಸಿದವನ ಕ್ರೂರತನಕ್ಕೆ ಪ್ರತಿಯಾಗಿ ಚಿತ್ರ "ಸದ್ಯದ ಸ್ಥಿತೀಲಿ ಕುಂಟಿ ಕುರುಡಿ, ಮೂಕಿ, ಕಿವುಡಿ ಎಲ್ಲ ಆಗಿ ಬಿಟ್ಟರೆ ಚೆಂದ ನನಗೆ"[೧] ಎನ್ನುತ್ತಾಳೆ. ಇಂಥ ಭಯದಲ್ಲೂ ಪ್ರಾಣ ಕಳೆದುಕೊಳ್ಳದೆ ಅದ್ಹೇಗೆ ಇನ್ನೂ ಜೀವಂತವಾಗಿದ್ದಾಳೆಂತ ಆಶ್ಚರ್ಯನಾ ನಿಮಗೆ ಹೇಮಂತಾ? ಸಾಯೋಕೆ ಇರುವ ಧೈರ್ಯದಲ್ಲಿ ಕಾಲುಭಾಗ ಇದ್ದರೂ ಬದುಕಬಹುದು ಅಂತ ಎಲ್ಲೋ ಓದಿದ ನೆನಪು. ಈ ಮಳೆ ಗುಡುಗು, ಸಿಡಿಲು ಹ್ಲೂಂಕರಿಸೋ ಪ್ರಕೃತಿಗಿಂತ ಭಯಂಕರವಾದ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಮಳೆಯ ಒಂದು ರಾತ್ರಿಯಲ್ಲಿ, ಪು. ೪೫.

ಮನುಷ್ಯರೊಂದಿಗೆ ಧೈರ್ಯವಾಗಿ ಬಾಳು ನಡೆಸ್ತಾ ಇರುವಾಗ ಇದಕ್ಕೆಲ್ಲಾ ಹೆದರಿಕೆ ಯಾಕೆ? ನನ್ನ ಆಯಸ್ಸು ತೀರದೇ ನಾನು ಖಂಡಿತಾ ಸಾಯುವ ಹಾಗಿಲ್ಲ ಎಂದರೆ ನೀವೇ ಯಾರಾದರೂ ನನ್ನ ಸಾಯಿಸಬೇಕು ಅಷ್ಟೇ"[೧] ಎಂದು ದೃಢವಾಗಿ ಗಂಡನ ಅಮಾನವೀಯ ಕಾರ್ಯಗಳಿಗೆ ಪ್ರತಿಭಟಿಸಿ ನುಡಿಯುತ್ತಾಳೆ.

ಅದಕ್ಕೆ ಪ್ರತಿಯಾಗಿ ಹೇಮಂತ "ನಿನ್ನನ್ಯಾರು ಉಳಿಸ್ತಾ ಇದ್ದರು, ನೀನು ಬರೆದ ಕಾಗದ ಪತ್ರಾನೆಲ್ಲ ಇಟ್ಟುಕೊಂಡು ಡೈವೋರ್ಸ್ ಮಾಡಿಸ್ತೀನಿ ಅಂತ ನಿಮ್ಮಪ್ಪ ಓಡಾಡ್ತಾ ಇದ್ದಾನಲ್ಲ, ನಿನ್ನ ಸಾಯಿಸಿ ಇನ್ನೂ ಯಾಕೆ ಕಗ್ಗಂಟು ಮಾಡಿಕೊಳ್ಳಲಿ ಇನ್ನಾರೋ ಎಂಟೋ ತಿಂಗಳಲ್ಲಿ ಪಿಶಾಚಿ ತಾನಾಗಿ ತೊಲಗುತ್ತೆ, ನಳಿನೀನಾ ಮದುವೆಯಾಗಿ ಹಾಯಾಗಿರಬಹುದು" ಎಂದು ಹೇಳುತ್ತಾನೆ.

ಗಂಡನ ಮಾತಿನಿಂದ ಬೇಸರಗೊಂಡ ಚಿತ್ರಾ ನರಕ ದ್ವಂದ್ವದಿಂದ ಮೊದಲು ಪಾರಾದರೆ ಮನೋ ಬಲ ಮತ್ತೆ ತಾನಾಗಿಯೇ ಬರುತ್ತದೆ ಎಂದು "ಈ ಬಾಳು ನನ್ನದು ನನ್ನಿಂದ ಅದಕ್ಕೆ ಪರಿಪೂರ್ಣವಾದ ನ್ಯಾಯ ಸಲ್ಲಬೇಕು, ಬೇರೆಯವರು ಸಲ್ಲಿಸದಿದ್ದರೆ ಏನಂತೆ" ಎಂದು ದೃಢ ನಿರ್ಧಾರ ಮಾಡಿಕೊಂಡು ತಂದೆ ಮನೆಗೆ ಹೊರಡಲು ಸಿದ್ಧಳಾಗುತ್ತಾಳೆ.

ಬೆಳಿಗ್ಗೆ ಎದ್ದ ಹೇಮಂತನಿಗೆ ಸೂಟ್‌ಕೇಸಿನೊಂದಿಗೆ ಕಾದು ಕುಳಿತ ಚಿತ್ರಾಳನ್ನು ಕಂಡು ಅಚ್ಚರಿಯಾಯಿತು. "ಏನೋ ಕುಂಟಮ್ಮ ಆಗಲೇ ಎಲ್ಲಿಗೋ ಹೊರಟು ಬಿಟ್ಟ ಹಾಗಿದೆ" ಎಂದು ಅವನ ನುಡಿ ಮುಗಿದೆ ಇರಲಿಲ್ಲ ಕ್ರೋದಗೊಂಡ ಚಿತ್ರಾ ಅವನ ಕುಚೇಷ್ಟೆ ಮಾತಿಗೆ ಪ್ರತಿಯಾಗಿ ಚಿತ್ರ ಗಂಡನ ಕಪಾಳಕ್ಕೆ ಪಟ್ಟನೆ ಹೊಡೆದು "ಮಾತು ಮಾತಿಗೂ ಕುಂಟಿ ಎನ್ನಬೇಡಿ ಹೇಮಂತ, ಹೂವಾಗಿ ಅರಳುವ ಮುನ್ನವೇ ನನ್ನನ್ನು ಹೊಸಕಿ ಈ ಸ್ಥಿತಿಗೆ ತಂದವರು ನೀವು ನಿಮ್ಮ ತಾಳಕ್ಕೆ ತಕ್ಕಂತೆ ಕುಣಿದದ್ದಕ್ಕೆ ತಾನೇ ನನಗೆ ಈ ಸ್ಥಿತಿ ಬಂದಿದ್ದು. ನಾನೂ ನಿಮ್ಮ ಹಾಗೇ ಓದಿ, ಜಗತ್ತಿನ ಅರಿವಿದ್ದರೆ ನಿಮಗೆ ಒಂದು ಕೈ ತೋರಿಸ್ತಿದ್ದೆ. ಪ್ರಪಂಚವೆಂದರೇನೆಂದು ತಿಳಿಯೋ ಮೊದಲೇ ನನ್ನ ಮದುವೆಯಾಗಿ ನಿಮ್ಮ ಶೋಷಣೆಯಿಂದ ಈ ಸ್ಥಿತಿಗೆ ಬಂದೆ. ಅಪ್ಪಾಜಿ ಕೋರ್ಟಿನಲ್ಲಿ ಕೇಸು ಹಾಕೋ ತನಕ ಅಲ್ಲೇ ಇರೂಂತ ಅಂದಿದ್ದರು. ನನಗೆ ಬದುಕು ಮುಖ್ಯ. ಆ ಬದುಕಿಗೆ ಗಂಡಾಂತರ ಬರೋ ಕಡೆ ಇರಲಿಕ್ಕೆ ನನಗೆ ಸಾಧ್ಯವಿಲ್ಲ. ಈ ಜಗತ್ತಿನಲ್ಲಿ ನಿಮ್ಮನ್ನು ಯಾರೂ ಕೇಳದೇ ಹೋದರೂ ನಿಮ್ಮ ಮನಃಸಾಕ್ಷಿ ಕೆಲವು ಪ್ರಶ್ನೆಗಳನ್ನು ಕೇಳಿಯೇ ಕೇಳುತ್ತೆ. ನೀವು ಬಾಳುವ ಪರಿ ಮುಂದೆ ನಿಮಗೆ ಉತ್ತರ ಕೊಡುತ್ತೆ

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಮಳೆಯ ಒಂದು ರಾತ್ರಿಯಲ್ಲಿ, ಪು. ೪೫.

ಅದನ್ನೆಲ್ಲಾ ಜೀವಂತವಾಗಿದ್ದು ನಾನೂ ನೋಡ್ತಿನಿ"[೧] ಎಂದು ಪ್ರತಿಭಟಿಸುತ್ತಾಳೆ. ಪ್ರತಿಯಾಗಿ ಅವಳಿಗೆ ಹೊಡೆಯಲು ಎತ್ತಿದ ಹೇಮಂತನ ಕೈಗಳು ಹಾಗೆ ಇಳಿಯುತ್ತವೆ. ಹೇಮಂತ ಏನೋ ಹೇಳಲು ಹೋದಾಗ ಅದನ್ನು ಹೇಳಗೊಡದೆ ತಿರಸ್ಕಾರ ತೋರಿಸಿ "ಈಗ ನೀವು ಏನೂ ಮಾತನಾಡಿದರೂ ಅದು ನಂಜು. ಅದಕ್ಕೆ ಕೊಲ್ಲುವ ಗುಣ ಒಂದೇ ಇರೋದು ಅರ್ಥ. ಧ್ವನಿ ಏನೂ ಇಲ್ಲ ಆಡೋ ಮಾತನ್ನೆಲ್ಲಾ ಕೋರ್ಟಿನಲ್ಲಿ ಆಡಿ ಸದ್ಯಕ್ಕೆ ನನ್ನನ್ನು ಈಗ ಬಸ್ ಸ್ಟ್ಯಾಂಡಿಗೆ ದಯವಿಟ್ಟು ಡ್ರಾಪ್ ಮಾಡಿಬಿಡಿ"[೨] ಎನ್ನುತ್ತಾ ಕಾಲುಗಳನ್ನು ಬಲವಾಗಿ ಎಳೆಯುತ್ತಾ ಛಲದಿಂದ, ಆತ್ಮವಿಶ್ವಾಸದಿಂದ ಹೊರ ನಡೆಯುತ್ತಾಳೆ.

"ಈ ಕತೆಯಲ್ಲಿನ ಚಿತ್ರಾಳ ಕಾಲುಗಳು ಸ್ವಾಧೀನ ತಪ್ಪಿದ್ದರೂ ಗಂಡನ ಕ್ರೌರ್ಯದ ಮಾತಿಗೆ ಹೆದರಿ ಹಿಂದೆ ಬರದವಳು ನಂತರದಲ್ಲಿ ಕುಳಿತು ವಿವೇಚಿಸಿ ತವರಿಗೆ ಮರಳಲು ಅವಳು ನಿರ್ಧರಿಸುವ ಹಿನ್ನೆಲೆಯಲ್ಲಿ ತಾತ್ವಿಕ ವಿಚಾರಗಳಿವೆ."[೩]

ತನ್ನ ಕಾಲು ಸ್ವಾಧೀನ ಕಳೆದುಕೊಳ್ಳಲು ಕಾರಣವಾದವನ ವ್ಯಂಗ್ಯದ ಮಾತು ಅವಳನ್ನು ರೊಚ್ಚಿಗೆಬ್ಬಿಸಿ ಗಂಡನ ಮೇಲೆ ಕೈ ಮಾಡುವಂತೆ ಮಾಡುತ್ತದೆ. ಜೊತೆಗೆ ಚಿತ್ರಾಳ ಮನೆ ಬಿಡುವ ನಿರ್ಧಾರ ಅವಳ ಬದುಕಿನ ಅದಮ್ಯ ಪ್ರೀತಿ, ಧೈರ್ಯಗಳು ಅವಳನ್ನು ಹೆಂಬೇಡಿಯಂತೆ ಬೆನ್ನು ತಿರುಗಿಸದ ದೃಢ ಮನದ ಹೆಣ್ಣಾಗಿ ಇಲ್ಲಿ ಚಿತ್ರ ಕಾಣಬರುತ್ತಾಳೆ.

ಹಂದಿ ಮತ್ತು ದಯಾದಿ ಕತೆಯಲ್ಲಿ ದಯಾದಿ ಕಲಹ ಹೇಗಿರುತ್ತದೆಂಬುದನ್ನು ವೇದಾರವರು ತೋರಿಸಿದ್ದಾರೆ. ಇಲ್ಲಿ ಈರಜ್ಜ ಮತ್ತು ಜುಂಜಜ್ಜ ಅಣ್ಣ ತಮ್ಮಂದಿರು. ಈರಜ್ಜ ತಂದ ಎತ್ತುಗಳನ್ನು ತನಗೆ ಮಾರಲಿಲ್ಲ ಎಂಬ ಕಾರಣಕ್ಕಾಗಿ ಜುಂಜಜ್ಜ ಈರಜ್ಜನನ್ನು ಹಲವಾರು ಪೇಚಿಗೆ ಸಿಕ್ಕಿಸುತ್ತಾನೆ. ಈರಜ್ಜ ತಂದ ಎತ್ತುಗಳು ಮಾರವ್ವನ ಎಮ್ಮೆಗಳನ್ನು ತಿವಿದು ಗಾಯಗೊಳಿಸಿದ್ದರಿಂದ ಮಾರವ್ವನ ಪರವಹಿಸಿ ಜುಂಜಜ್ಜ ಪಂಚಾಯಿತಿ ಕರೆಸುತ್ತಾನೆ. ಪಂಚಾಯಿತಿಯಲ್ಲಿ ಈರಜ್ಜ "ನಾಯೇನ್ ಯೋಳ್ಲಿ ಪಟೇಲ್ರೆ, ನನ್ನ ಎತ್ತುಗೋಳ ತಂದಾಗಿಂದ ಇವರ್ದೆಲ್ಲಾ ಇದೇ ರೆಸ್ರು ನಾ ಯೇನ್ ಅವ್ಕೆ ಎಮ್ಮೆ ತಿವೀರಿ ಅಂತ ಹೇಳೋಟ್ನಾ ಈಗೇನಾಗದೆಂತ ಅವಳು ನ್ಯಾಯ ಸೇರ್ಸಿದ್ದು"

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈ ತನಕ ಪ್ರೀತಿ ಮತ್ತು ಸಾವು, ಮಳೆಯ ಒಂದು ರಾತ್ರಿಯಲ್ಲಿ, ಪು. ೪೫–೪೬

೨. ಅದೇ, ಪು. ೪೯–೫೦

೩. ಡಿ. ಸುಮಂಗಳ ಆಧುನಿಕ ಮಹಿಳಾ ಕಥಾ ಸಾಹಿತ್ಯದಲ್ಲಿ(ಸಣ್ಣಕಥೆಗಳು) ಪ್ರತಿಭಟನೆಯ ವಿನ್ಯಾಸಗಳು, ಮೈ.ವಿ.ವಿ. ೨೦೦೯

ಎಂಬುದಾಗಿ ಈರಜ್ಜ ಪ್ರಶ್ನಿಸುತ್ತಾನೆ. ಧೈರ್ಯದಿಂದ ರೋಸಿದ ಈರಜ್ಜ ಎತ್ತುಗಳಿಂದಲೇ ಇವೆಲ್ಲಾ ತೊಂದರೆ ಎಂದು ಅವುಗಳನ್ನು ಮಾರಿ ಬರುತ್ತಾಳೆ.

ಎತ್ತುಗಳು ಕೈ ಜಾರಿದರೂ ಸಹ ಮಾದವ್ವನ ಹಟ್ಟಿ ಕೊಡುತ್ತಾಳೆಂದು ಆಸೆ ಇರಿಸಿಕೊಂಡಿದ್ದ ಜುಂಜಜ್ಜ ಮಾದವ್ವ ಹಟ್ಟಿ ಮಾರುವುದಿಲ್ಲವೆಂದಳು.

"ಅದ್ಯಾಕಣ್ಣೋ ಹಂಗೆ ಏರ್ಕ್ಕಂಡು ಬತ್ತೀಯಾ ಹಟ್ಟಿ ಮಾರ ದಿನ್ಕೆ ನಿಂಗೆ ಕೊಡ್ತೀವ್ನಿ ಅಂದಿದ್ದಿ ಅಷ್ಟೇಯಾ. ಈಗ ಬ್ಯಾಡ ಅಂತಾರೆ ಅದ್ಕೆ ಮಾರಾಕಿಲ್ಲ ಇರಾ ಒಂದ್ಹಟ್ಟಿ ಮಾರ್ರುಬುಟ್ಟು ನಾವ್ ತಾನೆ ಎಲ್ಲಿಗೋಗೊಂವಾ ಯೇಳು" ಎಂದು ಹೇಳಿ ನುಣುಚಿಕೊಂಡಿದ್ದಳು. ಇದರಿಂದ ಸಿಟ್ಟಿಗೆದ್ದ ಜುಂಜಜ್ಜ ಹುಲ್ಲಿಗೆ ಪಾಲಿಡಾಲ್ ಹಾಕಿ ಆ ಹುಲ್ಲು ಮಾದವ್ವನಿಗೆ ಸಿಗುವಂತೆ ಮಾಡಿ ಮಾದವ್ವ ಎಮ್ಮೆಗಳಿಗೆ ಆ ಹುಲ್ಲನ್ನು ಹಾಕಿದಾಗ ಅವು ಸಾಯುತ್ತವೆ. ಅದರ ಆರೋಪವನ್ನು ಸಹ ಈರಜ್ಜನ ತಲೆಗೆ ಗಂಟಿ ಹಾಕಲಾಗುತ್ತದೆ.

ಈ ಕತೆಯಲ್ಲಿನ ಮಾದವ್ವ ದಿಟ್ಟತನದಿಂದ ಉಗ್ರ ಸ್ವರೂಪದ ಹೆಣ್ಣು. ತನ್ನ ಮನೆಯ ಎಮ್ಮೆಗಳಿಗೆ ಈರಜ್ಜನ ಎತ್ತುಗಳು ತಿವಿದು ಗಾಯ ಮಾಡಿದ ಸಂದರ್ಭದಲ್ಲಿ ಜುಂಜಜ್ಜನ ಚಿತಾವಣೆಯಿಂದ ಮಾದವ್ವ ಈರಜ್ಜನ ಮೇಲೆ ನೇರ ಆರೋಪ ಮಾಡುತ್ತಾಳೆ.

"ಈರಪ್ಪೋರಾ ಎತ್ತುಗಳು ನಮ್ಮ ಎಮ್ಮಿಗೆ ತಿವಿದು ಗಾಯ ಮಾಡಿ ಬುಟ್ಟಿವೆ. ಇಂವಾ ಊರಾಗಿಲ್ದ ಎತ್ತುಗೋಳ್ನ ತಂದುಬುಟ್ಟೀನಿಂತಾ ನೆಟ್ಟಗೆ ಮೂಗ್ದಾರ ಹಾಕ್ದೆ ಬುಟ್ರೆ ಹೆಂಗೆ. ಬ್ಯಾರೆಯೋರ ದನಕರುಗಳು ಯಾನಾಗಬೇಕು"[೧] ಎಂದು ಪಂಚಾಯಿತಿ ಕಟ್ಟೆಯಲ್ಲಿ ನಿರ್ಭಿತಿಯಿಂದ ನುಡಿದಿದ್ದಳು.

ಇವಳು ನ್ಯಾಯ ಕೇಳುವ ಗಟ್ಟಿ ಹೆಂಗಸಾಗಿ ಕಂಡುಬರುತ್ತಾಳೆ. ಈರಜ್ಜನ ಮನೆಯ ಮುಂದೆ ತಿರುಗಾಡುವಾಗೆಲ್ಲ ಹಿಡಿಶಾಪ ಹಾಕುವ ಮಾದವ್ವನ ಬಾಯಿಗೆ ಕಡಿವಾಣವೊಂದು ಇರುವುದಿಲ್ಲ. ಎಮ್ಮೆಗಳು ಸತ್ತಾಗ "ಸಂತೋಷ ಆಯ್ತಾ ಈರಪ್ಪಾ, ನನ್ನ ಎಮ್ಮೆಗೋಳ ಬಾಯ್ಗೆ ಮಣ್ಣಾಕಿ ನಂಗೂ ಮಣ್ಣಾಕ್ಬುಟ್ಟಲ್ಲ"[೨] ಎನ್ನುತ್ತಾಳೆ.

ಎಮ್ಮೆಗಳ ಸಾವನ್ನು ನೆನಪಿಸಿಕೊಂಡು 'ಅವರ ಮನೆ ಹಾಳಾಗ ಮಾರಿಹೊಕ್ಕ, ಮಕ್ಕಳು ತಿನ್ಕಳಾ, ಹಟ್ಟಿ ದೀಪ ಹಾರಾ ಇವರಿಗೆಲ್ಲಾ ನಾನು ನೆಟ್ಗೆ ಮಾಡ್ತೀನಿ,

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ ಹಂದಿ ಮತ್ತು ದಯಾದಿ, ಪು. ೮೨.

೨. ಅದೇ.,

ಕೊಳ್ಳೆಗಾಲಕ್ಕೆ ಹೋಗಿ ಸರಿಯಾದ ತಡೆಹೊಡಿಸ್ಕೊಂಡು ಬಂದೀವ್ನಿ"[೧] ಎಂದು ಕೆಣಕಿ ಮಾತನಾಡುತ್ತಾಳೆ. ಜುಂಜಜ್ಜ "ಇದ್ಯಾಕಮ್ಮೀ ಮಾದಿ ಇನ್ನೂ ನಿಲ್ಲಿಸ್ಯೇ ಇಲ್ಲವಾ ನಿನ್ನ ಶಾಪನಾ" ಎಂದು ಮತ್ತಷ್ಟು ಅವಳ ಕೋಪವನ್ನು ಹೆಚ್ಚಿಸಿದಾಗ ಮಾದವ್ವ ಮತ್ತಷ್ಟು ಸಿಟ್ಟು ಸೆಡವಿನಿಂದ "ಎದುರ್ಗೆ ಕಣ್ಣಿಗೆ ಬಡಿಸ್ಕೊಂಡು ಕುಂತೋರೆ, ನನ್ನ ದುಃಖ ಹೆಂಗ ಇಳೀತದೆ ಯೇಳು ಮಾಡಾದು ಮಾಡ್ಬುಟ್ಟು ನಾನಲ್ಲ ಗಾಂಧಾರಿ ಅನ್ನಂಗೆ ಕುಂತೋರೆ. ಕೊಳ್ಳೇಗಾಲಕ್ಕೆ ಹ್ವಾಗಿ ತಡ ವಡೆಸಿಕ್ಕಂಡು ಬಂದಿವ್ನೀ ನೋಡ್ತಾ ಇರು ಮಾಡ್ದೋರ ಮನೆಯೆಂಗೆ ಹಾಳಾಯ್ತದೇಂತ, ಅದ್ಕೂ ಎನೂ ಆಗ್ದೆ ವೋದ್ರೆ ಹಂದಿ ಬುಡ್ತೀನಿ. ಮಾಡ್ದೋರಾ ಮನೆ ಹೆಂಗ್ ಆಯ್ತದೇಂತ ನಿನ್ನ ಕಣ್ಣ ಮುಂದೇನೆ ಗೊತ್ತಾಯ್ತದೆ"[೨] ಎಂದು ಬೈಯ ತೊಡಗುತ್ತಾಳೆ. ಕೈಯಲ್ಲಿ ಹಂದಿಬಿಡಲು ಹಣವಿಲ್ಲದಿದ್ದರೂ ಎದುರಾಳಿಯನ್ನು ಬಗ್ಗುಬಡಿಯುವ ಮನಸ್ಸಿನಿಂದ ಸೇಡಿನಿಂದ ಉಗ್ರ ಸ್ವರೂಪದ ಮಾತುಗಳನ್ನೇ ಆಡುವ ಗಯ್ಯಾಳಿ ಹೆಣ್ಣಾಗಿ ಮಾದವ್ವ ಈ ಕತೆಯಲ್ಲಿ ಕಾಣಿಸಿಕೊಳ್ಳುತ್ತಾಳೆ.

ಸಾಂತವ್ವನೆಂಬ ಅವ್ವನೂ ರುದ್ರೇಶಿಯೆಂಬ ಕಂದನೂ ಎಂಬ ಕತೆಯಲ್ಲಿನ ಸಾಂತವ್ವ ಸ್ವಾವಲಂಬಿ ಮಹಿಳೆಯರನ್ನು ಪ್ರತಿನಿಧಿಸುವಂತದ್ದು ಈ ಕತೆಯ ನಾಯಕಿ ಚಿಕ್ಕ ವಯಸ್ಸಿಗೆ ಮಾಸಯ್ಯನನ್ನು ಮದುವೆಯಾಗಿ, ಮದುವೆಯಾದ ಐದು ವರ್ಷದೊಳಗೆ ನಾಲ್ಕು ಮಕ್ಕಳನ್ನು ಪಡೆದು ಅವುಗಳನ್ನು ಕಟ್ಟಿಕೊಂಡು ಕತ್ತೆಯಂತೆ ದುಡಿಯುತ್ತಿದ್ದರೂ ಗಂಡ ಮಾನಯ್ಯ ಹೆಂಡತಿಗೆ ದುಡಿದು ಹಾಕದೆ ಕೆಮ್ಮುತ್ತಾ ಕ್ಯಾಕರಿಸುತ್ತಾ ಕುಳಿತೇ ಕಾಲಕಳೆಯುವ ಭೂಪ. ಆದರೂ ಗಂಡನ ಈ ಕೆಲಸಕ್ಕೆ ತುಟಿ ಎರಡು ಮಾಡದ ಸಾಂತವ್ವ ತಂದೆಯನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಕಣ್ಣು ಬುಡಾಕೆ ಮುಂಚೆನೇ ಕಂಡೋರ ಹಟ್ಟೀಗೆ ಕೊಟ್ಟುಬುಟ್ಟೆ, ಏನು ಯೆತ್ತ ಅಂತ ವಿಚಾರಿಸ್ನಿಲ್ಲ. ಆ ಪುಣ್ಯಾತ್ಮನಾ ಈ ನಾಕೈಕಳ್ನ ಕಟ್ಕಂಡು ದುಡ್ಕಂಡೇ ತಿನ್ನಬೇಕು ನಿನ್ನೆ ದುಡಿದ್ ಸಾಕ್ತಿದ್ನಲಪ್ಪಾ...[೩] ಎಂದು ಕೋಪದಿಂದ ಹೇಳುತ್ತಾಳೆ.

ರೋಗಿಷ್ಟ ಮಾನಯ್ಯನ ದಾಯಾದಿಗಳೆಲ್ಲ ಸುಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಮಾನಯ್ಯನ ಹೆಂಡತಿ ಮಾತ್ರ ಕೂಲಿನಾಲಿ ಮಾಡ್ತಾ ಉಪ್ಪು ಗಂಜಿ ಅಂತ ದುಡಿಯುತ್ತಿದ್ದಳು. ಎಲ್ಲರಂತೆ ತಾವೂ ಆಗಬೇಕು ಎಂಬ ಛಲ ಸಾಂತವ್ವನಿಗೆ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ ಹಳು ಮತ್ತು ದಯಾದಿ, ಪು. ೮೨.

೨. ಅದೇ, ಪು ೮೪.

೩. ಎಂಎಸ್.ವೇದಾ ಸಾಂತವ್ವನೆಂಬ ಅವ್ವನೂ ರುದ್ರೇಶಿಯೆಂಬ ಕಂದನೂ, ಪು. ೧೨೭.

ಬರುವಾಗಲೇ ಮಾನಯ್ಯ ಕಿರುಮಗುವಿಗೆ ಆರು ತಿಂಗಳು ಇರುವಾಗಲೇ ಕುಂತಲ್ಲೇ ಪ್ರಾಣಬಿಡುತ್ತಾನೆ.

ಚಿಕ್ಕ ವಯಸ್ಸಿನಲ್ಲಿ ವಿಧವೆಯ ಪಟ್ಟ ಹೊತ್ತು ಕಷ್ಟದಿಂದ ಜೀವನ ನಡೆಸಬೇಕಾದರೆ ಅವಳ ಭಾವ ಅವಳನ್ನು ಕೆಟ್ಟ ದೃಷ್ಟಿಯಿಂದ ನೋಡಿದಾಗ 'ಸರಿಕಭಾವೋ ಏನೋ ಅವ್ರಣ್ಣ ಅಂತ ಬುಟ್ಟೆ. ಇಲ್ಲಾಂದ್ರೆ ನ್ಯಾಯ ಸೇರ್ಸಿ ಬುಡ್ತಿದ್ದೆ. ತೋಳ ಅಳ್ಳಕ್ಕೆ ಬಿದ್ರೆ ಆಳಿಗೊಂದು ಕಲ್ಲು ಅನ್ನಂಗೆ ಬಂದು ಬುಟ್ರಲ್ಲ. ನಿಮ್ಮ ಹಿರೇ ಮಗಳು ನನ್ನ ವಾರ್‍ಗೆಯೋಳು ಅನ್ನೋ ಪಾಪವಾದರೂ ನಿಮ್ಮಾ ಕಾಡಬ್ಯಾಡ್ದಿತ್ತಾ ಸಿವನೇ ಎಂಥ ಕಾಲ ಬಂದೋಯ್ತಪ್ಪಾ"[೧] ಎಂದು ಭಾವನ ಮುಖಕ್ಕೆ ಉಗುಳುವಂತಹ ಧೈರ್ಯವಂತ ಹೆಣ್ಣು.

ಬ್ಯಾಂಕ್ ಮ್ಯಾನೇಜರ್ ರಂಗಸ್ವಾಮಿ ಸಹಾಯದಿಂದ ಐದುಸಾವಿರ ರೂಪಾಯಿ ಸಾಲ ಪಡೆದು ಅದರಿಂದ ಜಮೀನಿನಲ್ಲಿ ವ್ಯವಸಾಯ ಮಾಡಿ ಸ್ವಾವಲಂಬಿ ಮಹಿಳೆಯಾಗುತ್ತಾಳೆ. ಮ್ಯಾನೇಜರ್‌ನನ್ನು "ಸ್ರಿರಂಗಪಟ್ಟಣದ ರಂಗಸ್ವಾಮಿ ನಮ್ಮಪ್ಪ"[೨] ಎಂದು ಹೊಗಳುತ್ತಾಳೆ.

ಇವೆಲ್ಲವನ್ನು ಕಂಡಂತಹ ಸಾಂತವ್ವನ ಭಾವ ಹೊನ್ನೂರಪ್ಪನಿಗೆ ಸಹಿಸದಾಗಿ ಸಾಂತವ್ವ ಮತ್ತು ಮ್ಯಾನೇಜರ್ ಮೇಲೆ ಅಪಪ್ರಚಾರ ಮಾಡುತ್ತಾನೆ. ಅದೂ ಸಾಲದೆಂಬಂತೆ ಸಾಂತವ್ವನ ಹೊಲದ ಮೇಲಿನಿಂದಲೇ ತನ್ನ ಹೊಲಕ್ಕೆ ನೀರನ್ನು ತೆಗೆದುಕೊಳ್ಳುತ್ತಾನೆ. ಅದನ್ನು ಕೇಳಿದ ಸಾಂತವ್ವನಿಗೆ ಜೋಡುಸೇವೆ ಮಾಡಿದ್ದ. ಇದರಿಂದ ಬೇಸರಗೊಂಡ ಸಾಂತವ್ವ ಅವಮಾನ, ಧಾರ್ಮಿಕ ನಂಬಿಕೆಗಳಿಗೆ ಕಟ್ಟುಬಿದ್ದಿದ್ದ ಸಾಂತವ್ವ ಅನ್ನ ನೀರನ್ನು ತೊರೆದು ಸಾಯುವ ಸ್ಥಿತಿಯನ್ನು ತಲುಪುತ್ತಾಳೆ. ಇದಕ್ಕೆ ಕಾರಣವೇನೆಂದು ತಿಳಿಯದಾಗಿ ಕೊನೆಗೆ ರುದ್ರೇಶಿ ಊರಿಗೆ ಬಂದು ಅವ್ವನಿಂದಲೇ ವಿಷಯ ತಿಳಿದು ಭಾವನಿಗೂ ಸಹ ಅದೇ ರೀತಿ ಸೇವೆ ಮಾಡಿಸಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾಳೆ.

ಹೊನ್ನೂರಪ್ಪ ತನ್ನನ್ನು ಬಾಯಿಗೆ ಬಂದಂತೆ ಬೈದು 'ರಂಗಸ್ವಾಮಿಗೆ ಸೆರಗು ಹಾಸಿ ಇಷ್ಟೆಲ್ಲಾ ಸಂಪಾದಿಸ್ದೋಳು ನೀನು' ಎಂದು ಹೇಳಿ ಹೀಯಾಳಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಸಾಂತವ್ವ "ನಾ ಸೆರಗ್ ಹಾಸ್ಕಂಡೆ ಸಂಪಾದ್ನೆ ಮಾಡಿದಿ ಅನ್ಕಾ, ನಾಯೇನ್

---

೧. ಎಂಎಸ್.ವೇದಾ ಸಾಂತವ್ವನೆಂಬ ಅವ್ವನೂ ರುದ್ರೇಶಿಯೆಂಬ ಕಂದನೂ, ಪು. ೧೨೮.

೨. ಅದೇ,

ಮಿಠಾಯಿನ ಪೊಟ್ಣಕ್ಕೆ ಬೇಲಿ ಸಂದೀಲಿ ನಿನ್ನ ಸೊಸೆ ಹಂಗೆ ಸೆರಗ್ ಹಾಸ್ನಿಲ್ವಲ್ಲಾ"[೧] ಎಂದು ಕೋಪದಿಂದ ನುಡಿಯುತ್ತಾಳೆ. ಇಲ್ಲಿನ ಇವಳ ಧೈರ್ಯ ಮೆಚ್ಚುವಂತದ್ದು.

ಮತ್ತೆ ಮಾತನ್ನು ಮುಂದುವರೆಸುತ್ತಾ "ನನ್ನ ಮನೆತನದ ಸೊಸೆಯೂ ಅನ್ನಾಕ್ ಬಂದೀಯಾ ನಿನ್ಗಾ ಜೋಡಲ್ಲಿ ವಡ್ದು ಕುಲಾ ಸೇರಿಸ್ಕಬೇಕು ಕಮ್ಮಿ, ಹಂಗಾರೆಯ ನಿಂಗೇ ಬುದ್ಧಿ ಬರಾದು'ಅಂತ ಕುಣ್ಕಂಡ್ ಕುಣ್ಕಂಡ್ ಬಂದು ಜೋಡಲ್ಲಿ ಹೊಡದ್ ಬುಟ್ಟಾ ಕಪ್ಪಾ"[೨] ಎಂದು ತನ್ನ ದುಃಖ ತೋಡಿಕೊಳ್ಳುತ್ತಾಳೆ.

ತಾಯಿ ಸಾಂತವ್ವನು ಬಹಳ ನಾಜೂಕಿನಿಂದ ತನಗಾದ ಅವಮಾನವನ್ನು ಮಗನೊಂದಿಗೆ ಹೇಳಿಕೊಳ್ಳುತ್ತಾಳೆ. "ನಾ ಯಾರ್ಗೂ ಯೋಳಿಲ್ಲ ರುದ್ರಿ ಈ ಯಿಸಯಾನ, ಸಾಯಾ ಕಡಗಾಲದಲ್ಲಿ ನನ್ನ ಜಾತಿ ಕೆಡಸ್ ಬುಟ್ಟಿನಲ್ಲಪ್ಪಾ ರುದ್ರಣ್ಣ, ನಂಗ್ಯಾಕಪ್ಪಾ ಈ ಬದುಕು ಕುಲ ಸೇರ್ಕಳಾ ಕಾರ್ಯ ಮಾಡುದ್ರೆ ಮಾನ ಮೂರು ಕಾಸಾಯ್ತದೇಂತ ಅದ್ನೂ ಮಾಡ್ಲಿಲ್ಲ ಕಪ್ಪ"[೩] ಎಂದು ದುಃಖ ತೋಡಿಕೊಳ್ಳುತ್ತಾಳೆ. ಅದಕ್ಕೆ ಪ್ರತಿಯಾಗಿ ರುದ್ರೇಶಿ "ನಿನ್ನ ಕುಲ ಕೂಡಿಸಾ ಕೆಲಸವ ನಾನೇಯ ಮಾಡಬೇಕಾದ ರೀತಿ ರಿವಾಜಿನಲ್ಲಿ ಮಾಡ್ತೀನಿ" ಭರವಸೆಯನ್ನು ನೀಡುತ್ತಾಳೆ. ಹೇಳಿದಂತೆಯೇ ಮಾಡಿ ತೋರಿಸುತ್ತಾನೆ. ಸಾಂತವ್ವ ಚಪ್ಪಲಿ ಏಟಿನ ಕರ್ಮದಿಂದ ಮುಕ್ತಿ ಹೊಂದಿ ಮತ್ತೆ ಎಂದಿನಂತಾಗುತ್ತಾಳೆ. ಸ್ವಾಭಿಮಾನಿ, ಪರಿಶ್ರಮದ ಹೆಣ್ಣಾಗಿ ಸಾಂತವ್ವ ಈ ಕತೆಯಲ್ಲಿ ಕಾಣುತ್ತಾಳೆ.

ಎಂ.ಎಸ್.ವೇದಾರವರು ಸ್ತ್ರೀ ಶೋಷಣೆಯ ವಿಭಿನ್ನ ನೆಲೆಗಳನ್ನು ಶೋಷಿಸುವುದರ ಜೊತೆಗೆ ದಲಿತಾಂತರಂಗದ ಬವಣೆಗಳನ್ನು ಅಷ್ಟೇ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಸ್ತ್ರೀಯರು ಎಲ್ಲಿ ಒಂಟಿಯಾಗಿರುತ್ತಾರೋ ಅಲ್ಲಿ ಶೋಷಣೆಗೆ ಒಳಗಾಗುತ್ತಾರೆ. ಆದರೆ ಸಾಂತವ್ವ ಇವಕ್ಕೆಲ್ಲ ಹೆದರದೆ ಮುಂದೆ ನುಗ್ಗಿ ಇಡೀ ಊರೇ ಬೆರಗಾಗುವಂತೆ ಮಾಡುತ್ತಾಳೆ. ದುರ್ಬಲ ಸೋಮಾರಿ ಗಂಡನೊಡನೆ ಹೆಣಗಿ ಬಾಳುತ್ತಾ ಗಂಡ ಸತ್ತ ಮೇಲೆ ಊರಿನಲ್ಲಿ ಒಂದು ನೆಲೆ ಕಂಡುಕೊಂಡ ಸಾಂತವ್ವ ಶುದ್ಧ ಧಾರ್ಮಿಕ ಮನಸ್ಸಿನವಳು, ಚಪ್ಪಲಿ ಹೊಡೆತದಿಂದ ತೀವ್ರ ಕಿನ್ನತೆಗೆ ಗುರಿಯಾದವಳು ಮಗ ರುದ್ರೇಶಿಯ ಉಪಾಯದಿಂದ ಮನೆಯಲ್ಲಿ ಧಾರ್ಮಿಕ ಕಾರ್ಯಗಳು ನಡೆದು ಹೊನ್ನೂರಪ್ಪನಿಗೆ ಚಪ್ಪಲಿಯ ಏಟು ಬಿದ್ದ ನಂತರ ಚೇತರಿಸಿಕೊಳ್ಳುತ್ತಾಳೆ. ಈ

---

೧. ಎಂಎಸ್.ವೇದಾ ಸಾಂತವ್ವನೆಂಬ ಅವ್ವನೂ ರುದ್ರೇಶಿಯೆಂಬ ಕಂದನಾ, ಒಯ, ೧೩೩.

೨. ಅದೇ.

೩. ಅದೇ.

ಕತೆಯಲ್ಲಿ ಎಂ.ಎಸ್.ವೇದಾರವರು ಕಷ್ಟದಲ್ಲಿ ದಿಟ್ಟತನ ತೋರುವ ಗಂಡೆದೆಯುಳ್ಳ ಸಾಂತವ್ವನನ್ನು ಒಂದೆಡೆ ಚಿತ್ರಿಸುತ್ತಲೇ ಗ್ರಾಮೀಣ ಪರಿಸರದಲ್ಲಿ ಜಾತಿಗೆಡುವ ಪ್ರಸಂಗದಲ್ಲಿ ತೀವ್ರ ದುಃಖಕ್ಕೆ ಈಡಾಗಿ ಕೊರಗುವ ಸಾಂತವ್ವನನ್ನು ಚಿತ್ರಿಸಿದ್ದಾರೆ. ಧರ್ಮ, ಆಚರಣೆ, ಸ್ತ್ರೀಯರ ಸೂಕ್ಷ್ಮ ಅಂಶಗಳಾಗಿರು ವುದನ್ನು ಈ ಕತೆಯಲ್ಲಿ ಕಾಣಬಹುದು. ಅಂತಿಮವಾಗಿ ತನಗೆ ಆದ ಅಪಮಾನಕ್ಕೆ ತಕ್ಕ ಶಿಕ್ಷೆಯನ್ನು ಮಗನಿಂದ ಮಾಡಿಸಿದ ಸಾಂತವ್ವ ರುದ್ರ ಸ್ವರೂಪಿಯಾಗಿ ಕಾಣಿಸುತ್ತಾಳೆ.

ಕುರುಕ್‌ಸೇತ್ರವೂ ಕುಂಯ್ಯನೆಂಬ ಬಾಲನ ಕತ್ತಲ ಲೋಕವೂ ಈ ಕತೆಯಲ್ಲಿ ಬರುವಂತಹ ನಾಗವ್ವನಿಗೆ ತೋಂಯ್ಯ ಮತ್ತು ಕುಂಯ್ಯನೆಂಬ ಇಬ್ಬರು ಮಕ್ಕಳು ಇವರು ಕೀಳು ಜಾತಿಗೆ ಸೇರಿದವರು. ಇಲ್ಲಿ ಕುಂಯ್ಯ ಅನೇಕ ಕನಸುಗಳನ್ನು ಕಾಣುತ್ತಾನೆ. ಜೊತೆಗೆ ತಾನು ಊರಿನ ಜಾತ್ರೆಯ ವೇಳೆಗೆ ನಾಟಕ ಕಲಿಯಬೇಕು ತನಗೂ ಒಂದು ಪಾತ್ರ ಬೇಕೆಂದು ಹಂಬಲಿಸಿ ಕೊನೆಗೆ ಪಾತ್ರವನ್ನು ಗಿಟ್ಟಿಸಿಕೊಂಡು ಮನೆಗೆ ಹೋದವನಿಗೆ ತನ್ನ ಮನೆಯ ಕತೆಯನ್ನು ನೆನೆದು ಅಳುವಂತಾಯಿತು ಅದಕ್ಕೆ ತಾಯಿ "ಅಳ್ತಾ ಕುಂತ್ಕಳ್ಕಕ್ಕೆ ಏನಾಯ್ತುಡಾ? ನಿನ್ ಹೆಂಡ್ತಿನ್ ತಿನ್ಕಂಡ್ಯಾ ತೊಂಯ್ಯನ ಕುಂಟೆ ಹ್ಯಾಳಿ ಕಳಿಸಿವ್ನಿ ಮಾನಪ್ವೋರ್ಗೆ ಕುಂಯ್ಯ ವಸಿ ತಡೋಗೆ ಬತ್ತಾನೆ ಅಂತ, ಹ್ವಾಗು ಮುಂಡೆ ಮಗ್ನೆ ಹ್ವಾಗು"[೧] ಎಂದು ಬಯ್ಯುತ್ತಾಳೆ. ಮಗ ಯಿಟ್ಟುಕೊಡು ಮಂತಾ ಎಂದಾಗ "ತೊಂಯ್ಯಾನ್ ಕೈಲೇ ಕೊಟ್ಟಿವ್ನಿ ಇಸ್ಕಾ"[೨] ಎಂದು ಹೇಳುತ್ತಾಳೆ. ಇಲ್ಲಿ ಮನೆಯವರೆಲ್ಲ ಕೂಲಿ ಮಡಿದರೆ ಮಾತ್ರ ದಿನದ ಊಟ ಇಲ್ಲವಾದರೆ ಇಲ್ಲ ಎಂಬಂತಿತ್ತು. ಇಲ್ಲಿ ಕುಂಯ್ಯ ಮನಷ್ಯ ಸಹಜ ಆಸೆಯನ್ನು ತೋರಿದ್ದ ಇಲ್ಲಿ ಕುಂಯ್ಯನಿಗೆ ಅಭಿಮನ್ಯು ಪಾತ್ರ ಸಿಕ್ಕಿತೆಂದು ಕೇರಿಯ ಎಲ್ಲರಿಗೂ ಸಂತೋಷವಾಗುತ್ತದೆ. ನಾಗವ್ವ "ಯನೂಡಾ ಕುಂಯ್ಯ ನಿಂಗಾ ಅಭಿಮನ್ಯು ಪಾರ್ಟ್ ಕೊಟ್ಟಂತ್ರಲುಡಾ, ಯಾಳ್ ಬಾರ್ದಾ ನೀನು"[೩] ಎಂದು ಸಂತೋಷದಿಂದ ಕೇರಿಯವರಿಗೆಲ್ಲ ಹೇಳುತ್ತಾಳೆ. ಮಾನಣ್ಣನಿಗೂ ಬಹಳ ಸಂತೋಷವಾಗುತ್ತದೆ.

ಇಲ್ಲಿ ಈ ಕತೆಯಲ್ಲಿ ಬರುವ ಮತ್ತೊಂದು ಸ್ತ್ರೀಪಾತ್ರವೆಂದರೆ ಮಾದೇವಿ ಪಾತ್ರ. ಇವಳು ಕುಂಯ್ಯನೊಂದಿಗೆ ಕೆಲಸಕ್ಕೆ ಹೋಗುತ್ತಿರುತ್ತಾಳೆ. ಕುಂಯ್ಯ ಹಾಡಲು ಪ್ರಾರಂಭಿಸಿದಾಗ ಅವನ ಹಾಡನ್ನು ಕೇಳಿ ನಕ್ಕ ಮಾದೇವಿಯ ಕೆನ್ನೆಯನ್ನು ಕುಂಯ್ಯ

---

೧. ಎಂ.ಎಸ್.ವೇದಾ ಕುರುಕ್‌ಸೇತ್ರವೂ ಕುಯ್ಯನೆಂಬ ಬಾಲನ ಕತ್ತಲ ಲೋಕವೂ, ಪು. ೧೪೪.

೨. ಅದೇ,

೩. ಅದೇ, ಪು. ೧೪೭.

ಸವರುತ್ತಾನೆ. ಅದೇ ಒಂದು ರಾದ್ಧಾಂತವಾಗುತ್ತದೆ. ಮಾದೇವಿ ಮಾಕಾಳಿಯ ರೂಪ ತಾಳುತ್ತಾಳೆ. "ಥೂ ನನ್ ಮಗನ್ ನಿನ್ ಮುಸುಡಿಗೆ ನಲ್ಲೆ ಬ್ಯಾರೆ ಕ್ಯೇಡಾಗದ"[೧] ಎಂದು ಬೈದು ಅಷ್ಟು ಸಾಲದೆಂಬಂತೆ "ಯಿಟ್ಟಿನ ಮ್ಯಾಕೆ ನೆಟ್ಟಿಗ್ ಕಾರಾ ಕಾಣ್ದೆ ಹ್ವಾದ್ರೂ ಸರಿ ಕಣ್‌ಲಾ ನಲ್ಯೇ ಬೇಕೆಗದಾ ನಿಂಗೆ ನಲ್ಯೆ. ದರ್ಬತ್ ನ್ವಾಡು ದರ್ಬತ್, ಅವ್ವೀss ನನ್ನ ಎಡ್ ಕಾಲುನ್ ಉಂಗುಷ್ಟಕ್ಕೆ ಸಮ ಕಾಣುಲಾ ನೀನು ಅಭಿಮನ್ಯು ಪಾಲ್ಟ್ ಮಾಡುದ್ ಮಾತ್ರುಕ್ಕೆ ಸಮ ಆಗೋದಿ ಅನ್ಕಂಡ್ಯಾ ಹ್ಯೆಂಗಾ"[೨] ಎಂದು ಕುಂಯ್ಯನ ಸಾಮಾಜಿಕ, ಆರ್ಥಿಕ ಕೀಳರಿಮೆ ಕುರಿತು ಮಾತನಾಡುವ ಗಟ್ಟಿ ಹೆಣ್ಣು.

ಈ ವಿಷಯ ಊರಿನವರಿಗೆಲ್ಲ ತಿಳಿದು "ಪರಿವಾರದ ಗಂಡು ಮ್ಯಾಗಲ ಕೇರಿಯ ಹೆಣ್ಣನ್ನು ಮುಟ್ಟುವುದೆಂದರೇನು? ಎಂದು ಪಂಚಾಯ್ತಿ ಕರೆದು ಅವನಿಗೆ ಜುಲ್ಮಾನೆ ವಿಧಿಸುತ್ತಾರೆ. ಇಷ್ಟಾದರೂ ಸಹ ಕುಂಯ್ಯ ಬಿಡುಗಡೆ ಹೊಂದದೆ ಮಾದೇವಿ ದೊಡ್ಡವಳಾದ ದಿನವೇ ಯಾರೋ ಅವಳನ್ನು ಹಾಳು ಮಾಡಿದ್ದನ್ನು ಸಹ ಇವನ ತಲೆಯ ಮೇಲೆ ಹೊರಸಿ ಇವನನ್ನು ಎಲ್ಲರೂ ಹೊಡೆಯುತ್ತಾರೆ ಇಲ್ಲಿ ಸ್ತ್ರೀ ಶೋಷಣೆ ಹೇಗೆ ಸಾಗಿದೆ. ಅಂತೆಯೇ ಅದು ಕೀಳು ಜಾತಿಯವರ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ತೋರಿಸುತ್ತದೆ ಈ ಕತೆ. ಇಲ್ಲಿ ನಾಗವ್ವ ಮತ್ತು ಮಾದೇವಿ ಒಂದೊಂದು ರೀತಿಯಲ್ಲಿ ಶೋಷಣೆ ಅನುಭವಿಸಿದವರಾಗಿದ್ದಾರೆ.

ಅಲ್ಲಿ ಕುಂಯ್ಯ ಗಲ್ಲ ಸವರಿದಕ್ಕೆ ಮಾಕಾಳಿಯಾಗಿದ್ದ ಮಾದೇವಿ ಇಲ್ಲಿ ಅತ್ಯಾಚಾರಕ್ಕೆ ಒಳಗಾದ ಮುಗ್ಧ ಹೆಣ್ಣಿನಂತೆ ಕಂಡುಬರುತ್ತಾಳೆ. ಇಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯವನ್ನು ಲೇಖಕಿ ಬಿಂಬಿಸಿದ್ದಾರೆ.

ಪ್ರೀತಿ ಕಡಲು ಬದುಕು ಇತ್ಯಾದಿ ಕತೆಯಲ್ಲಿ ಮಯೂರ ರಿಚಿಯನ್ನು ಪ್ರೀತಿಸಿ ತಂದೆ ಒಪ್ಪದೇ ಹೋದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಅದೇ ಮಯೂರಾಳ ಅಣ್ಣನನ್ನು ಅಂದರೆ ರವಿಯನ್ನು ಪ್ರೀತಿಸಿದ ನಂದ ಎಂಬ ಹುಡುಗಿ ಮಯೂರಳಿಗಿಂತ ಭಿನ್ನ ನಿಲುವು ತಾಳಿದ ಗಟ್ಟಿ ಹೆಣ್ಣು. "ನನಗೆ ಈ ಬದುಕು ಮುಖ್ಯ ರವಿ. ಈ ಬದುಕನ್ನು ಪ್ರಶ್ನಿಸುವಂತಹ ಸಾವಾಗಲಿ ಇತರ ಯಾವುದೇ ಮೌಲ್ಯಗಳಾಗಲಿ ನನಗೆ ಮುಖ್ಯ ಅಲ್ಲ. ಸಾವಿನಾಚೆ ಏನಿದೆಯೋ ನಂಗೊತ್ತಿಲ್ಲ. ನನಗೆ ತಿಳಿದ ವಿಷಯಗಳೇ ಇರಬಹುದು ಅಥವಾ ಅದಕ್ಕಿಂತ ಭಿನ್ನವಾಗಿಯೇ ಇರಬಹುದು. ಆದರೆ ನನಗೆ ಸಂದಿರುವ ಈ ಬದುಕಿನ ಬಗ್ಗೆ ನನಗೆ ಸ್ಪಷ್ಟ ಅರಿವು ತಿಳಿವಳಿಕೆ ಇದೆ. ಈ

೧. ಎಂ.ಎಸ್.ವೇದಾ ಕುರುಕ್‌ಸೇತ್ರವೂ ಕುಯ್ಯನೆಂಬ ಬಾಲನ ಕತ್ತಲ ಲೋಕವೂ, ಪು. ೧೪೯.
೨. ಅದೇ.,

ಬದುಕಿಗೆ ನಾನು ಬೆಲೆಕೊಡ್ತೀನಿ. ಆ ಬೆಲೆಯನ್ನು ನಿರಾಕರಿಸುವಂಥ ಯಾವುದೇ ಮೌಲ್ಯಗಳನ್ನೂ ನಾನು ಒಪ್ಪುವುದಿಲ್ಲ."[೧] ಎನ್ನುತ್ತಾಳೆ. ರವಿಯ ತಂದೆ ಮುಂದೊಂದು ದಿನ ಇವರ ಮದುವೆಗೆ ಒಪ್ಪಿದಾಗ ಸಂತೋಷ ವ್ಯಕ್ತಪಡಿಸುತ್ತಾಳೆ. ದಿಟ್ಟ ಹೆಣ್ಣಾಗಿ ಕಂಡುಬರುತ್ತಾಳೆ ನಂದಾ ಈ ಒಂದು ಕತೆಯಲ್ಲಿ.

ಚೆಲುವ ಮುತ್ತಮ್ಮನ ಪರಸಂಗ ಎಂಬ ಕತೆಯಲ್ಲಿನ ಮುತ್ತಮ್ಮ ನಾಡಗೌಡನ ಮಗಳು. ತೊಳೆದ ಮುತ್ತಿನಂಥವಳು ಅಲ್ಲದಿದ್ದರೂ ಹತ್ತೂರಲ್ಲೂ ಎದ್ದು ಕಾಣುವಂತಹ ಚೆಲುವೆಯೆಂದು ಬಂದು ಗಂಡುಗಳಲ್ಲೆಲ್ಲಾ ದೋಷ ಹುಡುಕುತ್ತಾ ಹದಿನೆಂಟು ವರುಷವಾದರೂ ಮದುವೆಯಾಗದೆ ಕನ್ಯೆಯಾಗಿಯೇ ಉಳಿದಾಗ ಊರಿನವರ ವ್ಯಂಗ್ಯಕ್ಕೆ ತಂದೆ ಬೇಸರಪಟ್ಟುಕೊಳ್ಳುತ್ತಾರೆ.

ಅವರು ಯೋಚಿಸಿ ನಗರದಿಂದ ಬಂದು ಶ್ರೀಮಂತ ಒಳ್ಳೆಯ ಗಂಡು ಬಂದಿತೆಂದು ವರನ ಜೊತೆ ವಿಜೃಂಭಣೆಯಿಂದ ಮದುವೆಯನ್ನು ಮಾಡುತ್ತಾರೆ. ಆದರೆ ಅವರಿಗೆ ಕೆಲವು ದಿನಗಳ ನಂತರ ಮುತ್ತಮ್ಮ ಗಂಡ ಕುಡುಕನೆಂದು ತಿಳಿಯುತ್ತದೆ. ಇದು ಮುತ್ತಮ್ಮಳಿಗೂ ತಲೆನೋವಾಗಿ ಕಾಡುತ್ತದೆ. ಆದರೆ ತಾಯಿ ಮುತ್ತಮ್ಮನಿಗೆ ಅವನು ಎಷ್ಟಾದರೂ ನಿನ್ನ ಗಂಡ "ವಂದುಕೊಂಡು ಹ್ವಾಗುವ"[೨] ಎಂದು ಹೇಳುತ್ತಾಳೆ "ಎಂತೆಂಥದೋ ಕಷ್ಟ ಇರ್ತದೆ ಕವ್ವಾ, ಕಷ್ಟ ಅನ್ನಾದು ಮನಸ್ಸುಂಗೆ ಬರ್ದೆ ಮರುಕ್ ಬಂದಾತಾ, ಸರೋಗಿಸ್‌ಕಂಡ್ ಹ್ವಾಗವ್ವಾ ಗಂಡ ಯೆಂಗಿದ್ರೂ ಅವ್ನೆ ದೇವ್ರಲ್ನಾ ನಮ್‌ಮನೆತನುದ್ ಮಾನಾನಾ ಸೀತೆಯಂಗೆ ಕಾಪಾಡಬೇಕು ತಾಯಿ, ಗಂಡ ಕುಡುಕ ಅಂತ ಮನ್ಸು ಕೆಡಿಸ್ಕಾಬ್ಯಾಡ, ಇವತ್ತು ಹಿಂಗಿರ್ತಾರೆ ನಾಳೆ ಸರೋಯ್ತಾರೆ, ಹಂಗಂದ್‌ಕಂಡ್ ಸಂಬಂಧಾನೇ ಮುರ್ಕಳಕಾಯ್ತದೇನು" ಎಂದು ತಾಯಿ ಬುದ್ಧಿವಾದ ಹೇಳಿದಳು.

"ಎಲ್ಲಾದರೂ ಉಂಟೆ?"[೩] ಎಂದು ತಾಯಿಯ ಮಾತಿಗೆ ಬೆಲೆಕೊಟ್ಟು ಗಂಡನೊಂದಿಗೆ ಹೊರಟು ಹೋದಳು.

ಮತ್ತೆ ಊರಿಗೆ ಬಂದಾಗ ಗಂಡ ಕುಡಿದು ಹಿತ್ತಲಿಗೆ ಹೋಗಿ ಬರುವಾಗ ಅಮಾದಿ ಗುಂಡಿಗೆ ಬೀಳುತ್ತಾನೆ. ಮೊದಲೇ ಕುಡುಕ ಗಂಡನ್ನೊಲ್ಲದ ಮುತ್ತಮ್ಮ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಪ್ರೀತಿ ಮತ್ತು ಸಾವು, ಪ್ರೀತಿ ಕಡಲು ಬದುಕು ಇತ್ಯಾದಿ, ಪು. ೧೬೮ ಮತ್ತು ೧೭೯.

೨. ಎಂ.ಎಸ್.ವೇದಾ, ಚೆಲುವೆ ಮುತ್ತಮ್ಮನ ಪರಸಂಗ, ಪು. ೧೮೧.

೩. ಅದೇ,

ಅಮಾದಿ ಮೆತ್ತಿಕೊಂಡು ಬಂದ ಗಂಡನ ಜೊತೆ ಬಾಳಾಟ ಮಾಡುವುದಿಲ್ಲವೆಂದು ಹಟ ಹಿಡಿಯುತ್ತಾಳೆ. "ಯಜಮಾನ್ರು ಮಾತಾ ಇನ್ನೊಂದಪ ತೆಗುದ್ರೆ ನಾಯಿಂಗೇ ವಾಂತಿ ಮಾಡ್ಕಂಡ್ ಮಾಡ್ಕಂಡ್ ಸತ್ತೋಯ್ತಿನೀ ಕವ್ವಾ"[೧] ಎಂದು ತನ್ನ ದುಃಖವನ್ನು ತಾಯಿಯೊಂದಿಗೆ ತೋಡಿಕೊಳ್ಳುತ್ತಾಳೆ. ಗಂಡ ಸರಿಯಿಲ್ಲದೆ ಹೋದರೆ ಹೆಣ್ಣಿನ ಜೀವನ ಚಿಂತಾಜನಕವಾಗುತ್ತದೆ ಎಂಬುದನ್ನು ಲೇಖಕಿ ಹೇಳಹೊರಟಿದ್ದಾರೆ.

ಯಾರು ಏನೇ ಹೇಳಿದರೂ ಬೆಂಗಳೂರಿನಿಂದ ಮುತ್ತಮ್ಮನನ್ನು ಕರೆದುಕೊಂಡು ಹೋಗಲು ಮೂರ್‍ನಾಲ್ಕು ಬಾರಿ ಕಾರು ಬಂದರೂ ಸಹ ಮುತ್ತಮ್ಮ ಒಪ್ಪಲಿಲ್ಲ. "ಬ್ಯಾಡ ಕವ್ವಾ ಪುನಾ ಅಲ್ಲಿಗ್ ವಾಗು ಅಂತ ಮಾತ್ರ ಅನ್‌ಬ್ಯಾಡಿ. ಯಿರಾಗಂಟ ಒಂದ್ ತುತ್ತ್ ಅನ್ನ ಹಾಕಿ ಸತ್‌ಮ್ಯಾಕೆ ಒಂದ್‌ಯಿಡಿ ಮಣ್ಣಾಕಿ, ಇರೂಬಾಗ್ಲೆ, ಮಣ್ಣಾಕ ಕೆಲ್ಸ ಮಾಡ್‌ಬೇಡಿ"[೨] ಎಂದು ಸಾಯುವ ಮಾತನಾಡಿದ್ದನ್ನು ಕೇಳಿ ತಂದೆತಾಯಿಗಳಿಗೆ ಬಹಳ ಸಂಕಟವಾಯಿತು.

ಬೀಗರು ಮಗನೊಂದಿಗೆ ಮುತ್ತವ್ವನ ಸಂಬಂಧ ಮುರಿಯುತ್ತೇವೆಂದು ಬಂದರೂ ಸಹ ಹೆದರದೆ "ಅಂಗನವೋಡಿ ಕಾರ‍್ಯಕರುತೆಯಾದೇನು ಅಮಾದಿ ನೆನಪಿಸುವ ಬದುಕು ಪುನಃ ಹೋಗಲಾರೆ"[೩] ಎಂದು ತೀರ್ಮಾನಿಸಿ ದೃಢ ನಿರ್ಧಾರದಿಂದ ಒಲ್ಲದ ಗಂಡನೊಂದಿಗೆ ಬಾಳುವೆ ಬಾಳದ ಕಟ್ಟು ನಿರ್ಧಾರಕ್ಕೆ ಬರುವ ಛಲವಾದಿ ಹೆಣ್ಣಾಗಿ ಮುತ್ತಮ್ಮ ಚಿತ್ರಿತಳಾಗಿದ್ದಾಳೆ. ಅಮಾದಿ ಗುಂಡಿಗೆ ಬಿದ್ದ ಗಂಡನೊಂದಿಗೆ ಬಾಳುವೆ ಮಾಡಲೊಪ್ಪದ ಮುತ್ತಮ್ಮ ಕೊನೆಗೂ ಹಟಬಿದ್ದು ಏಕಾಂಗಿಯಾಗಿಯೇ ಉಳಿಯುತ್ತಾಳೆ. ಒಲ್ಲದ ಗಂಡನೊಡನೆ ಬಾಳಾಟ ಒಲ್ಲೆ ಸಮಾಜ ಏನೆಂದರೂ ಸರಿ ಎಂದು ಬದುಕುತ್ತಾಳೆ. ಗಂಡನನ್ನು ಒಲ್ಲೆ ಎಂದು ಬುಟ್ಟಿದ್ದು ಆತನ ನಡವಳಿಕೆಗೆ ಆಕೆ ತೋರುವ ಪ್ರತಿಭಟನೆಯಾಗಿದೆ.

ಎಂ.ಎಸ್.ವೇದಾರವರ **ಪಾಲು** ಕಥಾಸಂಕಲನದಲ್ಲಿನ **ಪಾಲು** ಕತೆಯು ಗ್ರಾಮೀಣ ಪ್ರದೇಶದ ಕುಟುಂಬವೊಂದರ ಕದನವನ್ನು ಸೆರೆ ಹಿಡಿಯುವಂತದ್ದು, ಇಲ್ಲಿ ತಾಯವ್ವ ಹಾಲು, ಮೊಸರು ಮಾರಿ ಕೂಲಿನಾಲಿ ಮಾಡಿ ನಾಲ್ಕು ಮಕ್ಕಳನ್ನು ಬೆಳೆಸಿ ದೊಡ್ಡವರಾಗಿ ಮಾಡಿ ಮದುವೆಯು ಸಹ ಆಗಿರುತ್ತದೆ. ಇಲ್ಲಿ ಮಗಳು ಗಂಡನಿಗೆ ಕಾಯಿಲೆಯೆಂದು ಗಂಡನನ್ನು ಆಸ್ಪತ್ರೆಗೆ ಸೇರಿಸಿ ಅಲ್ಲಿಂದಲೇ ಓಡಾಡಿಕೊಂಡು

---

೧. ಎಂ.ಎಸ್.ವೇದಾ, ಚೆಲುವೆ ಮುತ್ತಮ್ಮನ ಪರಸಂಗ, ಪು. ೧೮೩.

೨. ಅದೇ, ಪು. ೧೮೪.

೩. ಅದೇ,

ಇರುತ್ತಾಳೆ. ಇಬ್ಬರು ಗಂಡುಮಕ್ಕಳು ಅವರ ಹೆಂಡತಿಯರ ಮಾತು ಕೇಳಿ ಪಾಲು ಕೇಳುವ ಪ್ರಸಂಗ ಮತ್ತೆ ಅದಕ್ಕೆ ತಾಯವ್ವ ಹೇಗೆ ಪ್ರತಿಕ್ರಿಯಿಸುತ್ತಾಳೆ ಎಂಬುದಾಗಿದೆ.

ಇಲ್ಲಿ ಕಷ್ಟಪಟ್ಟು ಎಲ್ಲವನ್ನು ಸಂಪಾದಿಸಿದ ತಾಯವ್ವನಿಗೆ ಮಗಂದಿರು ಹೆಂಡತಿಯರ ಮಾತನ್ನು ಕೇಳಿಕೊಂಡು ಪಾಲು ಕೇಳಿದಾಗ ತಾಯವ್ವ ದುಃಖ ಮೇರೆ ಮೀರುತ್ತದೆ. ಸೊಸೆಯನ್ನು ಬಾಗಿಲಿನಲ್ಲಿ ಕಂಡು ಅವಳನ್ನು ಬಯ್ಯುತ್ತಾಳೆ. “ಅವ್ವೀ ಐಸಿದಾಟ ನೋಡ್ರವ್ವಾ ಮನೆದಾಟವಾ ಯಾರೋ ಕಾಣ್ದೀರಾ ಬದ್ಕಾ ಬಾಳ್ತೀವ್ನಿ ಅಂತನಾ ಕಾಣಿ”[೧] ಎಂದು ಸಿಟ್ಟಿನಿಂದ ಹೇಳುತ್ತಾಳೆ. ಅಷ್ಟು ದೊಡ್ಡ ಬಾಗಿಲು ಮನೆ ಮೂರು ಪಾಲು ಮಾಡೋದು ಅವಳಿಗೆ ಇಷ್ಟವಾಗದೆ ಗಂಡುಮಕ್ಕಳನ್ನು ಹಾಗೂ ಸೊಸೆಯಂದಿರನ್ನು ಈ ಕಾರಣಕ್ಕಾಗಿಯೇ ತರಾಟೆಗೆ ತೆಗೆದುಕೊಳ್ಳುವ ದಿಟ್ಟತನವನ್ನು ಅವಳ ಅಸಹಾಯಕತೆಯನ್ನು ಸೂಚಿಸುತ್ತದೆ.

ತಾಯವ್ವನ ಮಾತಿಗೆ ಸೊಸೆ ಅಳುವಾಗ ತಾಯವ್ವ “ಬಾಳಾ ಬದ್ಕಾ ಹಟ್ಟೀಲಿ ಅಳ್‌ಗಣ್ಣಿ, ನಿದ್ದ್‌ಗಣ್ಣಿ, ನೀಯಿದ್ ಮನೆ ಹಾಳೂ ಅನ್ನಂಗೆ ಮುಚ್ಚಂಜೇಲಿ ಯಾಕಮ್ಮಿ ಕಣ್ಣೀರ್ ಹಾಕ್ದಯೀ ಇದ್ದುದ್ ಇದ್ದಂಗೆ ಯೇಳುದ್ರೆ ಯೆದ್ ಬಂದ್ ಯೆದೆಗೊದ್ದರಂತೆ, ನಿಂಗ್ ಬ್ಯಾಕಾಗಿರಾದೂ ಅದೇ ತಾನೆ ಕನಾ.... ಅವ್ವಾ ತಾಯಿ ನೀ ಯಾವಾಗ ಬಲ್ಲಾಲ ಮುಂದಿಟ್‌ಕ್ಕಂಡು ನಮ್ಮಟ್ಟಿ ವಸಲಲ್ಲಿ ಅಕ್ಕಿ ತುಂಬಂದ್ ಸೇರಾ ಯೆಬ್ಬೆಟ್ಟಲ್ಲಿ ಪಿಣ್ಣಿಸಿದ್ಯೋ ಅವತ್ತೆ ಗೊತ್ತಾಗೋಯ್ತು ಕ ತಗಾ ಇವಾ ನಮ್ಮಟ್ಟೀನೆ ಪಿಣ್ ಅನ್ನಿಸಾಕೆ ಬಂದೋಳೆಂತಾ ಲಗ್ಣಾಗಿ ನೆಟ್ಟುಗ್ ಒಂದ್ ವರ್ಷ ಕಳೀನಿಲ್ಲ ಆ ವಕ್ಕಣ್ ನನ್ಮನಂಗೆ ಪಾಲು ಅಂತ ಕುಣ್ದಾಡ ಹಂಗೆ ತರಪೇತ್ ಕೊಟ್ಟುಬುಟ್ಟಿ, ಭೇಸ್‌ಕಮ್ಮಿ ಯಿದ್ರೆ ನಿನ್ನಂಥ ಹೆಂಗ್ಸು ಇರಬೇಕ್ ನ್ವಾಡು”[೨] ಎಂದು ಹಂಗಿಸುತ್ತಾಳೆ.

ಅತ್ತೆಯಿಂದ ಬೈಸಿಕೊಂಡ ಚಂದಮ್ಮ ನಿರಾಶೆ ಮತ್ತು ದುಃಖಗಳಿಂದ ನಿರಾಸೆಹೊಂದಿ ಗಂಡನಿದ್ದ ಕಿರುಕ್ವಾಣೆಯತ್ತ ಮುಖಮಾಡಿ ಅಳುತ್ತಾ ಗಂಡನಿಗೆ “ಅದ್ಯಾನಾ ಅದು ಹಂಗ್ ಕುಂತಿರದು ಅಂತೀನಿ. ನಿಮ್ಮವ್ವ ನಾಲ್ಗ ಹರಿಬುಟ್ಕುಂಡು ಬಾಯಿಗ್ ಬಂದಂಗೆ ಅಂತನೇ ಅವ್ರೆ. ಅದ್ಯಾಕವ್ವಾ, ಹಂಗ ಬೈಯ್ದಿಯೀ ಅಂತಾ ವಂದ್ ಮಾತ್ ಕ್ಯಾಳುದ್ರೆ ನಿಮ್ ನಾಲ್ಗ ಸೇದೋತಾತ ವಕ್ಕಣ್ಣನ ಜತ್ಗೆ ಆ ಸಿವಾ ಕ್ಯಾವ್ಲೂ ಮಾಡಿಬುಟ್ನ ಕಾಣಿ ಇಂತಾ ಗಂಡುನ್ನ ಕಟ್ಕಂಡು ಯೆಂಗಪ್ಪಾ ಬಾಳಾಟ ಮಾಡ್ಲಿ ಸಿವ್ನೆ”[೩] ಎಂದು ಬೈಯುತ್ತಾಳೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಪು. ೧೮೭.

೨. ಅದೇ, ಪು. ೧೮೯.

೩. ಅದೇ,

ಇದರಿಂದ ಕೋಪಗೊಂಡ ಸಿದ್ಲಿಂಗ ಹೊರಗೆ ಬಂದುದನ್ನು ಕಂಡ ತಾಯಿ ತಾಯವ್ವ ತಾನು ಕೋಪಗೊಂಡು ಮಗನನ್ನು "ಯಾನೆಲೆ ವಕ್ಕಣ್ಣ" ಎಂದು ಕರೆದಾಗ ಸಿದ್ಲಿಂಗ ನಾಚಿಕೆ, ಅಪಮಾನಗಳಿಂದ ತತ್ತರಿಸಿ ಹೋಗಿ, ಮೊನ್ನೆಯ ತನಕ ತನ್ನ ವಕ್ಕಣ್ಣನ್ನು ಅದೃಷ್ಟದ ಗುರುತೆಂದು ಮೆರೆಸುತ್ತಿದ್ದ ತನ್ನವ್ವ ಈಗ ಅದನ್ನು ಹೀಯಾಳಿಕೆಯ ಒಂದು ಅಂಗವಾಗಿ ಕಂಡುಬುಟ್ಟಿದ್ದು ಅವನ ಹೊಟ್ಟೆಯನ್ನು ಕಲಕಿ ಕಂಗಳಲ್ಲಿ ನೀರನ್ನು ಧುಮುಕುವಂತೆ ಮಾಡಿಬಿಟ್ಟಿರಲು......

ತಟ್ಟನೆ ಅವನಿಗೆ ತಾನು ಏಳನೇ ಕ್ಲಾಸಿನಲ್ಲಿ ಓದುವಾಗಿನ ಸಂಗತಿ ನೆನಪಿಗೆ ಬರುತ್ತದೆ. ಮೇಷ್ಟ್ರೊಬ್ಬರು ತಮಗೆ ಬೆಣ್ಣೆಮೊಸರು ಸರಿಯಾಗಿ ಸಪ್ಲೆ ಮಾಡಲಿಲ್ಲವೆಂಬ ಕೋಪದಿಂದ "ಏನೋ ವಕ್ಕಣ್ಣ" ಎಂದಿದ್ದನ್ನು ಅಳುತ್ತಾಹೋಗಿ ಸಿದ್ಲಿಂಗ ತಾಯವ್ವನಿಗೆ ಹೇಳಿದಾಗ, ಮಗನ ಕೈಯನ್ನು ಎಳೆದುಕೊಂಡು ಸ್ಕೂಲು ಮನೆಗೆ ಧಾವಿಸಿಬಂದು "ಯಾನಯ್ಯೋ ಮೇಷ್ಟ್ರೇ ನೀಯೇನ್ ವುಡುಗ್ರುಗೆ ಪಾಠಾ ಯೊಳಾಕ್ ಬಂದಯೋ? ಇಲ್ಲ ಕಾಣಿವುಡುಗ್ರ ಕಣ್ಣೂ ಮೂಗು ಬಾಯಿ ನ್ಯಾರ ಇದ್ದದೋ ಇಲ್ವೋಂತ ಸರ್ವೆ ಮಾಡಾಕ್ ಬಂದಯೋ? ನನ್ಮಗಂದು ವಕ್ಕಣ್ ಆಗಿದ್ರೇನಾ ಕೊತ್ಗಣ್ಣು ಆಗಿದ್ರೇನಾ ನಿಂಗೇನಾರಾ ಮಗ್ಳಿದ್ದಾಳಾ ಕಾಣೆ. ಅಳಿಯನ್ ಮಾಡ್ಕಂಡಯ್ಯಾ? ಹುಸಾರ್ ಇನ್ನೊಂದಪ ನನ್ ಮಗನ್ನಾ ಏನಾರಾ ವಕ್ಕಣ್ಣ ಅಂದೆಯೋ ನಾಲ್ಗ ವರಕ್ ಎಳ್ದು ಸೀಳ್ ಬುಡ್ತೀನಿ. ಏನಂದ್ ಕಂಡಿದ್ದೀನನ್ನಾ"[೧] ಎಂದು ಗದರುತ್ತಾಳೆ.

ಆದರೆ ತಾಯಿ ಈ ದಿನ ವಕ್ಕಣ್ಣ ಎಂದುದು ಸಿದ್ಲಿಂಗನಿಗೆ ಬಾರಿ ಬೇಸರ ಮೂಡಿಸುತ್ತದೆ. ಯಾಕಾದರೂ ತಾನು ಮದುವೆಯಾದೇನೋ ಅನ್ನಿಸುತ್ತದೆ. ಇಂತಹ ಸಮಯದಲ್ಲಿ ತಾಯವ್ವ ಸಿದ್ಲಿಂಗನಿಗೆ "ಯಾನೆಲೆ ಮಗ್ನೇ ಹೆಂಡ್ತಿ ಮಾತ ಕ್ಯಾಳ್ಕಂಡು ನನ್ನಾ.... ಅದೂ ನಿಮ್ಮವ್ವನ್ನ ಯಾನೂಂತ ಯಿಚಾರಿಸಕ್ ಬಂದಿದ್ದೀಯಾ ಕೂಸೇ? ಅದ್ಯಾನ್ ಬ್ಯಾಕೋ ಕ್ಯಾಳಪ್ಪಾ ಗ್ರಾಸ್ತ. ನಾ ವುತ್ರ ಕೊಡಾಕೆ ಸಿದ್ದುವಾಗೆ ಇವ್ನಿ"[೨] ಎಂದು ನಿಷ್ಠೂರವಾಗಿ ನುಡಿಯುತ್ತಾಳೆ.

ಇದರಿಂದ ಬೇಸರಗೊಂಡ ಸಿದ್ಲಿಂಗ ತಾಯಿಗೆ 'ಏಕವ್ವ ಈಗ ಜಗಳ, ನಾಲೆ ಪಾಲಾದ ಮೇಲೆ ನನಗೂ ನಿಂಗೂ ಯಾವ ಸಂಬಂಧ ಇದ್ದದ್ದು ಯೋಳು' ಎನ್ನುತ್ತಾನೆ.ಇದು ಈ ಮಾತು ತಾಯವ್ವನ ಹೊಟ್ಟೆ ಉರಿಯನ್ನು ಹೆಚ್ಚಿಸುತ್ತದೆ. "ಯಾನಂದೆ ಮಗ್ನೆ... ನಂಗೂ .... ನಿಂಗೂ...ಯಾನಾ...ಸಂಬಂಧ... ವುಟ್ಟುದ್ ತಕ್ಷಣ

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಪಾಲು, ಪು. ೧೮೯.

೨. ಅದೇ,

ನಿನ್ನ ಕುತ್ಗಾ ಕಿವುಚಿದ್ರೆ ಈ ಮಾತ್ನ ಕ್ಯಾಳ ಬ್ಯಾಕಿತ್ತುಡಾ ನಾನು? ಇಷ್ಟುದ್ದುದಾ ಬೊಂತೆನಾ ನಿನ್ನಷ್ಟುದ್ದ ಮಾಡಾಕೆ ನಿಮ್ಮಪ್ಪ ತಿನ್ನಂವಾ ಮಾಡ್ ಬುಟ್ಟ್ ಹ್ವಾದ ಸಾಲಸೋಲದ ಯವಾರೆವಾ ಬಗೆಹರಿಸಾಕೆ ಮೈಸೂರ್‍ಗೂ ಸೆಖಳ್ಳಿಗೂ ಬೆಟ್ಟಹತ್ತಿ ಗುಡ್ಡ ಇಳ್ದು ಎಷ್ಟು ಸಲ ಓಡಾಡಿವ್ನಿ ಅಂತ ಲೆಕ್ಕ ಇಟ್ಟಿದೀಯೇನ್ಲಾ? ಕಡಗೋಲು ಕಂಬುದ್ ಹಗ್ಗ ಎಷ್ಟು ಸಮೆಸಿವ್ನಿ ನೆಪ್ಪಿದ್ದದುಲಾ? ಎಷ್ಟ್ ತಿಪ್ಪೆ ಯೆಮ್ಮ ತೊಪ್ಪ ಬಳಿದಿವ್ನಿ ಗೊತ್ತಿದ್ದದೇನ್ಲಾ?"[೧] ಎಂದು ತನ್ನ ಆಕ್ರೋಶ ವ್ಯಕ್ತಪಡಿಸುತ್ತಾಳೆ. ಪರಿಶ್ರಮವನ್ನು ನೆನೆದು ದುಃಖಿಸುತ್ತಾಳೆ.

ಮತ್ತೊಬ್ಬ ಮಗನು ಸಿವ್ಲಿಂಗನೂ ಕೂಡ ತಾಯಿಯದೇ ತಪ್ಪೆಂದು ಮಾತನಾಡಿದಾಗ ಹೆತ್ತ ಮಕ್ಕಳೇ ತನ್ನನ್ನು ಅರ್ಥ ಮಾಡಿಕೊಳ್ಳದ್ದನ್ನು ಪ್ರತಿಭಟಿಸಿ ಹೇಳುವುದೇನೆಂದರೆ "ಸಾರ್ತುಕವಾಯ್ತು ಬುಡ್ರಲಾ"[೨] "ನನ್ನ್ ವಟ್ಗಾ ಆರ್‌ಸೇರ್ ಆಲ್ ಕುಡ್ಡಂಗಾಯ್ತು.... ಎಲ್ಲದ್ದನೂಃ ನಡುಕಲಿನವ ಅವ್ನೂ ಕರ್ಸುರ್ ಯಾಕಮ್ಮಿ ಶಂಕ್ರಿ ನಿನ್ನ ಗಂಡ ಇಲ್ವಾ... ವೋ ವಲದ್ ತಾಲ್ಕೆ ಹ್ವಾಗಿರಬೇಕು ಇಲ್ದೆರಾ ಅವ್ನೂ ನೆಕ್ಕಂಡ್ ನೆಕ್ಕಂಡ್ ಬಂದು ಮೂರು ಮಾತಲ್ಲಿ ಬುದ್ಧಿ ಯೇಳಿರಾನು, ಸಂಬಂಧ ಹರ್‌ಕಳ್ಳಾಕೆ ತುದ್‌ಗಾಲಲ್ಲಿ ನಿಂತೀರಲ್ರುಡಾ ನಾಯೇನ್ ಇಟ್ಕಂಬ್ಯಾಕಂತ ಕುಣೀತೀವ್ನಾ? ಒಳಗ ಇರೋರು ಒಳಗ ತಬ್ಕಂಡ್ರೆ ಒಳಗಾ ಇಲ್ದೆ ಇರೋರ್ ಗಳಗ ತಬ್ಕಂಡ್ರೂ ಅನ್ನಂಗೆ ಇರ್ತಿನಿ ಕ ತಗಳ್ಳಿ ಕೂಸ್ಕಳೆ. ಪಂಚಾಯ್ತಿಯೋರು ಮಾಡದೇನಾ ತೀರ್ಮಾನ್ವಾ ಈಗ್ಲೇ ಹಾಕ್ಕಳ್ಳಿ ಅಡ್ಡಗ್ವಾಡೇನಾ, ನೀವು ಜ್ವತೆಗಿದ್ದು ನಂಗೆ ಮಾಡಿ ಹರುಸ್ತಿದ್ದುದೂ ಅಷ್ಟ್ರಲ್ಲೇ ಇತ್ತು ತಗಳ್ಳಿ ನನ್ನ ಯಿಟ್ಟು ಬಟ್ಟೆಗೆ ಗೇಯ್ಕಳ ತಾಕತ್ತಾ ನೀವಾ ನಂಗಿನ್ನೂ ಉಳಿಸವ್ನೆ"[೩] ಎನ್ನುತ್ತಾಳೆ.

ಮೂರು ಜನ ಅಣ್ಣತಮ್ಮಂದಿರು ಮೂರು ಪಾಲು ಮಾಡಿಕೊಳ್ಳಲು ನಿರ್ಧರಿಸಿದಾಗ ತಾಯವ್ವ ಮಗಳಿಗೂ ಸಹ ಪಾಲನ್ನು ಕೇಳುತ್ತಾಳೆ. ಮಕ್ಕಳು ಒಪ್ಪದೇ ಇದ್ದಾಗ ಹಟ ಹಿಡಿಯುತ್ತಾಳೆ. "ನೀವು ಮಾಡ್ ಕಳ್ಸುದ್ರಾ ಗ್ರಾಸ್ತರಾ? ಯೆಡ್ತಿರ್‍ಗೆ ಸರ್‍ಯಾಗೆ ಸ್ಯಾಲೆ ತರ್‍ನಿಲ್ಲಾಂತ ಮುಖ ವೂದಿಸ್ಕಂಡು ಕುಂತಿರಾ ನಿಮ್ಮಾಧಾರೆ ಯೆರಿಯಾಕೆ ಯೆಳ್ಕಂಡು ಹ್ವಾಗಿದ್ದ. ನಾನ್ ಮರುತ್ರೂ ಈವೂರ ಮಂದಿ ಮರ್ತಿದ್ದದೇನ್ಲಾ ಶಿವ್ಲಿಂಗಾಃ? ಮಾದೇವಿ ನಿನ್ನ ಆಸ್ತಿ ಮ್ಯಾಲೆ ಆಕ್‌ದಾರ್ಕೆ ಸಾಧಿಸ್ಕೆ ಬಂದೋಳೇನು? ಬಾಳುಮೆ ಮಾಡ್ದೆ ಬಂದೋಳೂಂತ ಅನ್ನಕ್ಕೆ ನಿಂಗೇನ್ ಅಕ್ಕಿದ್ದದೂ ಅದ್ನ ಮೊದ್ಲು ಯೇಳ ಕೂಸೇ! ಆಸ್ತಿಯಾ ನಾಕು ಪಾಲ್ ಮಾಡೀರಾಃ.... ಇಲ್ಲಿ ಪಾಲುನ್ ಮಾತಾಡಿ ಇಲ್ದೇರಾ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಪು. ೧೯೧.

೨. ಅದೇ, ಪು. ೧೯೨.

೩. ಅದೇ,

ತಿಗಾ ಅವಿಕ್ಕಂಡು ಎದ್ಹೋಗಿ"[1] ಖಡಾಕಂಡಿತವಾಗಿ ಮಾತನಾಡಿ ಹೆಣ್ಣಿಗೂ ಆಸ್ತಿಯ ಹಕ್ಕಿದೆ ಎಂಬುದನ್ನು ತೋರಿಸಿ ಯಶಸ್ವಿಯಾಗುತ್ತಾಳೆ.

ಎಲ್ಲವನ್ನು ಪಾಲು ಮಾಡಿದ ನಂತರ ತಾಯವ್ವ ಯಾರೊಂದಿಗಿರಬೇಕೆಂದು ಪ್ರಶ್ನೆ ಬಂದಾಗ ಯಾರು ಇರಿಸಿಕೊಳ್ಳಲು ಒಪ್ಪುವುದಿಲ್ಲ. ಆಗ ತಾಯವ್ವ "ನನ್ನ ಯಾರು ಸಾಕಬೇಕಿಲ್ಲ ಕ ಈರಣ್ಣ ದ್ಯಾವ್ರು ನಂಗಿನ್ನೂ ಸಕ್ತಿ ಕೊಟ್ಟೋನೆ, ನನ್ ನಂಗದೆಕಪ್ಪಾ ನಾ ಯಾರ್ ಪಾಲ್ಗೂ ಹ್ವಾಗಲ್ಲ ಅಜ್ಜಿ ಪಾಲು ಅದ್ಯಾನ್ ಬಂದದೋ ಅದ ನಂಗೆ ಕೊಡಿಸ್‌ಬುಡಿ. ನನ್ ಯಾಪ್ತಿ ನಂಗಾಯ್ತಾದೆ"[2] ಎಂದಳು. ಅದನ್ನು ಕೊಡಲು ಮಕ್ಕಳು ಒಪ್ಪದೇ ಇದ್ದಾಗ ಅದಕ್ಕೂ ಹೆದರದೆ ತನ್ನ ಜೀವನವನ್ನು ತಾನು ಸಾಗಿಸಲು ಮುಂದಾಗುತ್ತಾಳೆ. ಸಂಕರಪ್ಪನ ಮನೆ ಹಾದಿ ಹಿಡಿಯುತ್ತಾಳೆ. ಸಂಕರಪ್ಪ ಮರುಕ ವ್ಯಕ್ತಪಡಿಸಿದಾಗ ಅವನಿಗೆ ತಾನೇ ಸಮಾಧಾನ ಹೇಳುತ್ತಾಳೆ. ಸಂಕರಪ್ಪ ನಾನು ನಿನ್ನ ಮಕ್ಕಳಿದ್ದಂಗೆ ಎಂದಾಗ "ಬುಡ್ತು ಅನ್ನು ನನ್ನಪ್ಪಾ"[3] ಎಂದು ಹೇಳುತ್ತಾಳೆ.

ಮತ್ತೆ ಗುಡಿಸಲು ಕಟ್ಟಿ ಸ್ವತಂತ್ರವಾಗಿ ಜೀವನ ನಡೆಸಿಕೊಂಡು ಹೋಗಲು ನಿರ್ಧರಿಸುತ್ತಾಳೆ.

ಎಂ.ಎಸ್.ವೇದಾರ **ಪರಕೀಯರು** ಕತೆಯಲ್ಲಿ ಬರುವಂತ ಮನು ಎಂಬ ಹುಡುಗಿ ಹಳ್ಳಿಯ ಮಗಳಾದ ತನ್ನ ಅಮ್ಮನ ಜೊತೆಯಲ್ಲಿ ಹಳ್ಳಿಗೆ ಬಂದಾಗ ಅವಳಿಗೆ ಹಳ್ಳಿಯ ಅನುಭವ ಹೇಗಿರುತ್ತದೆ? ಹಳ್ಳಿಯ ಜನರು ಹೇಗಿರುತ್ತಾರೆ? ಅವರ ನಡೆನುಡಿಗಳು ಹೇಗಿರುತ್ತವೆ ಎಂಬುದು ತಿಳಿಯುತ್ತದೆ. ಜೊತೆಗೆ ಹಳ್ಳಿಯ ಜೀವನ ಅವಳಿಗೆ ಹಿಡಿಸದೆ ಅಲ್ಲಿಂದು ಎಷ್ಟು ಹೊತ್ತಿಗೆ ಮತ್ತೆ ಪಟ್ಟಣಕ್ಕೆ ಬಂದು ಬಿಟ್ಟೆನೋ ಎಂಬ ಆತುರವನ್ನು ವ್ಯಕ್ತಪಡಿಸುವುದೇ ಈ ಕತೆಯ ಮುಖ್ಯ ಅಂಶವಾಗಿದೆ.

ಇಲ್ಲಿ ಮನು ರಜೆಗೆ ತಾಯಿಯೊಂದಿಗೆ ಹಳ್ಳಿಗೆ ಹೊರಟು ಬರುತ್ತಾಳೆ. ಮದುವೆಗೆಂದು ಬಂದಿದ್ದ ಮನುವಿಗೆ ಯಾವುದೋ ಒಂದು ಕತ್ತಲನ್ನು ಸೀಳಿಕೊಂಡು ಬಂದ ಧ್ವನಿ ಕೇಳಿಸುತ್ತದೆ. "ನನ್ನ ಮಕ್ಳು ನನ್ನ ಬಡ್ದು ಬಾವಿಗ್ ಹಾಕ್ಬುಡ್ತಾ ಆವ್ರೆ ಯಾರಾದ್ರೂ ಬಂದು ಕಾಪಾಡ್ರಪ್ಪೋ" ಎಂಬ ಶಬ್ದದಿಂದ ಹೆದರಿದ ಮನು ತಾಯಿಯನ್ನು ನೋಡಿದಾಗ ತಾಯಿಯೂ ಗಾಢ ನಿದ್ರೆಯಲ್ಲಿ ಮುಳುಗಿರುತ್ತಾಳೆ. ತಾನು ಹಳ್ಳಿಗೆ ಬರಬಾರದಿತ್ತು. "ತನ್ನ ಆ ಲೋಕದಲ್ಲಿ ತಾನೆಷ್ಟು ಸುಖಿಯಾಗಿದ್ದೆ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಪು. ೨೦೧.

೨. ಅದೇ., ಪು. ೨೦೪.

೩. ಅದೇ, ಪು. ೨೦೫.

ಖುಷಿಯಾಗಿದ್ದೆ ಎಂಬುದರ ಅರಿವಾಗಿ ಅವಳ ಸ್ಥಿತಿ ನೀರಿನಿಂದ ತೆಗೆದುಬಿಟ್ಟ ಮರಿಮೀನಾಗಿ ಹೋದೆನೆ ಎಂದು ತನ್ನನ್ನು ಪ್ರಶ್ನಿಸಿಕೊಂಡಳು"[೧]

ತನ್ನ ಸದ್ಯದ ಪರಿಸ್ಥಿತಿಗೆ ಏನು ಮಾಡಲಾಗದ ಮನು 'ಬೆಳಗೊಂದಾದರೆ ಸಾಕು ಮೈಸೂರಿಗೆ ಪೇರಿ ಕಿತ್ತುಬಿಟ್ಟೆನು ಇನ್ನು ಮೂರು ದಿನಕ್ಕೆ ಬರುವ ಜಾತ್ರೆಯ ಪಾಡು ಇವರಿಗೇ ಇರಲಿ"[೨] ಎಂಬ ತೀರ್ಮಾನವನ್ನು ತೆಗೆದುಕೊಳ್ಳುತ್ತಾಳೆ.

ತನ್ನ ಅಣ್ಣ ಡಾಕ್ಟರ್ ಆಗಿ ಹಳ್ಳಿಯವರ ಸೇವೆ ಮಾಡಬೇಕೆಂದಿದ್ದೇನೆ ಎಂಬುದನ್ನು ಜ್ಞಾಪಿಸಿಕೊಂಡು ತನ್ನ ಅನುಭವಗಳನ್ನು ಹೇಳಿ "ಏನಣ್ಣ ಮತ್ತೆಯೂ ಆ ಆಸೆ ಇದೆಯಾ" ಎಂದು ಕೇಳಬೇಕು ಎಂದುಕೊಂಡಳು.

ಇಲ್ಲಿ ಹಳ್ಳಿಗರಿಗೂ ನಗರದವರಿಗೂ ಇರುವ ವ್ಯತ್ಯಾಸವೇನು? ಎಂಬುದರ ಅರಿವಿನ ಸೂಕ್ಷ್ಮ ಚಿತ್ರಣವನ್ನು ಈ ಕತೆ ಕಟ್ಟಿಕೊಡುತ್ತದೆ. ಮೇಲ್ನೋಟಕ್ಕೆ ಮುಗ್ಧರಂತೆ ಕಾಣುವ ಗ್ರಾಮೀಣರ ಕಟುಕುತನವನ್ನು ಕತೆ ಅನಾವರಣಗೊಳಿಸುತ್ತದೆ.

ಇಲ್ಲಿ ಮನು ಹಳ್ಳಿಗೆ ಹೋದಾಗ ಅಲ್ಲಿನ ಜನ ಅವಳ ಅಮ್ಮನೊಂದಿಗೆ "ಏನಂದೆ ತಾಯಿ ನಿನ್ ಮಗುಳ ಹೆಸ್ರು ಮನನ ಅಂತಾನಾ! ಅದ್ಯಾನಪ್ಪಾ ಅದೂ ಮನನ...ನ ಅನ್ನಾದು ಅರ್ಥವಿಲ್ಲ ಪರ್ಥವಿಲ್ಲ, ಧನನ ಅಂತಾನಾದ್ರೂ ಇಡೂರಿ ಧನನ ಅಂತ ಕರ್ದು ಆಡಾರಾ ಆಡ್ಕಬೈದಿತ್ತಲ್ಲಾ" ಎಂಬುದಾಗಿ ನುಡಿದಾಗ ಮನುವಿಗೆ ಬೇಸರವಾಗುತ್ತದೆ. ನಗರದಲ್ಲಿ "ವೆರಿನೈಸ್ ಅರ್ಥವತ್ತಾದುದು" ಎಂಬುದನ್ನು ಹೇಳಿದ್ದನ್ನು ಜ್ಞಾಪಿಸಿಕೊಳ್ಳುತ್ತಾಳೆ.

ನಂತರ ಗೌರತ್ತೆಯನ್ನು ಕಂಡು ಸ್ವಲ್ಪ ಸಂತೋಷವಾದರೂ ಗೌರತ್ತೆಯ ಮಾತಿನಿಂದಾಗಿ ಆ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ. ಚಿಕ್ಕಜ್ಜಿ, ಚಿಕ್ಕಮ್ಮ ಇವಳನ್ನು ಹೀಯಾಳಿಸಿದ್ದು ಎಲ್ಲವೂ ಬೇಸರವಾಗಿತ್ತು. ಜೊತೆಗೆ ಅಮ್ಮನು ಶಾಸ್ತ್ರ ಎಂದು ಇವಳನ್ನು ಇಲ್ಲಿಯೇ ಬಿಟ್ಟು ಹೋಗಿದ್ದಳು. ನಂತರ ಇಲ್ಲಿಯ ವಾತಾವರಣವನ್ನು ಕಂಡು ಇಲ್ಲಿನ ಸಂಬಂಧಗಳು ಏನು? ಮಾನವೀಯತೆಗೆ ಇಲ್ಲಿ ದೊರೆಯುವ ಬೆಲೆಯೇನು? ಸಂಬಂಧಗಳು ಮಾನವೀಯತೆಯ ಮೌಲ್ಯಗಳಿಗೆ ಬೆಲೆಯೇ ಕೊಡದೆ ಇವರೆಲ್ಲಾ ಸಾಧಿಸುತ್ತಿರುವ ಪುರುಷಾರ್ಥವಾದರೂ ಏನು? ಇಂತಹ

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಪಾಲು ಪರಕೀಯರು, ಪು. ೨೦೬.
೨. ಅದೇ., ಪು. ೨೦೭.

ಒಂದು ಲೋಕದಲ್ಲಿ ಇವರೆಲ್ಲಾ ಹೇಗೆ ಜೀವಂತವಾಗಿದ್ದಾರೆ? ಇದು ನಿಜವಾಗಿಯೂ ಬದುಕಾ! ಅಥವಾ ಇದೇ ನಿಜವಾದ ಬದುಕಾ ಎಂದು ಯೋಚಿಸಲಾರಂಭಿಸಿದಳು.

ಹಳ್ಳಿಯಲ್ಲಿನ ತಾಯಿಯ ಸಂಬಂಧಿ ಗೌರತ್ತೆ ಅವಳಿಗೆ "ಟೀ ಕೊಡಾನ ಮನ್ನೂ" ಎಂದು ಕೇಳಿದಾಗ ಅದು ಸಂತೋಷವಾಗಿ ಕಂಡರೂ ಬರಬರುತ್ತಾ ಅದು ಬೇಸರ ಮೂಡಿಸುತ್ತದೆ.

ಮನು ತಾಯಿಯನ್ನು "ಊರಿಗೆ ಹೋಗುವುದು ಯಾವಾಗ ಅಮ್ಮ" ಎಂದು ಕೇಳಿದಾಗ ತಾಯಿ'ಬಂದ ದಿನವೇ ಹೋಗೋ ಮಾತ"[೧] ಎಂದು ತಾಯಿ ಕೇಳುತ್ತಾಳೆ.

ಇಲ್ಲಿ ಹಳ್ಳಿಯ ಹೆಂಗಸರು ಆಡುವ ಮಾತು ಹೇಗಿರುತ್ತವೆಂದರೆ "ಅದೇನ ಅದು ಮೈಸೂರಕ್ಕ ಮಗ್ಳನ್ನ ಜೊತಾಕ್ಕಂಡು ಬಂದು ಬುಟ್ಟೋಳೆ. ಅವಳ ಯಾಸ ಕಂಡ್ಯಾ? ಜೂಲ್ ನಾಯಂಗೆ ಅದೇನಾ ಅದು ಕೂದ್ಲು! ಅಯ್ಯೋ ಸಿವ್ನೆ ಹೋಗತ್ತಗೆ ಹಿರೀದಾಗೆ ಒಂದ್ ನಾಕ್‌ವರ್ಸ ಆಗ್ನಿಲ್ವಾ ಕಾಣಿ, ಕಿರೀದೆ ಹಿಂಗದೆ ಹಿರೀದ್ನೆ ಇನ್ನೂ ಲಗ್ನ ಮಾಡ್ದೆ ಅದ್ಯಾನ ಅದು ವಾದು ವಾದು ಅನ್ನಾದು" ಎಂಬ ಮಾತುಗಳು ಹಳ್ಳಿಯ ಹೆಂಗಸರ ಸ್ವಭಾವ ಎಂತಹುದು ಎಂಬುದನ್ನು ತೋರಿಸುತ್ತದೆ. ಹಲ್ಲುಜ್ಜುವ ಪೇಸ್ಟಿಗಾಗಿ ತಾತ ೧೦ ರೂ. ಖರ್ಚು ಮಾಡಲು ಹಿಂಜರಿಯುವುದು ಕಂಡು ಮನುವಿಗೆ ಬೇಸರವಾಗುತ್ತದೆ. ರಾತ್ರಿ ಬಾವಿಗೆ ಬಿದ್ದವನ ಸಂಸ್ಕಾರಕ್ಕೆ ಹಣ ನೀಡುವುದು ಅಚ್ಚರಿ ಹುಟ್ಟಿಸುತ್ತದೆ.

ತಾತ ಹೆಂಡತಿ ಮತ್ತು ಸೊಸೆಗೆ ಒಡವೆಗಳನ್ನು ಕೊಡಲು ಹೊರಗೆ ತೆಗೆದ ಸಮಯಕ್ಕೆ ಮನು ಬಂದುದನ್ನು ಕಂಡು ಹಾಗೆ ಒಡವೆಗಳನ್ನು ಮುಚ್ಚುತ್ತಾರೆ. ಇದನ್ನು ಕಂಡು ತಾತ ಜಿಪುಣರೆಂಬುದು ಸೂಕ್ಷ್ಮ ಮನಸ್ಸಿನ ಮನುವಿಗೆ ಅರಿವಾಗುತ್ತದೆ.

ಮನು ಆರೋಗ್ಯ ಕೆಟ್ಟಾಗ ಮನು ಚೆನ್ನೂರಯ್ಯನ ಹೆಣವನ್ನು ಪೋಸ್ಟ್‌ಮಾರ್ಟ್‌ಂ ಮಾಡಿದ ಡಾಕ್ಟರ್‌ನನ್ನು ಚಿಕಿತ್ಸೆಗಾಗಿ ಕರೆತಂದಾಗ ಡಾಕ್ಟರ್ ಕ್ರೂರತೆ ತಿಳಿದಿದ್ದ ಮನು ಡಾಕ್ಟರ್ ಬೇಡವೆಂದು ಹಟ ಹಿಡಿದಾಗ ತಾತಾ ಅವಳಿಗೆ ನರ್ಸ್‌ನಿಂದ ಚಿಕಿತ್ಸೆ ಕೊಡಿಸುತ್ತಾರೆ. ಬೆಳಿಗ್ಗೆ ತನ್ನ ತಂದೆ ತನ್ನನ್ನು ಕರೆದುಕೊಂಡು ಹೋಗಲು ಬಂದಿದ್ದಾರೆಂದು ತಿಳಿದಾಗ ಮನನ ಸಂತೋಷಗೊಳ್ಳುತ್ತಾಳೆ. ತಂದೆ ಅವಳ ಹಣೆಯ ಮೇಲೆ ಬೆರಳಿಟ್ಟು 'ಮನು ಮಾನಣ್ಣ' ಎಂದು ತೀರಾ ಆಪ್ಯಾಯಮಾನವಾಗಿ ಕರೆದಾಗ ಮನು ಐಸಿರಿ ಸಿಕ್ಕ ಸಂತಸದಲ್ಲಿ ತಂದೆಯ ಕುತ್ತಿಗೆಯನ್ನು ತಬ್ಬಿ ಮೈಸೂರಿಗೆ ಹೋಗಲು ತಯಾರಾಗುತ್ತಾಳೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಪಾಲ್ತು ಪರಕೀಯರು, ಪು. ೨೧೩.

ಇಲ್ಲಿ ಗ್ರಾಮೀಣ ಪ್ರದೇಶದ ಜನರ ಜೀವನ ಹೇಗಿರುತ್ತದೆ ಅಂತೆಯೇ ನಗರದವರು ಹೋದಾಗ ಅವರ ಪ್ರತಿಕ್ರಿಯೆಯೇನು ಎಂಬುದರ ಜೊತೆಗೆ ತಾತ ತನ್ನ ಅಜ್ಜಿಯನ್ನು ಕೊಂದಿರಬಹುದಾದ ಚಿತ್ರಣ ಗ್ರಾಮೀಣ ಜನರ ಕುಹಕ ಮಾತುಗಳು ಇಷ್ಟೊಂದು ಬೆಳೆದಿದ್ದರೂ ಮದುವೆ ಮಾಡಿಲ್ಲ ಎಂಬ ಚೇಷ್ಟೇ ಮಾತುಗಳು ಒಂದು ಚಿಕ್ಕ ಹುಡುಗಿಗೆ ತರಬಹುದಾದ ಮಾನಸಿಕ ಕಳವಳವನ್ನು ಕತೆಗಾರ್ತಿ ವೇದಾ ಸಮರ್ಥವಾಗಿ ಮೂಡಿಸಿದ್ದಾರೆ.

ಜೊತೆಗೆ ಇಲ್ಲಿ ಮೃದುಧೋರಣೆಯ ಮನುವಿನ ಪಾತ್ರವನ್ನು ಚಿತ್ರಿಸುವಂತೆ ಹಳ್ಳಿಗರ ಗಟ್ಟಿಧೋರಣೆಯನ್ನು ಈ ಒಂದು ಕಥೆಯಲ್ಲಿ ಕಾಣಬಹುದು.

ಕಾಲುವೆ ಕತೆಯಲ್ಲಿ ಬರುವ ಪ್ರಮುಖ ಸ್ತ್ರೀಪಾತ್ರಗಳೆಂದರೆ ಗೌರಿ, ಪುಟ್ಟಮ್ಮ ಮತ್ತು ಪಾರೋತಿ ಎಂಬ ಪಾತ್ರಗಳು. ಈ ಕತೆಯಲ್ಲಿ ಬರುವ ಬಸಪ್ಪಗೌಡರ ಮಗಳು ಗೌರಿ ಚೆನ್ನಾದ ಕಟ್ಟುಮಸ್ತಾದ ಹುಡುಗಿ, ಅದೇ ಊರಿನ ಕಿಟ್ಟಪ್ಪ ಗೌರಿಗೂ ತನ್ನ ಮಗಳಿಗೂ ಹೋಲಿಕೆ ಮಾಡಿಕೊಂಡು ಮನಸ್ಸಿನಲ್ಲಿಯೇ ಇವಳ ದೃಢಕಾಯದ ಬಗ್ಗೆ ಮತ್ತು ತನ್ನ ಮಗಳು ಯಾಕೆ ಸಣಕಲಾಗಿದ್ದಾಳೆ ಎಂದು ಯೋಚಿಸುತ್ತಾನೆ.

ದೊಡ್ಡಮಲ್ಲ ಎಂಬುವ ಗೌಡರ ಹೊಲದಲ್ಲಿ ನಾಟಿ ಮಾಡಲು ಅರ ಬಿಡುವಾಗ ಹೆಣ್ಣಾಳುಗಳು ಕೆಸರುಗದ್ದೆಯಲ್ಲಿ ಮಂಡಿತನಕ ಮೇಲೆರಿಸಿದ ಸೀರೆ ದುಂಡನೆಯ ಕಾಲುಗಳು, ಮೀನಖಂಡಗಳು ಕಂಡು ಬಾಯಿಂದ ನೀರು ಸುರಿಸುವಷ್ಟರಲ್ಲಿ ಅದನ್ನು ಗಮನಿಸುತ್ತಿದ್ದ ಪಾರೋತಿ ನೆಟ್ಟಗೆ ನಿಂತು "ಯಾನುಡಾ ಅದು ನೀನು ನ್ವಾಡ್ತಾ ಇರಾದು ಹೆಂಗುಸ್ರುದ್ ಯಾನ್ನೂ ಕಂಡೇ ಇಲ್ವಾ ಕಾಣಿ ನೀನು ಹುಸಾರ್, ಏನನ್ಕಂಡಿದ್ದೀಯೆ ಗೋಡ್ರುಗ್ ಹ್ಯಾಳಿ ಬೋಟಿ ಕಳಚ್ ಬುಡುಸ್ತೀನಿ ಯಿನ್ನೂ ಮೀಸೇನೆ ಮೂಡ್ನಿಲ್ವಲ್ಲೋ ತಾಯಿಗ್ಗಂಡನೆ"[೧] ಎಂದು ಬೈಯುತ್ತಾಳೆ. ಇಲ್ಲಿ ಪಾರೋತಿ ಕೆಟ್ಟದ್ದನ್ನು ಪ್ರತಿಭಟಿಸುವ ರೂಪವಾಗಿ ಕಂಡು ಬರುತ್ತಾಳೆ. ಅಂತೆಯೇ ಹೆಂಗಸರನ್ನು ಕಂಡು ಬಾಯಲ್ಲಿ ನೀರು ಸುರಿಸಿದವರಿಗೆ ಪಾಠ ಕಲಿಸುವ ಗುಣವುಳ್ಳವಳಾಗಿದ್ದಾಳೆ. ಇಲ್ಲಿ ಗ್ರಾಮೀಣ ಹೆಣ್ಣು ಮಕ್ಕಳು ಯಾವ ರೀತಿ ಇರುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನವಾಗಿದೆ.

ಇಲ್ಲಿ ಮಳೆಯು ಸರಿಯಾಗಿ ಬರದೇ ಗೌಡರ ಪಂಪ್‌ಸೆಟ್ ನೀರಿನಿಂದ ಗದ್ದೆಯಲ್ಲಿ ನಾಟಿ ಮಾಡುತ್ತಿದ್ದಾಗ ಪುಟ್ಟಮ್ಮ ಪಾರೋತಿಗೆ ಹೀಗೆ ಹೇಳುತ್ತಾಳೆ. "ಹ್ಞೂಂ ಕ ತಾಯಿ ಅದ್ಯಾಕ್ ಹಂಗೇ ಬಾಯಿ ಮುಚ್ಕಂಡಿದ್ದೀಯಿ ಬುಡು"[೨] ಎಂದು

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಪಾಲು ಕಾಲುವೆ, ಪು. ೨೩೨.

೨. ಅದೇ,

ತಾಕೀತು ಮಾಡಿದಾಗ ಪಾರೋತಿ ಮಲೆಮಹದೇಶ್ವರ ಮತ್ತು ಜುಂಜಪ್ಪನ ಬಗ್ಗೆ ಹಾಡಲು ಪ್ರಾರಂಭಿಸುತ್ತಾಳೆ. ಅದರಿಂದ ಗೌಡರಾದಿಯಾಗೆ ಎಲ್ಲರಿಗೂ ಸಂತೋಷ ವಾಗುತ್ತದೆ.

ಇಲ್ಲಿ ಗೌರಿ ಊರಿಗೆ ಕಾಲುವೆ ನಿರ್ಮಿಸಲು ಬಂದ ಇಂಜಿನಿಯರನ್ನು ಪ್ರೀತಿಸುತ್ತಾಳೆ. ಆದರೆ ಕಿಟ್ಟಪ್ಪ ಹೇಗೋ ಇಂಜಿನಿಯರಿಗೆ ತನ್ನ ನರಪೇತಲು ಮಗಳನ್ನು ಮದುವೆ ಮಾಡಲು ನಿಶ್ಚಯಿಸುತ್ತಾನೆ ಎಂದು ಪಾರೋತಿ ಹೇಳುತ್ತಾ ನೀರಿಗೆ ಹೋಗಿದ್ದ ಗೌರಿ ಜ್ವತೆ ಸರಸವ್ವ "ಮುಂದನ್ ಸ್ರಾವಣಕ್ಕೆ ತನ್ಗೂ ಇಂಜನೇರುಗ್ಗು ಮದ್ವಾ 'ಅನ್ನ ಮಾತಾ ಹ್ಯಾಳ್‌ದ್ಲು. ಸಾಯೇಬರು ಇವೊತ್ ಬರಭೈದು ನಾಳ ಬರಭೈದು ಅನ್ಕಂಡಿದ್ದ ಗೌರವ್ವ ಈ ಯಿಸ್ಯಾ ಕೇಳಿ ಹಂಗೇ ಬಾವಿಗೆ ಹಾರ್‌ಕಂಡಿದ್ದಳು. ಸರಸವ್ವನ ಬೊಬ್ಬೆ ಕ್ಯಾಳಿ ಓಡಿ ಬಂದ ಆಳುಗೋಳು ಹೆಂಗೋ ಗೌರವ್ವನ ಬದುಕುಸುದ್ರು, ಯಿಸ್ಯಾ ಎಲ್ಲ ತಿಳುದ್ ಗೌಡ್ರು ತಮ್ಗಾ ಕುಲಾ ಮುಖ್ಯ ಅಲ್ಲ ಮಗ್ಳು ಮುಖ್ಯ' ಅನ್ಕಂಡು ಎಂಜನೇರಿಗೆ ಕೊಟ್ಟೆ ಮದ್ವೆ ಮಾಡ್ತೀನಿ ಅಂದ್ರಾ ಕಿಟ್ಟಪ್ಪಯ್ಯಾ ಜಪ್ಪಯ್ಯ ಅಂದ್ರೂ ಬುಟ್‌ಕೊಡನಿಲಾ. ಗೌಡ್ರುಮಗನ್ ಬುಡ್‌ಸ್ಕಳ್ಯಾಕ್ ಕೋರ್ಟು ಕೇಸು ಅಂತ ಅಲೀತಿರಬೇಕಾದ್ರೆ ಕಿಟ್ಟಪ್ಪಯ್ಯ ತಮ್ಮ ಜಮೀನ್ ಮಾರಿ, ಮಗ್ಳು ಮದ್ವಾ ಮಾಡಿ, ಅಳಿಯನ್ ಜ್ವತೆ ಪ್ಯಾಟೆಗೆ ಪ್ವಂಟೆ ಹ್ವಾದ್ರು, ಗೌರಿ ಗೋಡ್ರು ನವೀತಾ ಕುಂತ್ಕಂಡ್ರು ಇಲ್ಲೆ"[೧] ಎನ್ನುತ್ತಾಳೆ.

ಮತ್ತೆ ಮಾತು ಮುಂದುವರಿಸಿದ ಪಾರೋತಿ ಪೈರುಗಳಿಗೆ ಪಾಪ ಪುಣ್ಯದ ಬಗ್ಗೆ ಹೇಳುತ್ತಾ "ಪುಣ್ಯ ಅನ್ನಾದು ಇನ್ನೂ ಈ ವೂರಾಗ ಇದ್ದದ್ದೂ ಅನ್ಕಂಡಿದ್ದಿರ್ರ್ಯಾ ತಾಯಿರಾ, ಯಾವತ್ತೋ ಅದು ಕಾಡುಗ್ವೋಗ್ ಸೇರ್‌ಕೊಂಡ್ತು ಬುಡಿ. ಈ ಕಾಲ್ವ ಕೆಲ್ಸ ಯಾವಾಗ ಸುರು ಅಯ್ತೋ ಆಗ್ಲೆ "ಓಹೋ ಇಲ್ಲಿದೆ ಪಾಪ ಅಂಬೋದು ನೆಲೆಗೊಳ್ಯಾಕೆ ಬಂದದೆ ಇನ್ನು ನನಗಿಲ್ಲಿ ವುಳಿಗಾಲವಿಲ್ಲ ಅಟ್ವೋಕ ಮುಂಚೆ ಪೊಟ್ಟಣ ಕಟ್ಕಂಡು ವಂಟು ಬುಡಭೈಕು' ಅನ್ಕಂಡು ಪೇರಿ ಕಿತ್ತುಬುಡ್ತು, ಅಲ್ಲಿವರ್ಗೂ ಇಲ್ಲೆಂಗೋ ನ್ಯಾಯ, ಧರುಮ ಕರ್ಣೆ, ದಯ, ದಾಕ್ಷಿಣ್ಯ ಅನ್ನಾದು ತುಂಬ್ಕಂಡಿತ್ತು"[೨] ಎಂದು ಪೈರುಗಳಿಗೆ ಹೇಳುತ್ತಾಳೆ.

ಗ್ರಾಮೀಣ ಬದುಕಿನ ಜೀವನವನ್ನು ಇಲ್ಲಿ ತಿಳಿಸ ಹೊರಟಿರುವಂತೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ನಗರ ಪ್ರದೇಶದ ಗಂಡುಗಳಿಗೆ ಹೇಗೆ ಮಾರುಹೋಗು-

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಪಾಲು ಕಾಲುವೆ, ಪು. ೨೩೯.

೨. ಅದೇ.

ತ್ತಾರೆಂದು ಚಿತ್ರಿಸಿದ್ದಾರೆ. ಅಂತೆಯೇ ಇಲ್ಲಿನ ಹೆಂಗಸರ ಸಂಭಾಷಣೆ ಮತ್ತು ಪಾರೋತಿಯ ಪೈರುಗಳೊಂದಿಗಿನ ಸಂಭಾಷಣೆ ಮನೋಜ್ಞವಾಗಿ ಮೂಡಿಬಂದಿದೆ.

ಇಲ್ಲಿ ಈರಪ್ಪನ ಸೊಸೆ ಹುಷಾರಿಲ್ಲದೆ ಗಂಡನೊಂದಿಗೆ ರೋಸಿ ಹೋಗಿ ಅಳುತ್ತಿದ್ದಳು. ಕಾಮಗಾರಿ ಮೇಸ್ತ್ರಿಯಿಂದ ಸಿಮೆಂಟು ತಂದು ಸರಿಯಾದ ಒಲೆ ಹಾಕಬೇಕೆಂದು ಹೋದವಳು ಅವನೊಂದಿಗೆ ಓಡಿ ಹೋಗುವಂತಹ ಪ್ರಸಂಗವು ಇಲ್ಲಿ ಬರುತ್ತದೆ.

ಈ ಕತೆಯಲ್ಲಿ ಬರುವ ಕಥಾ ನಿರೂಪಣಾಗಾರ್ತಿ ಪಾರೋತಿ ಇದ್ದುದನ್ನು ಇದ್ದಂತೆ ಹೇಳುವ ಧೈರ್ಯಗಾರ್ತಿ ಹೆಣ್ಣು. ಸರಿತಪ್ಪುಗಳ ವಿವೇಚನೆಯುಳ್ಳ ಹೆಣ್ಣು ಬಸವಪ್ಪಗೌಡನ ಮಗಳು ಗೌರಿ ಇಂಜಿನಿಯರನ್ನು ಪ್ರೀತಿಸಿ ಅದು ನೆರವೇರದೇ ನೀರಿಗೆ ಬೀಳುವುದು ಅದನ್ನು ಕಂಡವರು ಅವರನ್ನು ಬದುಕಿಸುವುದು ಹೀಗೆ ಇಲ್ಲಿ ಮೆದುಧೋರಣೆ ಮತ್ತು ಉಗ್ರ ಸ್ವರೂಪದ ಕುಟಿಲತೆಯಿಂದ ಕೂಡಿದ ನಾನಾ ಬಗೆಯ ಸ್ತ್ರೀ ಪಾತ್ರಗಳನ್ನು ಎಂ.ಎಸ್. ವೇದಾರವರು ಈ ಕತೆಯಲ್ಲಿ ಪರಿಣಾಮಕಾರಿಯಾಗಿ ತಂದಿದ್ದಾರೆ.

ಹೋಗಿ ಬರಲೆ ಭರತ ಮತ್ತು ಮರಳಿ ಬಾರದ ಶಾಕುಂತಲೆ ಕತೆಗಳ ಪುರಾಣದ ಪ್ರಸಂಗಗಳನ್ನು ಸಮಕಾಲೀನಗೊಳಿಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿವೆ. 'ಹೋಗಿ ಬರಲೆ ಭರತ' ಮರಳಿ ಬಾರದ ಶಾಕುಂತಲೆ ಈ ಎರಡೂ ಕತೆಗಳಲ್ಲಿಯು ಶಕುಂತಲೆಯ ಬದುಕಿನ ಚಿತ್ರಣವನ್ನು ಪೌರಾಣಿಕ ಪಾತ್ರಕ್ಕಿಂತ ಭಿನ್ನವಾದ ರೀತಿಯಲ್ಲಿ ಕಟ್ಟಿಕೊಡುತ್ತಾರೆ. 'ಹೋಗಿ ಬರಲೆ ಭರತ' ಎನ್ನುವ ಶಕುಂತಲೆಯ ಮಾತಿನಲ್ಲಿ ಮಗನ ಮೇಲಿನ ಭರವಸೆ ವ್ಯಕ್ತವಾಗುತ್ತದೆ. ತನ್ನನ್ನು ಕರೆಸಿಕೊಳ್ಳುವುದಾಗಿ ಮಾತು ಕೊಟ್ಟು ಮರೆತ ರಾಜನ ನಡತೆಯಿಂದ ನೋಯುತ್ತಾಳೆ ತಾನೇ ರಾಜನ ಆಸ್ಥಾನಕ್ಕೆ ಹೋಗಿ ತುಂಬಿದ ಸಭೆಯಲ್ಲಿ ನೀನು ಏನೆಂದು ಹೇಳಿದ್ದೆ ಎಂದು "ಈಗ ನಿರ್ಧಾರಿತ ವಾಗಬೇಕಾದದ್ದು ನನ್ನ-ನಿನ್ನ ನಡುವಿನ ಸಂಬಂಧವಲ್ಲ ಮಹಾರಾಜ ಈ ಸಿಂಹಾಸನ ಮತ್ತು ನನ್ನ ಮಗನ ನಡುವಿನ ಸಂಬಂಧ"[೧] ಎಂದು ರಾಜನನ್ನ ಕೇಳುತ್ತಾಳೆ.

ಮಗನನ್ನು ಅಲ್ಲಿ ಉಳಿಸಿ ಹೋಗುವ ಸಂದರ್ಭದಲ್ಲಿ ಮಗ ತಾಯಿಯನ್ನು ಬಿಟ್ಟು ಇರುವುದಿಲ್ಲವೆಂದಾಗ "ಮತ್ತೆ ಬರುತ್ತೇನೆ ಭರತನ ರಾಜಮಾತೆಯಾಗಿ"[೨] ಎನ್ನುತ್ತಾಳೆ. ಇಲ್ಲಿ ಶಕುಂತಲೆಯನ್ನು ರಾಜ ಆಸ್ಥಾನದಲ್ಲಿ ನಡೆಸಿಕೊಂಡ ರೀತಿ ಆಕೆ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಹೋಗಿ ಬರಲೆ ಭರತ, ಪು. ೩೦೪.

೨. ಅದೇ.,

ತೋರುವ ಪ್ರತಿಕ್ರಿಯೆ ಅವಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ಅವಳ ನಿಷ್ಠೂರತೆ ಸ್ವಾಭಿಮಾನ ಸಂಕೇತವಾದ ಕಂಡುಬರುತ್ತದೆ.

ಈ ಕತೆಯ ಮುಂದುವರೆದ ಭಾಗವಾಗಿ 'ಮರಳಿ ಬಾರದ ಶಕುಂತಲೆ' ಕಾಣಿಸುತ್ತದೆ. ಇಲ್ಲಿ ಕಣ್ವರ ಆಶ್ರಯದಲ್ಲಿ ಬೆಳೆದು ರಾಜನನ್ನ ಗಂಧರ್ವ ವಿವಾಹ ಮಾಡಿಕೊಂಡು ಅವನು ರಾಜಧಾನಿಗೆ ಕರೆಸಿಕೊಳ್ಳದೆ ಹೋದಾಗ ತಾನೇ ನಿಂತು ತನ್ನ ಮಗನಿಗೆ ರಾಜ್ಯ ಕೊಡಿಸಿ ಬರುತ್ತಾಳೆ. ಆದರೆ ಭರತ ರಾಜ್ಯಭಾರದ ಬರದಲ್ಲಿ ತಾಯಿಯ ಬಗ್ಗೆ ಅಷ್ಟು ಕಾಳಜಿ ವಹಿಸುವುದಿಲ್ಲ ನಂತರ ಹೆಂಡತಿಯರಿಗೆ ಹುಟ್ಟಿದ ಮಕ್ಕಳನ್ನು ತನ್ನವಲ್ಲವೆಂದು ಹೇಳುತ್ತಾಳೆ. ಆಗ ಶಾಕುಂತಲೆ "ನೀನು ಬಂದ ದಿನ ತಂದೆ ಯಾರೆಂದು ತಿಳಿಯದೆ ನಿಂತಿದ್ದೆ, ತುಂಬಿದ ಸಭೆಯಲ್ಲಿ ಅಂದು ಮಹಾರಾಜಾ ನಿನ್ನನ್ನು ಜಾರ ಸಂತಾನವೆಂದು ಕರೆದಾಗ ಹುಲಿಯಂತೆ ಅವನ ಮೇಲೆ ಹಾರಿಹೋಗಿದ್ದೆ ನೆನಪಿರಲಿ"[೧] ಎಂದು ಭರತನ ಹುಟ್ಟನ್ನೆ ಜ್ಞಾಪಿಸುತ್ತಾಳೆ.

ಎಂ.ಎಸ್.ವೇದಾರ **ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ** ಕಥಾಸಂಕಲನದಲ್ಲಿನ **ಹೀಗೊಬ್ಬ ಸತ್ಯವಾನನ ಕಥೆ** ಕತೆಯಲ್ಲಿ ತಿಮ್ಮಪ್ಪಯ್ಯ ಮನೆಯ ಯಜಮಾನ ಅವನ ಹೆಂಡತಿಯಾದ ಸಾವಂತಿ ಕ್ಷಣಕ್ಷಣವು ಗಂಡ ಹೇಳಿದ್ದನ್ನು ಕೇಳಿಕೊಂಡು ಕತ್ತೆಯಂತೆ ದಿನವೆಲ್ಲವೂ ದುಡಿಯುವಂತಹ ಪಾತ್ರ. ಜೊತೆಗೆ ಮಕ್ಕಳನ್ನು ನೋಡಿ-ಕೊಳ್ಳುವಂತವುದು, ಇಲ್ಲಿ ಬರುವಂತಹ ಮತ್ತೊಂದು ಪಾತ್ರ ಚಂದ್ರಿ. ಇವಳು ಗಂಡನನ್ನು ಕಳೆದುಕೊಂಡವಳು ಇದ್ದುದ್ದನ್ನು ಇದ್ದಂತೆ ಹೇಳುವ ಹೆಣ್ಣು. ಇಲ್ಲಿ ತಾಯಿಯ ಸಂಕಟಕ್ಕೆ ತಂದೆಯೊಂದಿಗೆ ಏನಾದರೂ ಮಾತನಾಡುವ ಎಂದರೆ ತಾಯಿ "ಯಾಕೆ ಗಿರಿ ಇಲ್ಲಿ ನಿಂತಿದ್ದಿಯಿ ಹೋಗು ಅಡ್ಕಾ"[೨] ಎಂಬುದಾಗಿ ಗಿರಿಯ ಬಾಯಿ ಮುಚ್ಚಿಸುತ್ತಿದ್ದಳು.

ಗಂಡ ಬೇರೆ ಮದುವೆಯಾದಾಗ್ಲೂ ಒಂದು ಮಾತು ಆಡದೆ ಸುಮ್ಮನಿರುವಾಗ ಮಗನಾದ ಗಿರಿ 'ಈಗ್ಲಾರಾ ವಸಿ ಜೋರಾಗವ್ವಾ ಯಾಕೆ ನಿನ್ ಬಾಳುವೆ ನೀನು ಹಾಳು ಮಾಡಕಂತಿ" ಎಂದಾಗ "ಈ ಬಾಳುಮೆ ಯಾವತ್ತಾರಾ ನಂದಾಗಿತ್ತಪ್ಪ ಗಿರಿ"[೩] ಎನ್ನುತ್ತಾಳೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಹೋಗಿ ಬರಲೆ ಭರತ, ಪು. ೩೦೮.

೨. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಪು. ೧೯.

೩. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ಹೀಗೊಬ್ಬ ಸತ್ಯವಾನನ ಕಥೆ, ಪು. ೩೬೯.

ಇಲ್ಲಿ ಸಂಪ್ರದಾಯಸ್ಥ ಮನೆತನದ ಮೃದು ಸ್ವಭಾವದ ಮನೆತನದ ಹೆಣ್ಣು ಮಕ್ಕಳು ಗಂಡ ಏನೇ ದೌರ್ಜನ್ಯ ಮಾಡಿದರೂ ಹೇಗೆ ಸಹಿಸಿಕೊಂಡು ಜೀವನ ನಡೆಸುತ್ತಾರೆಂಬುದಕ್ಕೆ ಈ ಕತೆ ಸಾಕ್ಷಿಯಾಗಿದೆ. ಗಂಡ ಸತ್ತ ಮೇಲೆಯು ಅವಳು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುವುದಿಲ್ಲ. ಮಗ ತನ್ನಲ್ಲಿಯೇ ಹಣವನ್ನು ಇಟ್ಟುಕೋ ಎಂದಾಗ "ಯಾವತ್ತೂ ಇಲ್ಲದ್ದ ಯಜಮಾನ್ಕೆ ಒಂದು ಕಾಸಿಗಾದ್ರೂ ನಂಗೆ ಅದೆ ಅಂದ್ರೆ ಹೆದ್ರುಕೆ ಆಯ್ತದೆ ಗಿರಿ"[೧] ಎಂದು ತನ್ನ ಅಸಹಾಯಕತೆ ವ್ಯಕ್ತಪಡಿಸುತ್ತಾಳೆ. ಅವಳಿಗೆ ಗಂಡ ಸತ್ತರು ಗಂಡನ ರೂಪ ಪದೆ ಪದೇ ಎದುರಿಗೆ ಬಂದು ನಿಂತಂತೆ ಅನ್ನಿಸುತ್ತಿರುತ್ತಿತ್ತು. ಗಂಡನ ಕ್ರೌರ್ಯ ಎದುರಿಗೆ ಬಂದಂತಾಗಿ ಹೆದರಿಕೊಳ್ಳುತ್ತಿದ್ದಳು. ಗಂಡ ಇದ್ದಾಗಲೂ ಸುಖವನ್ನು ಕಾಣದ ಸಾವಂತ್ರಿ ಗಂಡ ಸತ್ತಮೇಲೂ ಸಹ ಸುಖವನ್ನು ಕಾಣಲು ಸಾಧ್ಯವಾಗದೇ ಗಂಡನ ಹೆದರಿಕೆಯಿಂದಲೇ ಪ್ರಾಣಬಿಡುತ್ತಾಳೆ.

ಈ ಕತೆಯಲ್ಲಿ ಚಂಕ್ರಿ ಕಂಡದ್ದನ್ನು ಕಂಡಂತೆ ಹೇಳುವಂತ ಪಾತ್ರ ಎಂಬುದನ್ನು ಮೊದಲೇ ಹೇಳಿದೆ. ಸಾತಮ್ಮ ಗಂಡನು ಸತ್ತ ನಂತರದಲ್ಲಿ ಬೈಯ್ಯುವುದನ್ನು ಕೇಳಿ ಹೆದರಿ ಒಳ ಓಡಿ ಹೋದದ್ದನ್ನು ಕಂಡಾಗ ಚಂಕ್ರಿ ಯಾಕಂತ ಅಲ್ಲಿ ಮ್ಯಾಲ್ನಾಗೂ ಇಂದ್ರ ಪಂದ್ರ ಅನ್ನೋರ ಜತೆ ಸತ್‌ಸಂಗ ಮಾಡ್ತಾ ಕುಂತೋರಂತ ಅಯ್ನೋರು. ಕಾಫಿ, ಟೀ ಕಾಯ್ಸಿ ಕೊಡ್‌ಬೇಕಂತ ಅದಕ್ ಕರೀತಾ ಅವ್ರಂತಾ, ವುಚ್ಚು.....ವುಚ್ಚು ಇವೆಲ್ಲಾ ವುಚ್ಚು ಕಂಡ್ರವ್ವಾ ನಾ ಅವತ್ತೆ ಅಂದೆ ಕಣಳಿ ಸತ್ತೋನ್ ತಿಕಾ ತೆಂಕ್ಲೋ ಬಡುಗ್ಲೋ ಅಂತಾ ಈ ಅವ್ವಂದೊಂದು ಪಿಕೀರು. ಸತ್‌ಮ್ಯಾಕೂ ನಿರುಂಬಳವಾಗಿ ಇರಾಕ್ ಬುಡಲ್ಲವಲ್ಲ ಆ ಅಯ್ನೋರು"[೨] ಎಂಬುದಾಗಿ ಹೇಳುತ್ತಾಳೆ.

ನೀರು: ಕತೆಯಲ್ಲಿ ಬರುವ ಅಜ್ಜಿಯ ಪಾತ್ರ ಗಟ್ಟಿ ಹಾಗೂ ದಿಟ್ಟತನದ ಪಾತ್ರವಾಗಿದೆ. ಇಲ್ಲಿ ರೇಣು ಮಲಗಿಕೊಂಡಿರುತ್ತಾಳೆ. ಬೆಳಿಗ್ಗೆ ಎಷ್ಟು ಹೊತ್ತಾದರೂ ಏಳದ್ದನ್ನು ಕಂಡ ಅಜ್ಜಿ "ಅಮ್ಮಿ ಏಣು ಬೆಳಕರ್ದು ಎಷ್ಟೋತ್ತಾಯ್ತಮ್ಮಿ ಇನ್ನೂ ಮನಗಿದ್ದಯಿ ವೋದ್ ಹಟ್ಯಾಗೈ ಹಿಂಗೂ ಮಾಡುದ್ರೆ ಸರಿಯಾಯ್ತದ್ ಬುಡು ನಿಂಗ ವಗ್ತನ ಕಲಿಸ್‌ಕೊಟ್ಟೋಳ್ ಯಾವ್ ಬಡ್ಡ್ಯಮ್ಮಿ ಅಂತ ತಲಮ್ಯಾಲ ಬೂದಿ ವೊದ್ ಕಳುಸ್ತಾರೆ."[೩] ಎಂದು ಬಯ್ಯುತ್ತಾಳೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ಹೀಗೊಬ್ಬ ಸತ್ಯವಾನನ ಕಥೆ, ಪು. ೩೭೪.

೨. ಅದೇ, ಪುಟ. ೩೨೩.

೩. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನೀರು, ಪುಟ. ೩೨೪.

ಕಂಬಳಿಯಿಂದ ಹೊರಬಂದ ರೇಣುವನ್ನು ಕಂಡು ಅಜ್ಜಿ "ಮ್ಮಿ ಮಾದಲಿ ಅವಳ ಮೊಕಾ ನ್ವಾಡು ಯೇನಾರ ರೋಸ್ ಇದ್ದದಾ ನಾ ಬೈಯ್ತಾ ಇವ್ನಿ ನೀ ವಡೀತಾ ಇದ್ದಿ"[೧] ಎಂಬುದಾಗಿ ಹೇಳುತ್ತಾಳೆ. ಮೊಮ್ಮಗಳಿಗೆ ದೃಷ್ಟಿಯಾಗಿದೆಯೆಂದು ದೃಷ್ಟಿ ತೆಗೆಯಲು ನಿರ್ಧರಿಸುತ್ತಾಳೆ. ಪಕ್ಕದ ಮನೆ ಚನ್ನೂರವ್ವ ಯಾರೊಂದಿಗೆ ಓಡಿ ಹೋಗಿದ್ದನ್ನು ಕುರಿತು ತಾನು ಚರ್ಚಿಸುತ್ತಾಳೆ.

ಹೀಗೆ ಮನೆಯಲ್ಲಿ ಹಿರಿತಲೆಯಾಗಿ ಅಷ್ಟಕ್ಕೆ ನಿಲ್ಲದೆ ಅಕ್ಕಪಕ್ಕ ವಿಚಾರಗಳಿಗೂ ತಲೆ ಕೆಡಿಸಿಕೊಳ್ಳುವ ಗಟ್ಟಿಗಿತ್ತಿ ಪಾತ್ರವಾಗಿದೆ.

ರೇಣು ತಾಯಿಯೊಂದಿಗೆ ಚೆನ್ನೂರಕ್ಕನ ಬಗ್ಗೆ ತರ್ಕ ಮಾಡುತ್ತಿದ್ದಾಗ ಅತ್ತೆ ಕೇಳಿಸಿಕೊಂಡರೆ ಗತಿಯೇನೆಂದು ಮಗಳಿಗೆ ಮುಖ ನೋಡದೆ ಹೊಡೆಯುತ್ತಾಳೆ. ನಂತರ ಅಜ್ಜಿಯೇ "ಅದ್ಯಾಕಮ್ಮಿ ಹಂಗೆ ದನುಕ್ ಬದ್ದಂಗೆ ಬಿಡ್ದಯಿ"[೨] ಎಂದು ಕೂಗು ಹಾಕುತ್ತಾಳೆ.

ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ ಕತೆಯಲ್ಲಿ ಹೆಣ್ಣಿನ ಮಾನಸಿಕ ವಿಶ್ಲೇಷಣಾ ವಿಧಾನವನ್ನು ಕತೆಗಾರ್ತಿ ಎಂ.ಎಸ್. ವೇದಾರವರು ತಂದಿದ್ದಾರೆ.

ಈ ಕತೆಯ ನಾಯಕಿ ಮಂಜುಳ ತುಂಬಾ ಸುಂದರಳಾಗಿದ್ದು ಪೋಲಿ ಹುಡುಗರು ಚುಡಾಯಿಸುತ್ತಾರೆಂಬ ಕಾರಣದಿಂದ ಶಾಲೆಯನ್ನು ಬಿಡುತ್ತಾಳೆ. ಮದುವೆ ಮಾಡಲು ಮನೆಯಲ್ಲಿ ನಿರ್ಧರಿಸಿದಾಗ ಪೋಲಿ ಹುಡುಗರು ಬಂದ ಗಂಡುಗಳಿಗೆಲ್ಲ ಸುಳ್ಳು ಹೇಳಿ ಕಳುಹಿಸುತ್ತಿದ್ದರು.

ಕೊನೆಗೆ ಅದೇ ಸಂದರ್ಭದಲ್ಲಿ ಕೃಷ್ಣೇಗೌಡ ಎಂಬ ಪಕ್ಕದೂರಿನ ದುರ್ವ್ಯಸನಗಳನ್ನು ಉಳ್ಳವನಾಗಿದ್ದ ಮಂಜುಳಳಿಗಿಂತ ಹದಿನೈದು ವರ್ಷದೊಡ್ಡವಳು ಹೆಣ್ಣು ಕೇಳುತ್ತಾಳೆ ಆಗ ಮಂಜುಳ ತಂದೆ ಆ ಗಂಡು ಕೈತಪ್ಪಿ ಹೋಗುವುದೆಂಬ ಬಯದಲ್ಲಿ ಅದೇ ಗಂಡಿಗೆ ಮದುವೆ ಮಾಡುತ್ತಾನೆ.

ಗಂಡನ ಮನೆಗೆ ಬಂದ ಮಂಜುಳಳಿಗೆ ಗಂಡನ ಭವ್ಯವಾದ ಆಕಾರ ಹೆದರಿಕೆ ಹುಟ್ಟಿಸಿ ಬಿಳಚಿಕೊಂಡು ಕೈಕಾಲು ಒದರಲು ಪ್ರಾರಂಭಿಸುತ್ತಾಳೆ. ಹೆಂಡತಿಯ ಈ ಸ್ಥಿತಿಯಿಂದ ಅವಳನ್ನು ನಿರ್ಲಕ್ಷಿಸಿ ಕೃಷ್ಣೇಗೌಡ ನಾಟಕದ ಕಂಪನಿಯ ತಾಯಿ ಮಗಳಿಬ್ಬರನ್ನು ಮನೆಗೆ ಕರೆತರುತ್ತಾನೆ. ಅವರಿಬ್ಬರೂ ಆಸ್ತಿಯ ಮೇಲೆ ಕಣ್ಣು ಹಾಕಿದಾಗ

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣ ಮತ್ತು ದುಂಡವ್ವನ ದೆವ್ವ, ನೀರು, ಪುಟ. ೩೨೪.

೨. ಅದೇ, ಪು. ೩೩೧.

ಕೋಪ ಬಂದರೂ ಅಸಹಾಯಕತೆಯಿಂದ ನೆನೆಸಿಕೊಂಡು ಸಹಿಸುತ್ತಾಳೆ. ಗಂಡನಿಗೆ ಹೆದರಿಕೊಳ್ಳುವ ಮಂಜುಳಳನ್ನು ನಾಟಕದವರು ಹಂಗಿಸುತ್ತಿರುತ್ತಾರೆ.

ದಿನಕ್ಕೊಂದು ಹೆಣ್ಣಿನ ಸಂಗ ಮಾಡುವ ಈತನೊಟ್ಟಿಗೆ ಬಾಳಲಿಚ್ಚಿಸದ ಮಂಜುಳ ಅವನು ಹತ್ತಿರಕ್ಕೆ ಬರುತ್ತಿದ್ದಂತೆ ಜ್ಞಾನತಪ್ಪಿ ಬಿಡುತ್ತಿರುತ್ತಾಳೆ. ಮುಂದು ದುಂಡವ್ವನ ಕತೆ ಕೇಳಿ ತನಗೂ ಅದೇ ರೀತಿ ಹರಾಜು ಹಾಕಿ ಪೂಜಾರಪ್ಪನಂತೋರು ತನ್ನನ್ನು ಕೊಂಡು ಮದುವೆಯಾಗಬಾರದೆ ಎಂದು ದೆವ್ವ ಬಿಡಿಸಲು ಬಂದ ಪೂಜಾರಪ್ಪನ ಬಳಿಯೇ ಹೇಳುತ್ತಾಳೆ.

"ನಂಗೆ ದುಂಡವ್ವ ಆಗ್ಬೇಕು ಅಂತ ಅನ್ನುಸ್ತದೆ ಕಣ್ ಪೂಜಾರಯ್ಯ"[೧] ಎಂದು ತನ್ನ ಸುಪ್ತವಾದ ಬಯಕೆಯನ್ನು ಬಿಚ್ಚಿಡುತ್ತಾಳೆ. ಬೆಚ್ಚಿಬಿದ್ದ ಪೂಜಾರಯ್ಯನಿಗೆ ಮಂಜುಳ ಮತ್ತಷ್ಟು ತನ್ನ ಮನದ ಬೇಗುದಿಯನ್ನು ಏಕಾಂಗಿತನವನ್ನು ಅನಾವರಣ ಮಾಡುತ್ತಾಳೆ. "ನಾನೂ ದುಂಡವ್ವನ ಹಂಗೇ ಆಗ್ಬೇಕು. ನನ್ನೂ ನಮ್ ಯಜಮಾನ್ರು ಅರಾಜ್ ಹಾಕ್ ಬುಡಬೈಕು. ನಿನ್ನಂಥ ವೊಬ್ ವಳ್ಳೆ ಮನ್‌ಷಾ ನನ್ನ ಕೊಂಡ್ಕಬೈಕು ಅವುರ್ ಕುಟ್ಟಾ ನನ್ನ ಮದ್ವಾ ಆಗ್ಬೇಕು ಹಂಗಾರೂ ನಮಗೆ ನೆಮ್ದಿ ಸಿಗ್ಬೇಕು, ಅವ್ರು ಕೂಡಾ ಕ್ವಾಟ್ಲೆಗೆ ಯಿರೋಧವಾಡಾಕೆ ನಂಗ್ಯಾನೂ ಗೊತ್ತಿಲ್ಲ. ಅದ್ಕಾ ದೆಯ್ಯ ಬಂದೋಳಂಗೆ ಆಡ್ತಿವ್ನಿ ಕ ಅಯ್ಯ"[೨] ಎಂದಾಗ ಪೂಜಾರಪ್ಪ ಇಂಥ ಮಾರ್ಗ ಹಿಡಿಯದೆ ತನ್ನ ಬದುಕಿಗಾಗಿ ಹೆಣ್ಣು ಮಕ್ಕಳು ಸ್ವಲ್ಪ ಬಾಯಿ ಕಲಿತುಕೋಬೇಕೆಂಬ ಕಿವಿಮಾತಿನಿಂದ ಮಂಜುಳ ಹಾಗೇ ಮಾಡುವ ನಿರ್ಧಾರ ಕೈಗೊಳ್ಳುತ್ತಾಳೆ.

ಕೃಷ್ಣೇಗೌಡ ನಾಟಕದ ಅಮ್ಮ ಮಗಳನ್ನು ಮನೆ ಮತ್ತು ತೋಟದಲ್ಲಿಟ್ಟು-ಕೊಂಡಿದ್ದರಿಂದ ಅದನ್ನು ತಿಳಿದ ಅವನ ಅಕ್ಕ ಶಿವಕ್ಕ ತಮ್ಮನ ಬಳಿ ಪಾಲು ಕೇಳಲು ಬರುತ್ತಾಳೆ. ತಮ್ಮನ ಅಕ್ರಮ ಸಂಬಂಧದಿಂದ ರೊಚ್ಚಿಗೆದ್ದ ಶಿವಮ್ಮ ಊರಿಗ ಬಂದಿದ್ದಳು. ಅದನ್ನು ಕಂಡ ಕೃಷ್ಣೇಗೌಡ "ಇದೇನ ಇದು ಶಿವಕ್ಕಾ" ಕೈಯಲ್ಲಿ ಪತ್ರವೊಂದನ್ನ ಯಿಡಕೊಂಡು ಕೃಷ್ಣಯ್ಯ ಪಂಚೆ ಯೆತ್ತಿಕೊಂಡು ವೋಡಿ ಬಂದಿದ್ದ. "ಅದ್ಯಾಕ ವರುಸಕ್ ವಂದ್ ಮೂಟ ಭತ್ತ ಕೊಟ್ರೂ ಕೊಟ್ರೂ ಯೊಳನೆ ಕಲಾಸ್ ತಂಕಾ ನಿನ್ನ ಅಪ್ಪಯ್ಯ ವಾದ್ಸಿ ಪ್ಯಾಸ್ ಮಾಡಿಸಿಲ್ಲವಾ. ನೀನಾ ವಾದ್ಕಾ ತಿಳೀತದೆ"[೩] ಸಿವಕ್ಕ ಬಿಳಿಯೆಣ್ಣ ತಲಗೆ ಯೆಣ್ಣೆ ಹಚ್ಚುತ್ತಾ ಹೇಳುತ್ತಾಳೆ. "ನಿಂಗ ಯಾಳ್ನೆ ಕಡೆ ಸನಿ ಯೆಗ್ಲು

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನೀರು, ಪುಟ. ೪೧೦.

೨. ಅದೇ., ಪುಟ. ೪೧೦.

೩. ಅದೇ, ಪುಟ. ೪೦೯.

ಯೇರ್ಕಂಡಿರಬೇಕ್ ನೋಡು" ಎನ್ನುತ್ತಾಳೆ.[೧] ಕೃಷ್ಣಯ್ಯ ಸಿಟ್ಟಾದಾಗ "ತಿಕಾ ಹರ್ಕಬ್ಯಾಡಾ ಕಪ್ಪಾ ಕೃಷ್ಣಯ್ಯ, ಬೀದೀಲಿ ಹಾದೀಲಿ ವಾಗೋರೆಲ್ಲ ಬಂದು ನಮ್ ಹಟ್ಟೀಲಿ ತಮ್ ದರ್‌ಬಾರಾ ಮಾಡ್‌ಬೋದು ಅಂದ್ರೆ, ಮನಮಗಳಾಗಿ ನಂಗೆ ಯಿನ್ನೆಸ್ಟ್ ಅಕ್ ಇದ್ದದ್ದು ನೀನಾ ಲೆಕ್ಕ ಹಾಕ್ಕ. ಮೊದ್ಲೆ ವಂದ್ಸಲ ಯೆಚ್ಚೆರಿಸಿದ್ದಿ ನಾನು. ನಾಯಿ ಬಾಲುಕ್ಕೆ ದೆಬ್ಬ ಕಟ್ಟುದ್ರೆ ನ್ಯಾರಾಯ್ತದ್ಯೆ ಅನ್ನಂಗೆ ನೀನು ನಾಯಿ ಬಾಲವೇ ಆಗೋದಿ ಸನಿ ಯಾರ್ ಹೆಗ್ಲ ಯಾರ್ಕುಂಡದೇಂತ ಆ ಸಿವ ಹೇಳ್ತನೆ ಹ್ವಾಗು ಕಂದಾ ಕೋಲ್ಪ್ಗೆ ಹಾಕೀವ್ನಿ ಯೆಲ್ಲದ್ರಾಗೂ ತ್ವಾಟ ಗದ್ದ ಹಟ್ಟಿ – ವಂದೂ ಬುಡದೆ ಇರಂಗೆ ಅರ್ಧರ್ಧ ಪಾಲ ಯೆತ್ ನನ್ನ ಕಡೆ ಕೊಟ್ಟುಬುಡ್ತಾಯಿರಬೈಕು, ನಾನೂ ಯಾನಾ ನಮ್ ತವುರ ಕುಡಿ ವಂದೆ ಅದೆ ಯೆಲ್ಲಾ ಅವುಂಗೇ ಇರ್ಲಿ ಬಾಳ್ಲಿ, ಬದುಕ್ಲಿ ಅಂತ ಯೆಲ್ಲಾ ಬುಟ್ಟು ಇಷ್ಟೆ ದಿನಿನ್ ತಂಕಾ ಯಿದ್ದಿ ಯಾಳೋರ್ ಕ್ಯಾಳೋರ್ ಯಾರೂ ಇಲ್ವಾ ನಿಂಗ. ಮರ್ವಾದಿ ಮಾನುಕ್ಕಾರಾ ರವಷ್ಟು ಅಂಜ್ಕ ಬ್ಯಾಡವಾ? ಕಟ್ಕಂಡ್ ಯೆಣ್ಣಾ ಮೂಳಚಕ್ಕ ಮಾಡಿ ಹಟ್ಟಿಯಾಗ್ ಅವ್ವನ್ನ ತ್ವಾಟದ್ ಮನೆಯಾಗೆ ಮಗಳನ್ನು ಇಟ್ಕಂಡು ನಿನ್ ಆಟ ತೋರುಸ್ತಿದ್ದಿಯಾ. ಇನ್ ನನ್ನಾಟನೂ ನೀ ನೋಡಬೈದು. ಒಬ್ಬರಾಟವೇ ನೋಡಾಕ್ ಏನ್ ಚಂದ"[೨] ಎಂದು ಸಿವಕ್ಕ ನುಡಿಯುತ್ತಾಳೆ. ತನ್ನ ತಮ್ಮ ಇದರ ಹೆದರಿಕೆಯಿಂದಲಾದರೂ ಒಳ್ಳೆಯವನಾಗಬೇಕೆಂದು ಅವಳ ಆಶಯ.

ಮಹಿಳೆಯ ನಿರ್ಭಂದಿತ ಬದುಕಿನೊಳಗಿನ ತುಡಿತಗಳು, ಮನೋದೈಹಿಕವಾದ ಕಾಯಿಲೆಗಳಾಗಿ ಪ್ರಕಟಗೊಳ್ಳುತ್ತವೆ ಎಂಬುದನ್ನು ಮನೋವೈಜ್ಞಾನಿಕ ಸಿದ್ಧಾಂತಗಳು ಪ್ರತಿಪಾದಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಕತೆ ಬರೆದಿದ್ದಾರೆ ಲೇಖಕಿ.

ಎಂ.ಎಸ್.ವೇದಾರ **ಮುಳ್ಳು ಮನೆಯ ಮೇಲೆ** ಕಥಾಸಂಕಲನದಲ್ಲಿ **ಎಲ್ಲೋ ಜೋಗಪ್ಪ ನಿನ್ನ ಅರಮನೀ,** ಕತೆಯಲ್ಲಿನ ಸರೋಜಮ್ಮ ರಾಮಯ್ಯನ ಹೆಂಡತಿ ತುಂಬಾ ಸಿರಿವಂತರಲ್ಲದಿದ್ದರೂ ಚಿಕ್ಕ ಚೊಕ್ಕ ಸಂಸಾರ. ಅತ್ತೆಯು ಸೊಸೆಯು ಆಸೆಯಂತೆ ನಡೆಯುವಂತವಳು. ಹೀಗಿರುವಲ್ಲಿ ಅವರಿರುವ ಊರಿನಲ್ಲಿ ಕೆಲವರ ಜಮೀನನ್ನು ಸಾಹುಕಾರ ಕೊಂಡುಕೊಂಡು ಅಲ್ಲಿಗೆ ಕೂಲಿಗೆ ಹೋಗುವವರಿಗೆ ಸಾಕಷ್ಟು ಹಣವನ್ನು ನೀಡಿ ಜನರನ್ನು ಅವನೆಡೆಗೆ ಸೆಳೆಯುತ್ತಿದ್ದ ಅಂತಹ ಸೆಳೆತಕ್ಕೆ ಒಳಗಾದವಳು ಈ ಸರೋಜಮ್ಮ. ಗಂಡ ತಾನು ಕೂಲಿಗೆ ಹೋಗುವುದು ಬೇಡವೆಂದರೂ ಸಹ ಹಟ ಹಿಡಿಯುತ್ತಾಳೆ. 'ನಾಕೂ ಜನದಂಗೆ ಬಾಳ್ಮೆ ಮಾಡಾಕೆ ಬರ್ದೆ ಹ್ವಾದೋರೆಲ್ಲಾ ಹಿಂಗೆಯಾ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ನೀರು, ಪುಟ. ೪೧೦.

೨. ಅದೇ, ಪುಟ. ೪೦೯.

ಹರ್ಕಳದ್ದು. ವೂರ್ದ್ದೇ ವಂದ್ ದಾರಿ ಅಂದ್ರೆ ನಮ್ ಹಟ್ಟಿಗಂಡ್‌ಸದೆ ವಂದ್ ದಾರಿ' ನಿಮ್ ನಂಬ್ಕಂಡ್ರೆ ತಿನ್ನಾ ಅನ್ನುವಾ ಚಿನ್ನವಾಗಿ ವೋಯ್ತದೆ ನನ್ ಮಾತ್ ಇಷ್ಟೆಯಾ ನಾಳಿಂದ ನಾನೂ ಮೈಸೂರ್ ಸಾವ್ಕರ್ರಾ ಜಮೀನ್ಗೆ ಕೂಲಿಗೋಯ್ತಿನಿ, ನೀವ್ ಒಪ್ಗಂಡಾರಾ ವಪ್ಕಳ್ಳಿ, ಬುಟ್ಬಾರಾಬುಟ್ಕಳ್ಳಿ ನಂಗೂ ನಾಕಾಸು ಕಾಣಾ ಆಸೆ ಆಗಿದೆ. ಅದ್ನ ತಡಿಯಾಕೆ ಯಾವ್ ಅಪಲತ್‌ಗಾರ ಮೊಮ್ಮಗಂಗೂ ಆಗಾಕಿಲ್ಲ"[೧] ಎಂದು ಗಂಡನೊಂದಿಗೆ ವಾದಿಸಿ ಕಣ್ಣೀರು ಹಾಕುತ್ತಾಳೆ. ಇವಳ ಆಸೆಯಂತೆ ಕೂಲಿಗೆ ಸೇರಿಕೊಂಡ ಸರೋಜಮ್ಮ ಮಣಿಯಪ್ಪನ ಕಣ್ಣುಗಳಿಗೆ ರೋಜಮ್ಮನಾಗೆ ಅವನ ಆಕರ್ಷಣೆಗೆ ಒಳಗಾಗಿ ಮನೆಯನ್ನು ಗಂಡ ಮಕ್ಕಳನ್ನು ತೊರೆದು ಅವನೊಂದಿಗೆ ಹೋಗಿ ಮಣಿಯಪ್ಪನ ನಿಜ ಬಣ್ಣ ತಿಳಿದಾಗ ಅವಳ ಆಶಾಗೋಪುರ ಕಳಚಿ ಬೀಳುತ್ತದೆ. ಕೊನೆಗೆ ಮಣಿಯಪ್ಪನು ಅವಳನ್ನು ಹೀಯಾಳಿಸುತ್ತಾನೆ. ಸರೋಜಮ್ಮ 'ನನ್ನತ್ರ ಯಾಕ್ಲ ಸುಳ್ಳು ಯಾಳಿದ್ದು"[೨] ಹ್ವಾಗಿ ಬನ್ನಿ ಎಂಬುದನ್ನು ಮರೆತು ಕೋಪದಿಂದ ಕೇಳುತ್ತಾಳೆ.

ಅಲ್ಲೆ ಕಾಲ ಕಳೆಯುತ್ತಿದ್ದ ರೋಜಮ್ಮನನ್ನು ಮಣಿಯಪ್ಪ 'ಬೆಳಗಾಗ ಬುಡ್ಲಿಲ್ಲಾ ಆಗ್ಲೆ ಆಕುಳುಸ್ತಾ ಕುಂತ್‌ಗಂಡ್ಯಲ್ಲೆ ಬ್ಯಾರೇನೂ ಕ್ಯಾಮೆ ಇಲ್ವಾ ನಿಂಗೆ ಎಂದು ಕೆಣಕಿದಾಗ "ನಿಂದೂ ಹನ್ನೆಲ್ಡು ಕಂಬುದ್ ಘನಂದಾರಿ ಹಟ್ಟಿ ನ್ವಾಡು ಬೆಳಗಿಂದ ಸಂಜೀಗಂಟಾ ಕ್ಯಾಮೆ ಮಾಡ್‌ಬ್ಯಾಕಾದ್ದೆ ಕುಂತರ ಕಾಲ್‌ಗ ವಡೀತದೆ, ನಿಂತ್ರೆ ತಲೀಗ್ ಬಡೀತದೆ ಅನ್ನಾ ಈ ಪಡಗೋಸಿ ಹಟ್ಟ್ಯಾಗೆ ಯಾನ್ ಕ್ಯಾಮೆ ಯಿದ್ದದ್ದು ನೀನಾ ವಸಿ ಅಪ್ಣಕೊಡುಸು ಆಕುಳ್‌ಸಾದು ಬುಟ್ಟು ಮಾಡಾಂವಂತೆ ಅದ್ಕೇನಾ"[೩] ಎಂಬುದಾಗಿ ವ್ಯಂಗ್ಯವಾಡುತ್ತಾಳೆ.

ಹೀಗೆ ದುಡಿಯುವ ವರ್ಗದ ಹಿಂದೆ ಹಲವಾರು ಸಂಕಷ್ಟಗಳು ಹೇಗೆ ಎದುರಾಗುತ್ತವೆಂಬುದನ್ನು ವೇದಾರವರು ನಿರೂಪಿಸಿದ್ದಾರೆ.

ಕೊನೆಯಲ್ಲಿ ಸರೋಜಮ್ಮ ತನ್ನ ಗಂಡ ರಾಮಯ್ಯನೊಂದಿಗೆ ಇರುವ ನಿರ್ಧಾರ ಮಾಡಿಕೊಂಡು ಮತ್ತೆ ಬರುವುದರೊಂದಿಗೆ ಕತೆ ತನ್ನದೇ ಆದ ತಿರುವನ್ನು ಪಡೆದುಕೊಂಡಿದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಮುಳ್ಳುಮನೆಯ ಮೇಲೆ, ಎಲ್ಲೋ ಜೋಗಪ್ಪ ನಿನ್ನಾ ಅರಮನೀ..... ಪು. ೪೩೨.

೨. ಅದೇ, ಪುಟ. ೪೩೪.

೩. ಅದೇ, ಪುಟ. ೪೨೭.

ಕೊಳಕುಮಂಡಲ ಕತೆಯಲ್ಲಿನ ಮಾದೇವಿ ಮೃದು ಸ್ವಭಾವದವಳಾಗಿದ್ದು ಅತ್ತೆಯ ಕಾಟದಿಂದ ಬೇಸತ್ತವಳಾಗಿದ್ದಾಳೆ. ಅತ್ತೆ ಬಸಮ್ಮೋರು ತನ್ನ ಅಕ್ಕ ಉಸ್ಕೂರಮ್ಮ ಬರುತ್ತಾಳೆಂದು ತಿಳಿದು ಅವಳ ಬಗ್ಗೆಯೇ ಮಾತನಾಡುತ್ತಾಳೆ' ಗಂಡ ಸತ್ ಮುಂಡೆಯಂತೆಕೇ ಗಂಡುನ್ ಅಟ್ಟಿನಾಗೆ ಯಾಕ್ ಇರಬೈಕು ಅಂತೀನಿ. ಅವುಳಪ್ಪ ಅವ್ವ ಇಲ್ದೆ ಇರಬೋದು ನಾವಿಲ್ವಾ ನಮ್ಮ ದೊಡ್ಡವ್ವುನ ಮಗುಳಲ್ವ ನಂಗ್ ಅಕ್ಕಾ ಆಗಬೈಕಿಲ್ವಾ, ಬರ್ನೇಳು, ಇಲ್ಲೇ ಇರನೇಳು ರಾಣಿ...... ರಾಣಿ ಹಂಗೆ ನೋಡ್ಕಂತಿನಿ. ಗಂಡ್ ಸತ್ ವಂದೊರ್ಸದ ಮ್ಯಾಲಾಯ್ತಲ್ಲ ಒಂದಪನಾರಾ ತವುರ್ ಮನೆ ಅಂತ ಇತ್ತಗ್ ತಲೆ ಹಾಕೋಳಾ! ಹಾಕ್ತಾಳೆ ಹಾಕ್ತಾಳೆ ಅಂತ ನಂಗೂ ಕಾದ್ ಕಾದ್ ಸಾಕಾಯ್ತು. ಅವುಳೇ ಬತ್ತಳೆ ಅಂತ ಕಾದ್ರೆ ಕೈಗೆ ಚಿಪ್ಪು ಸಿಗ್ತದೆ ಅಷ್ಟೇಯಾ"[೧] ಎಂದು ಎಣಿಕೆ ಹಾಕಿಕೊಳ್ಳುತ್ತಾಳೆ.

ಸೊಸೆ ಇವರ ಮಾತಿನ ನಡುವೆ ಕಾಫಿ ನೀಡಲು ಬಂದಾಗ ಮಾತನ್ನು ಅಲ್ಲಿಯೇ ನಿಲ್ಲಿಸಿ "ಬಿರ್ರನೇ ಯಿಟ್ಟುಬುಟ್ಟು ಅಡುಗೆ ಕ್ವಾಣೆ ಗೆಯ್ಮೆ ನೋಡೋಗಮ್ಮಿ"[೨] ಎಂದು ಗದರಿಸಿದಳು. ತಮ್ಮ ಉಸ್ಕೂರಮ್ಮನನ್ನು ಕರೆದುಕೊಂಡು ಹೋಗಿದ್ದರಿಂದ ಕೋಪಗೊಂಡ ಬಸಮ್ಮ "ಕೊಳಕ್‌ಮಂಡ್ಳ ಆವು ಕಡ್ತಿರಾ ದ್ಯಾಹ ಅದು, ತಕ್ಕುಂಗೂ ಮುಕ್ಕುಂಗೂ ಜೋಡಿ ಸರಿ ಆಯ್ತು ಅನ್ನಂಗೆ, ಅನ್ನ ಅಳಸಿತ್ತು ನಾಯಿ ಹಸಿದಿತ್ತು, ತಕ್ಕಾ ಅಷ್ಟೈಸ್ವರ್ಯ ಇರೋನಟ್ಟಿ ಸ್ವಸೆ ಆಗೇ ಬುಟ್ಟು"[೩] ಎನ್ನುತ್ತಾಳೆ. ಅವಳ ಈ ಹೊಟ್ಟೆ ಉರಿಗೆ ಕಾರಣ ಉಸ್ಕೂರಮ್ಮ ಬಹಳ ಚಿನ್ನ ಬೆಳ್ಳಿ ಇಟ್ಟುಕೊಂಡಿದ್ದಾಳೆ ಅದನ್ನು ಬೇರೆಯವರು ಕಸಿದುಕೊಳ್ಳಬಾರದೆಂದು ಅದನ್ನು ತಾನೇ ಧಕ್ಕಿಸಿಕೊಳ್ಳಬೇಕೆಂಬ ಹಂಬಲ.

ಉಸ್ಕೂರಮ್ಮ ಬಂದಾಗ ಬಸಮ್ಮ ಸೊಸೆಗೆ "ಇದ್ಯಾಕಮ್ಮಿ ಹಿಂಗ್ ನಿಂತ್‌ಬುಟ್ಟೆ ಗರುಡ್ ಗಂಬದ ಹಂಗೆ, ಉಸ್ಕೂರಮ್ಮನ ಕಾಲ್ಗೆ ಬೀಳಮ್ಮಿ"[೪] ಎಂಬುದಾಗಿ ಹೇಳುತ್ತಾಳೆ. ಜೊತೆಗೆ ಉಸ್ಕೂರಮ್ಮನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಸೊಸೆಗೆ ಹೇಳುತ್ತಾಳೆ.

ಉಸ್ಕೂರಮ್ಮ ಸತ್ತಾಗ ಕಬ್ಬಿಣದ ಪೆಟ್ಟಿಗೆಯನ್ನು ತಾನೇ ಅಪರಿಸುತ್ತಾಳೆ. ಆದರೆ ಅಣ್ಣತಮ್ಮಂದಿರು ಬಿಡದೆ ಇದ್ದಾಗ ಅವರು ಸೇರಿ ಪೆಟ್ಟಿಗೆ ತೆಗೆದಾಗ ಅದರಲ್ಲಿ ಕೊಳೆತ ಕೊಳಕುಮಂಡಲ ಸಿಗುತ್ತದೆ. ಅಂದರೆ ಮನಸ್ಸಿನಂತೆ ಮಾದೇವ ಎಂಬಂತೆ ಇವರ ಕೊಳಕು ಮನಸ್ಸಿಗೆ ಕೊಳಕು ಮಂಡಲವೇ ಸಿಗುತ್ತದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತಹಕ, ಮುಳ್ಳು ಮನೆಯ ಮೇಲೆ, ಕೊಳಕುಮಂಡಲ, ಪು. ೪೭೪.

೨. ಅದೇ., ಪುಟ. ೪೭೫.

೩. ಅದೇ., ಪು. ೪೭೪.

೪. ಅದೇ., ಪುಟ. ೪೭೬.

ಇಲ್ಲಿ ವೇದಾರವರು ಅಕ್ಕ ತಂಗಿ ಅಣ್ಣತಮ್ಮಂದಿರಾದರೂ ಹಣದ ಆಸೆ ಸಂಬಂಧವನ್ನು ಮರೆಸುತ್ತದೆ. ಹಣವೇ ಅಲ್ಲಿ ಮೊದಲಾಗುತ್ತದೆ ಎಂಬುದನ್ನು ಈ ಕತೆಯಲ್ಲಿ ತೋರಿಸಿದ್ದಾರೆ.

ದ್ಯಾವ್ರಗೆ ಒಂದು ಪ್ರಶ್ನೆ ಎಂಬ ಕತೆಯಲ್ಲಿ ಮಾವ ಮತ್ತು ಸೊಸೆಯ ಜಗಳವನ್ನು ಕಾಣಬಹುದು. ಇಲ್ಲಿ ಗ್ರಾಮೀಣ ಸ್ತ್ರೀ ಪಾತ್ರವನ್ನು ಕಾಣಬಹುದು ತನ್ನ ಗಂಡ ಕೊಮಾರಾ ಮಾವನ ಮಾತಿಗೆ ತಕ್ಕಂತೆ ಕುಣಿಯುತ್ತಾನೆಂದು ಹೆಂಡತಿ ಅವನನ್ನು "ಅಪ್ಪಂಗ್ ಅದಾಕ್ ಬುಟ್ಟ ಧೀಂರಂಗ ಅಂತ ಕುತ್ಕಂಡು ಹಗ್ಗ ವಸೀತಿದ್ದರ್‍ಯಾ ನನ್ ಹೆಂಡ್ತೀನ್ ಯಾಕ್ ಹಿಂಗ್ ಆಡ್ತಾ ಕುಂತದೀ ಅಪ್ಪಂತೋನೆ ಅಂತ ವಂದ್ ಮಾತಾ ಕ್ಯಾಳಕ್ ಯೇಗ್ತೆ ಇಲ್ಲವಾ? ಆ ಸುಕ್ಕುಕ್ಕೇ ಯಾಕ್ ಲಗ್ಣ ಆಗಬೇಕಿತ್ತು. ನಮ್ಮಪ್ಪನ್ ವೂರ್‍ನಾಗ್ ಯೆಂಗೋ ಯಾಪಾರ ಗೀಪಾರ ಮಾಡ್ಕಂಡ್ ನೆಮ್ಮದಿಯಾಗಿದ್ದೋ ಅಂತೋರ್‍ನ ನಿನ್ ತಮ್ಮ ಅನ್ನಿಸ್ಕಂಡ್ ಗ್ರಾಸ್ತ ತಂದು ನಮ್ಮ ಇಲ್ಲಿ ತಂದ್ ಹಾಕ್ಬುಟ್ಟು ಹೊಂಟೋದ ಅನ್ನು, ಅವ್ನ ಹೆಂಡ್ತಿ ಮಾತ್ರ ಪಟ್ಟಣದಾಗೆ ಸುಕವಾಗಿ ಇರ್‍ಬೇಕು. ನನೂ ನನ್ನ ಗಂಡ ಮಕ್ಳು ಈ ಹಳ್ಳಿ ಕೊಂಪ್ಯಾಗೆ ಈ ವಯ್ಯನ ಮಾತಾ ಕ್ಯಾಳ್ಕಂಡು ಅಗ್ದು ವುಣ್ದೆ ನಿಗ್ದು ತಿರುಗಾಡ್ದೆ ಬದುಕ್ ಬೇಕು"[೧] ಎಂಬುದಾಗಿ ಗಂಡನೊಂದಿಗೆ ಜಗಳ ಕಾಯುತ್ತಾಳೆ. ಪ್ರತಿಬಾರಿಯು ಇವಳು ಮಾವ ಜಗಳವಾಡುವುದು ಮೈದ ಬಂದು ಸುಮ್ಮನಿರಿಸುವುದು ಹೀಗೆ ಸಾಗುತ್ತದೆ. ಕೊನೆಯಲ್ಲಿಯಾದರೂ ಯಾರು ತಮ್ಮ ತಪ್ಪನ್ನು ಅರಿತುಕೊಳ್ಳುವುದೇ ಇಲ್ಲ ಎಲ್ಲರೂ ಅವರವರ ಮೂಗಿನ ನೇರಕ್ಕೆ ಮಾತನಾಡುತ್ತಾರೆ.

ಮಂಜಿಯೂ ಮುತ್ತಜ್ಜಿಯ ಗಂಧರ್ವ ಕನ್ನೆ ಕತೆಯೂ ಎಂಬ ಕತೆಯಲ್ಲಿ ಮಂಜಿ ಎಂಬ ಮುಗ್ಧ ಹುಡುಗಿ ಅವಳ ಚಿಕ್ಕಮ್ಮಾ ಉಗ್ರ ಸ್ವರೂಪದವಳು ಮಂಜಿಯೊಂದಿಗೆ ಯಾವಾಗಲೂ ಜಗಳವಾಡುವುದು ಅವಳಿಂದಲೇ ಎಲ್ಲಾ ಕೆಲಸಗಳನ್ನು ಮಾಡಿಸುವುದು ಮತ್ತು ಮಂಜಿಯನ್ನು ಹೊಡೆಯುವಂತಹವಳಾಗಿದ್ದಳು.

ಮಂಜಿ ಇಲ್ಲಿ ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಹುಡುಗಿ. ಹುಡುಗಿಯನ್ನು ಸಾಕುವ ನೆಪದಿಂದ ೨ನೇ ಮದುವೆಯಾದ ಶಿವಯ್ಯ ಆದರೆ ಎರಡನೇ ಹೆಂಡತಿ ಪಾತಮ್ಮ ತಾನು ತನ್ನ ಮಗಳು ತಾರ ಶುಚಿಯಾದ ಬಟ್ಟೆಬರೆ ಹಾಕಿ ರುಚಿಕರ ತಿಂಡಿ ತಿನ್ನುತ್ತಾ ಮಂಜಿ ಪಾಲಿಗೆ ಬರೀ ಕೆಲಸ, ಬೈಗುಳ, ಹೊಡೆತವೇ ಗತಿಯಾಗುತ್ತದೆ. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಮನೆಯ ಎಲ್ಲಾ ಕೆಲಸಗಳನ್ನು

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಮುಳ್ಳುಮನೆಯ ಮೇಲೆ, ದ್ಯಾವ್ರಗೆ ಒಂದು ಪ್ರಶ್ನೆ, ಪು. ೪೮೪.

ಮಾಡುವ ಇವಳ ಮೇಲೆ ಇಡೀ ಊರವರು ಅನುಕಂಪ ತೋರಿಸಿದಾಗ ಪೆದ್ದು ಪೆದ್ದಾಗಿ ನೋಡುತ್ತಾಳೆ.

ಪಾತಮ್ಮ ಇವಳಿಗಾಗಿ ಮದುವೆ ತಯಾರಿ ಮಾಡುತ್ತಾಳೆ ಆದರೆ ಮದುವೆ ಹುಡುಗ ಬರುವುದಿಲ್ಲ. ಮಾಡಿದ ಖರ್ಚು ವ್ಯರ್ಥವಾಯಿತೆಂದು ಹೊಡೆಯುವುದು, ಬೈಯ್ಯುವುದು ಹೆಚ್ಚಾದಾಗ ಇಷ್ಟು ದಿನ ಬೈಸಿಕೊಳ್ಳುತ್ತಿದ್ದ ಮಂಜಿ ಧೈರ್ಯದಿಂದ ಎದ್ದು ಪ್ರಶ್ನೆ ಮಾಡುತ್ತಾಳೆ ಹೊಡೆಯೇ, ಬಡಿಯೇ, ಸಾಯ್ಸೆ ಎಂದು ಜಗಳಕ್ಕೆ ನಿಲ್ಲುತ್ತಾಳೆ.

"ವಡೀತಿಯೇನೇ ಮುಂಡೆ.... ವಡದು .... ಸಾಯ್ಸಿ ಬಂಡೇ.... ನಾಯೇನಾ ಹೆದ್ರುಕಳ್ಳಲ್ಲ.... ಬಾರೇ ಮುಂಡೆ ಸಾಯ್ಸ್‌ಬಾರೆ"[೧] ಎಂದು ಮರ್ಯಾದೆ ನೀಡದೆ ಬೈಯ್ಯುತ್ತಾಳೆ.

ಮದುವೆ ನಿಂತಿದ್ದರಿಂದ ಸಿಟ್ಟುಗೊಂಡ ಪಾತಮ್ಮ "ನಿನ್ ಬಯಿಗ್ ಮಣ್ಣಾಕ್ಹೋಗ ನಿನ್ ಅದ್ರುಷ್ಟ ಹೆಂಗಿದ್ದುದು ನೋಡು ಯಾನೋ ವಂದ್ ದಾರಿ ಕಾಣಿಸ್‌ಬಟ್ಟು ತಲೆಗೆ ವುಳಿ ಬುಟ್ಕಂಡು ಬುಡಾಂವ ಅಂತ ಹತ್ತಾರು ಸಾವ್ರ ಸಾಲಸೋಲ ಮಾಡಿ ಲಗ್ಣದ್ ಯವಸ್ಥೆ ಮಾಡಿದ್ದೆ ಹಿಂಗಾಂಗ್ ಕುಂತ್ಕತಲ್ಲ ನಿಂದೆಂಥ ನಕ್ಷತ್ರವಾತ್ತಾಯಿ ನಿನ್ ಮೊಖಾ ನೋಡುದ್ರೆ ವಂದ್ ಗುಟ್ಕು ನೀರೂ ಸಿಕ್ಕಾಕತ್ತಾ ಕಾಣೆ"[೨] ಎಂದು ಬೈಯ್ಯುತ್ತಾಳೆ.

ದೀಪಕ್ಕೆ ಎಣ್ಣೆ ಹಾಕುವಾಗ ನೆಲಕ್ಕೆ ಚೆಲ್ಲಿದ್ದನ್ನೆ ನೆಪಮಾಡಿ ಜಗಳ ತೆಗೆದ ಚಿಕ್ಕಮ್ಮನು "ಹೋಗು ಮುಂಡೆ ನಿನಗೆ ತಕ್ಕ ಶಾಸ್ತಿ ಮಾಡ್ತೀನಿ ಹೋಗು"[೩] ಎಂದು ಬೈದು ಚಿಕ್ಕಮ್ಮ ಅತ್ತ ಹೋಗುತ್ತಾಳೆ. ಇತ್ತ ಮಂಜಿ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಚಿಕ್ಕಮ್ಮಳ ಹೊಡೆತ ಬೈಗುಳ ಮಂಜಿಗೆ ಬೇಸರ ತರಿಸಿತ್ತು. ಮೈನೆರೆದ ನಂತರ ಮದುವೆಯಾಗಿಯಾದರೂ ಈ ನರಕದಿಂದ ಮುಕ್ತಿ ಸಿಗಬಹುದೆಂಬ ಚೂರು ಆಸೆಯಿಂದ ಕಾದಿದ್ದವಳಿಗೆ ಮದುವೆ ಮುರಿದದ್ದು ಆಘಾತವನ್ನುಂಟು ಮಾಡುತ್ತದೆ. ಇದಕ್ಕಿಂತ ಬೇಸರದ ಸಂಗತಿಯೆಂದರೆ ಮದುವೆ ತಯಾರಿಗಾಗಿ ಖರ್ಚಿನ ಬಗ್ಗೆ ಚಿಂತೆ ಹತ್ತಿಸಿಕೊಂಡು ಬೈಯ್ಯುವ ಚಿಕ್ಕಮ್ಮ ಅವಳಿಗೆ ರಾಕ್ಷಸಿಯಂತೆ ಕಂಡಳು. ಮತ್ತದೇ

---

೧. ಎಂ.ಎಸ್.ವೇದಾರ ಮಂಜಿಯು ಮುತ್ತಜ್ಜಿಯಾದ ಕನ್ನೆ ಕತೆಯೂ, ಪುಟ. ೯೧

೨. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಮಂಜಿಯು ಮುತ್ತಜ್ಜಿಯಾದ ಕನ್ನೆ ಕತೆಯೂ, ಪುಟ. ೫೦೪.

೩. ಅದೇ ಪುಟ. ೫೦೬.

ನರಕಕೂಪದಲ್ಲಿ ಬೇಯ್ಯಬೇಕಲ್ಲ ಎಂಬ ಸಂಕಟವನ್ನು ಪ್ರತಿದಿನದ ಈ ಗೋಳಿಗಿಂತ ಸಾವೇ ಸೂಕ್ತ ಎಂಬ ನಿರ್ಧಾರಕ್ಕೆ ಮಂಜಿ ಮುಂದಾಗುತ್ತಾಳೆ.

ಈ ಸಂದರ್ಭದಲ್ಲಿ ಬರುವ ಮುತ್ತಜ್ಜಿಯ ಮಾತುಗಳು ಸ್ತುತ್ಯಾರ್ಹ, ಹುಡುಗಿಗೆ ಸಾಂತ್ವಾನ ಮಾಡುವುದು ಬಿಟ್ಟು ಹೀಗೆ ಹೊಡೆಯಬಾರದೆಂದು ಬುದ್ಧಿವಾದ ಹೇಳುತ್ತಾಳೆ. ಇಲ್ಲಿ ಮುತ್ತಜ್ಜಿಯ ಪಾತ್ರ ಗಮನಾರ್ಹ "ಯೆಲ್ರಿಗೂ ವಸಿ ಬಾಯಿ ಮುಚ್ಕಂಡಿರಾಕೆ ಹೇಳ್ದೀಯ ಸಿವಯ್ಯ, ಹೆಣ್ಣು ಅಂದ್ರೆ ಯೇನಂದುಕಂಡು ಬುಟ್ಟಿದ್ದಾರು ಇವ್ರೆಲ್ಲಾ ಹಾದಿಬಿದ್ಯಾಗೆ ಬಿದ್ದರ ವಂದ್ ಮಣ್ಣೂ ಜನ ಬೆಲ ಕಟ್ಟಿ ತಗಂಡು ವೋಯ್ತಾರೆ, ಅಂತದ್ರಲ್ಲಿ ವಂದ್ ಹೆಣ್ಣಾ.... ಅವುಳೇನು ಕೊಳೆತಕಂಡು ಬಿದ್ದೋಳಾ? ವಟ್ನಲ್ಲಿ ಯಾರ್ಗಾದ್ರೂ ಲಗ್ಣ ಮಾಡಿ ಬುಡಬೈಕು ಈಗ ಅವ್ನು ಯ್ಯಾರಾದ್ರೂ ಸೈ ಮುದ್ಕಾ ಮೋಟಾ, ಕುಡ್ಕ, ಚೊತ್ತ, ರ‍್ವಾತೇಮುಕ್ಕ.... ಕಡೀಗೆ ಅವ್ನು ಗಂಡ್ಸಲ್ಲದಿದ್ರೂ ಆಯ್ತು..... ವರ ಅಂತ ಕರ್ಕ ಬಂದು ಈಗ ಅವುಳ ಕುತ್ಗೆಗೆ ನೇಣ್ ಬಿಗುಸ್‌ಬುಡಬೇಕು. ನಿಮ್ ಕೈ ತೊಳ್ಕಾಬುಡಬೆಕು. ಯಾಕಂದ್ರೆ ನಿನ್ ಯೆಡ್ತಿಗೆ ಸಾಲ ಆಗ್‌ಬುಟ್ಟದೆ..... ನಿಂಗೆ ಮರ್ವಾದೆ ಯೆಚ್ಚಾಗ್‌ಬುಟ್ಟದೆ.... ಅದ್ಕೆ ಮಂಜಿನಾ ಯಾರ್ಗ ಕೊಡಾಕು ತಾಯಾರಾಗ್‌ಬುಟ್ಟಿದ್ದೀರಿ"[೧] ಎಂದು ಬುದ್ಧಿವಾದ ಹೇಳುತ್ತಾಳೆ.

ಹಸಿವೆಂಬ ಹೆಬ್ಬಾವು ಬಂದು ಹಿಡಿದೊಡೆ ಎಂಬ ಕತೆಯಲ್ಲಿ ಶಿವಮ್ಮ ಗ್ರಾಮೀಣ ಪ್ರದೇಶದ ಸ್ತ್ರೀಯರ ಮುಗ್ಧಗೆ, ಧೈರ್ಯ, ಸಾಧನೆಗಳಿಗೊಂದು ಪ್ರತೀಕವಾಗಿದ್ದಾಳೆ. ಇಲ್ಲಿ ಇವಳು ತನ್ನ ಮಗನಿಗಾಗಿ ಒಂದು ಜಾಮೂನನ್ನು ಕೊಡಿಸಲು ಮಾಡುವ ಪ್ರಯತ್ನ ಮಹತ್ವದ್ದಾಗಿದ್ದು, ಅದು ಅವಳ ಕಿತ್ತು ತಿನ್ನುವ ಬಡತನ, ಅಂತೆಯೇ ತನ್ನ ಮಗನ ಆಸೆ ಈಡೇರಿಸಲು ಆಗಲಿಲ್ಲವಲ್ಲ ಎಂಬ ತವಕದೊಂದಿಗೆ ಹೇಗಾದರೂ ಒಂದು ಜಾಮೂನು ಕೊಡಿಸಿಯೇ ತೀರಬೇಕೆಂಬ ಅವಳ ಹಟ ಮೆಚ್ಚುವಂತದ್ದು. ಪರಂಗಿ ಹಣ್ಣಿನ ವಿಷಯಕ್ಕಾಗಿ ಗಂಡ ಸಿವಮ್ಮನಿಗೆ ಹೊಡೆದಾಗ "ನಿನ್ನ ಕೈ ಹಿಡಕ್ಕಂಡು ಈ ಅರಮನೆ ವಕ್ಕಮ್ಯಾಕೆ ಎಲ್ಲಾ ವಗ್ತನಾನೂ ಕಲಿಯದೇ ಆಗದೆ ಕಪ್ಪಾ, ಅಗ್ದು ವುಣ್ಣ್ ಬ್ಯಾಡಾ ನಿಗುದ್ ತಿರುಗಾಡಬ್ಯಾಡಾ ನಿನ್ ಎಡೇಲಿ ವಗ್ತನ ವಗ್ತನ ಅಂತ ಬಡಕಂತಿಯಲ್ಲಿ ಯೇನಿದ್ದದು ಇಲ್ಲಿ ಮುಂಡಾ ಮುಗುಚಕಳ್ಳಾದು, ಕ್ಯಾಣ ಸಾರ ನೋಡು

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಮಂಜಿಯು ಮುತ್ತಜ್ಜಿಯಾದ ಕನ್ನೆ ಕತೆಯೂ, ಅದೇ ಪುಟ. ೫೦೪.

ಹೆಂಗಿದ್ದದು ಹೈಕಳು ತಿಂದುಬುಟ್ರೆ ನಿಂಗೆ ತಡಕಳ್ಳಿಕಾದೀತಾ? ಕೈಗೆ ಕಾಸ್ ತಪ್ಪೋತದಲ್ಲ ನಿನ್ ಆಕ್ಲಾಸ ನೋಡು ಹೆಂಗಿದ್ದದು"[೧] ಎಂದು ರೇಗುತ್ತಾಳೆ.

ಶಾಲೆಯಲ್ಲಿ ಇವಳ ಮಗ ಶಂಕರ ಯಾರಿಗೆ ಏನು ಇಷ್ಟ ಎಂದು ಕೇಳಿದಾಗ ಮುದ್ದೆ ಸಾರ್ ಎಂದಾಗ ಎಲ್ಲರೂ ನಗುತ್ತಾರೆ. ಅದನ್ನು ತಾಯಿಯ ಮುಂದೆ ಹೇಳಿದಾಗ "ಅಲ್ಲಕ ಮಾರಾಯ ನೀ ಯಾಕ್ ಮುದ್ದಾ ಇಷ್ಟ ಅಂದಿ ಬ್ಯಾರೇನೂ ತಿಳೀನೇ ಇಲ್ಲವಾ ನಿಂಗೆ"[೨] ಎನ್ನುತ್ತಾಳೆ. ಆದರೆ ಕಮಲ ಜಾಮೂನು ಎಂದು ಹೇಳಿದಾಗ ಅದನ್ನು ತಿನ್ನಲೇಬೇಕೆಂಬ ಹಟ ಶಂಕರನಿಗೆ ಬರುತ್ತದೆ. ಅವನು ತನ್ನ ತಾಯಿಯ ಹತ್ತಿರ ಆಸೆ ವ್ಯಕ್ತಪಡಿಸುತ್ತಾನೆ. ತಾಯಿ ಕಷ್ಟಪಟ್ಟು ಹೇಗೋ ದುಡ್ಡು ಉಳಿಸಿ ಪುಟ್ಟಣ್ಣನ ಹೊಟೇಲ್‌ನಲ್ಲಿ ಬಂದು ಜಾಮೂನು ತೆಗೆದು "ತಗಾ ಮಗಾ ತಿನ್ನು"[೩] ಎಂದಾಗ ಮಗ ಅದನ್ನು ನಿರಾಕರಿಸಿ ಮಣ್ಣುಪಾಲು ಮಾಡಿದಾಗ ಅವಳು ಪಟ್ಟ ಪರಿಶ್ರಮ ನಿರರ್ಥಕವಾಗುತ್ತದೆ. ಅದಕ್ಕೆ ಕಾರಣ ಜಾಮೂನಿನ ಮೇಲೆ ಬೇರೆ ಭಾವನೆ ಬರುವಂತೆ ಮಾಡಿದ್ದು ಗೌಡರ ತಮ್ಮ, ಹೀಗೆ ಶ್ರೇಣಿಕೃತ ವ್ಯವಸ್ಥೆಯಲ್ಲಿ ಹಲವರು ಶೋಷಣೆಗೆ ಒಳಗಾಗುತ್ತಾರೆ ಎಂಬುದನ್ನು ವೇದಾ ಈ ಕತೆಯಲ್ಲಿ ಹೇಳಹೊರಟ್ಟಿದ್ದಾರೆ.

ಶಿವಮ್ಮನ ಗಂಡ ಅವಳನ್ನು ಮಗನ ವಿಷಯಕ್ಕೆ ಬೈದು ಅವರಪ್ಪನ ಬಗ್ಗೆ ಮಾತನಾಡಿದಾಗ "ಬಾಯ್ ಮುಚ್ಕಂಡು ಕುಂತ್ಗಾ ಮುಂಡೆಮಗ್ನೆ ನಮ್ಮಪ್ಪುನ್ ಯೆಸ್ರ ಯಾಳಾಕು ಯೋಗ್ಯತೆ ಇಲ್ಲ ನಿಂಗೆ ನಮ್ಮಪ್ಪ ಯಾಕ್ ಜೀತುಕ್ಕೆ ವಾದರೂ ದ್ಯಾವ್ರು ಚೆನ್ನಾಗೆ ಯಿಟ್ಟೋನೆ ನಿನ್ ಕೈಲಿ ತಾಳಿ ಕಟ್ಟಿಸ್ಕೊಂಡು ನಾನ್ ಆಳಾದಿ ಅಷ್ಟೆಯಾ? ನಮ್ಮಪ್ಪ ನನ್ನಾ ಹಟ್ಟಿ ವಳಗೆ ಮಡಿಕ್ಕಂಡು ಮುಚ್ಚಟೆಯಾಗೇ ಸಾಕುದ್ರು, ಹಾಲು ಕುಡಿಸಿದೋರಿಗೆ ಅಣೆ ಮ್ಯಾಲೆ ಬರಿಯ ಹಕ್ಕಿದ್ದದಾ? ಯಿಲ್ಲ ಭಗವಂತ ನಂಗೆ ಇಂಥಾ ಅಣೆಬರಾ ಬರ್ದಾ ಅಣೇಬರಕ್ಕೆ ವಣೆ ಯಾರು? ಅನ್ನಂಗೆ ವಪ್ಗಂಡು ಬದುಕ್ತಾ ಅವ್ನಿ. ನನ್ನುನ್ ಯಾನಾರ ಅನ್ನಿ ನಮ್ಮಪ್ಪುನ್ ಬಗ್ಗೆ ವಂದ್ ಅಕ್ಸರ ನಿಮ್ ಹಲ್‌ಸಂದಿಂದೆ ವರ ಬಂದ್ರೂ ನಾ ಸುಮ್ಕಿರಲ್ಲ"[೪] ಎಂಬುದಾಗಿ ಗಂಡನಿಗೆ ಅವನ ಸ್ಥಿತಿಯನ್ನು ಜ್ಞಾಪಿಸುತ್ತಾಳೆ. ತಾನು ಇಲ್ಲಿ ಹೇಗೆ ಕಷ್ಟ ಅನುಭವಿಸುತ್ತಿದ್ದೇನೆಂಬ ಅರಿವನ್ನು ಗಂಡನಿಗೆ ತರುವುದರ

೧. ಎಂ.ಎಸ್.ವೇದಾರ ಸಣ್ಣಕತೆಗಳು, ಈತನಕ, ಮುಳ್ಳುಮನೆಯ ಮೇಲೆ ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೊಡೆ.... ಪು. ೫೦೮.

೨. ಅದೇ, ಪು. ೫೧೧.

೩. ಅದೇ., ಪು. ೫೧೯.

೪. ಅದೇ., ಪು. ೫೧೪.

ಮೂಲಕ ತಂದೆಯನ್ನು ಏನು ಅನ್ನಬಾರದೆಂದು ತಾಕೀತನ್ನು ಗಂಡನಿಗೆ ಮಾಡುತ್ತಾಳೆ. ಧೈರ್ಯದಿಂದ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ.

೩. ಆಧುನಿಕ ವಿವೇಚನೆಯುಳ್ಳ ಸ್ತ್ರೀ ಪಾತ್ರಗಳು:

ಎಂ.ಎಸ್.ವೇದಾರ **ಪ್ರೀತಿ ಮತ್ತು ಸಾವು** ಕಥಾಸಂಕಲನದಲ್ಲಿನ **ಅನುಕ್ತ** ಎಂಬ ಕತೆಯಲ್ಲಿ ನಾಯಕಿ ಮಂಜು ಗಂಡನ ಸ್ವೇಚ್ಛಾಚಾರದ ಕಾರಣದಿಂದ ಅಸಹ್ಯಪಟ್ಟು ಅವನನ್ನು ಬಿಟ್ಟು ಬಂದ ದಿಟ್ಟ ನಡೆಯವಳು. ಕಾಲೇಜಿನಲ್ಲಿ ಲೆಕ್ಚರರ್ ಆಗಿರುವ ಮಂಜು ಬಗ್ಗೆ ಕಾಲೇಜಿನಲ್ಲಿ ವಸಂತ ಎಂಬ ಮೇಡಂ ಆಡಿಕೊಂಡು ಮಾತನಾಡುತ್ತಾರೆ. ಆದರೆ ಮಂಜುವಿನ ಸೌಮ್ಯ ಸ್ವಭಾವ, ವಿನಯವಂತ ನಡವಳಿಕೆ ಇತಿಹಾಸ ಉಪನ್ಯಾಸಕರಾದ ರವಿಗೆ ಒಳ್ಳೆಯ ಭಾವನೆ ಇರುತ್ತದೆ. ಮನಸ್ಸಿನಲ್ಲಿಯೇ ಮಂಜುವನ್ನು ಪ್ರೀತಿಸುತ್ತಾನೆ. ಅವಳು ಕಾಲುಂಗುರ ಧರಿಸಿದ್ದನ್ನು ನೋಡಿ ಅವಳ ಬಗ್ಗೆ ಗೌರವ ವ್ಯಕ್ತಪಡಿಸುತ್ತಾನೆ. ಕಾಲೇಜಿಗೆ ಮಂಜು ಎರಡು ದಿನವಾದರೂ ಬರದಿದ್ದಾಗ ರವಿ ಅವಳನ್ನು ನೋಡಲು ಅಕೆಯ ಮನೆಗೆ ಹೋದಾಗ ಅವಳ ಒಂಟಿತನದ ಬಗ್ಗೆ ಪ್ರಶ್ನಿಸುತ್ತಾನೆ.

ಮಂಜು ಬರೆದ ಕತೆಯಲ್ಲಿ ಅನುಕ್ತ ಎಂಬ ಪದ ಕ್ಲಿಷ್ಟ ಅನ್ನಿಸುತ್ತದೆ. ಅದರ ಬಗ್ಗೆ ಚರ್ಚಿಸುತ್ತಾರೆ. ಜೊತೆಗೆ ಮಂಜು ತನ್ನ ಅನುಭವದ ಒಟ್ಟು ದ್ರವ್ಯವನ್ನೆಲ್ಲಾ 'ಸಂಬಂಧಗಳು' ಎಂಬ ಕತೆಯಲ್ಲಿ ಮೂಢಿಸಿರುವುದನ್ನು ತಿಳಿದ ರವಿ ಕತೆಯನ್ನು ಕುತೂಹಲದಿಂದ ಆಸಕ್ತಿಯಿಂದ ಓದಲಾರಂಭಿಸುತ್ತಾನೆ.

ಈ ಕತೆಯಲ್ಲಿ ದೀಪು ಮನೆಯವರ ಮಾತಿನಂತೆ ಮಹೇಂದ್ರನನ್ನು ಮದುವೆಯಾಗಿದ್ದು ಅಂತಯೇ ಅವಳ ಪ್ರೀತಿಪಾತ್ರ ಅಣ್ಣನಾದ ಶಶಿ ತಾರಾಳನ್ನು ಮದುವೆಯಾಗಿ ದುರಂತದಲ್ಲಿ ಸಾವನ್ನಪ್ಪುತ್ತಾನೆ. ಇದರಿಂದ ದೀಪುವಿನ ತಾಯಿಯ ಆಕ್ರೋಶ ಹೆಚ್ಚುತ್ತದೆ. "ಬಂದವಳು ಮಗನನ್ನು ತಿಂದುಕೊಂಡೆ"[೧] ಎಂದು ಶಾಪ ಹಾಕುತ್ತಾಳೆ. ಇದನ್ನು ತಪ್ಪಿಸುವ ಸಲುವಾಗಿ ತಾರಾಳ ಒಂಟಿತನವನ್ನು ಹೋಗಲಾಡಿಸಲು ತಾರಾಳನ್ನು ತನ್ನೊಂದಿಗೆ ಇರಲು ತಾನು ಇರುವ ಮನೆಗೆ ಕರೆತಂದು ಕಾಲೇಜಿಗೆ ಸೇರಿಸುತ್ತಾಳೆ. ಮಹೇಂದ್ರ ತಾರಾಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾನೆಂದು ತಿಳಿದ ತಕ್ಷಣ ಗಂಡನನ್ನು ದೂರವಿಡುತ್ತಾಳೆ. "ಮುಟ್ಟಬೇಡಿ ನನ್ನ"[೨] ಎಂದು ಆರ್ಭಟಿಸಿ ತನ್ನ ವಿರೋಧವನ್ನು ಸೂಚಿಸುತ್ತಾಳೆ. ದೀಪುಗೆ ಏನನ್ನೋ ಹೇಳಲು ಹೊರಟಾಗ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪ್ರೀತಿ ಮತ್ತು ಸಾವು, ಅನುಕ್ತ, ಪು. ೩೭.

೨. ಅದೇ,

"ಮಹೇಂದ್ರ ಪ್ಲೀಸ್ ನಂಗೇನೂ ಹೇಳಬೇಡಿ"[೧] ಎನ್ನುತ್ತಾಳೆ. ಹಾಗೇ ಈ ಬಗ್ಗೆ ನನಗೆ ತಿಳಿದಿದೆ ಎನ್ನುವ ಸಂಗತಿ ದಯಮಾಡಿ ತಾರಾಗೆ ತಿಳಿಸಬೇಡಿ"[೨] ಎಂದು ಕೇಳಿಕೊಳ್ಳುತ್ತಾಳೆ.



ಆಧುನಿಕ ವಿವೇಚನೆಯುಳ್ಳ ಸ್ತ್ರೀ ಪಾತ್ರಕ್ಕೆ ಉದಾಹರಣೆಯಾಗಿ

ಒಂದು ಹೆಣ್ಣಿನ ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡ ಗಂಡನೊಂದಿಗೆ ಬಾಳದಿರಲು ನಿರ್ಧರಿಸುತ್ತಾಳೆ. ಏನನ್ನೋ ಮಹೇಂದ್ರ ಹೇಳ ಹೊರಟಾಗ "ಮಹೇಂದ್ರ ಆ ಮಾತೆಲ್ಲ ಈಗ ಬೇಡ' ಅತ್ತಿಗೆಯಂತಹ ಅಮಾಯಕಳನ್ನು ನೀವು ದುರುಪಯೋಗ ಮಾಡಿಕೊಳ್ಳಬಾರದಿತ್ತು. ಹೆಣ್ಣಿನ ಅವಶ್ಯಕತೆ ಪೂರೈಸಲು ನಾವಿರಲಿಲ್ಲವಾ? ಅಥವಾ ಬೇಕಾದಷ್ಟು ವೇಶ್ಯಾಗೃಹಗಳಿರಲಿಲ್ಲವಾ? ನಾನು ಇದನ್ನು

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪ್ರೀತಿ ಮತ್ತು ಸಾವು, ಅನುಕ್ತ, ಪುಟ. ೪೦.

೨. ಅದೇ,



ಕೇವಲ ನಿಮ್ಮ ದೈಹಿಕ ತೃಷೆ ಅಂದುಕೊಳ್ಳಲ್ಲ, ತಾರಾಳ ಬಗ್ಗೆ ನಿಮಗಿರುವ ಆಕರ್ಷಣೆ ಅಂತ ಭಾವಿಸ್ತಿನಿ. ನೀವು ಸಮಯ ಸಂದರ್ಭ ದೌರ್ಬಲ್ಯ ಅದೂ ಇದೂ ಹೇಳಿ ಜಾರಿಕೊಳ್ಳಬಹುದು. ತಾರಾಳನ್ನೇ ದೂರಬಹುದು ಆದರೆ ನೀವು ಕೊಡ್ತಾ ಇರುವ ಕಾರಣವೆಲ್ಲ ತಾರಾಗೇ ಹೆಚ್ಚು ಹೊಂದಿಕೆಯಾಗುತ್ತೆ"[೧] ಎಂದಳು. "ತಾರಾ ಚಿಕ್ಕ ಹುಡುಗಿ ಯೌವನದ ಹಂತದಲ್ಲೇ ಗಂಡನನ್ನು ಕಳೆದುಕೊಂಡವಳು. ಒಂದು ಗಂಡಿನ ಅವಶ್ಯಕತೇನಾ ನೀವು ಪೂರೈಸಿದಿರಿ, ನಾನು ನಿಮ್ಮಿಬ್ಬರ ಮೇಲೂ ಕೋಪ ಮಾಡಲ್ಲ ಮಹೇಂದ್ರ ಬೆಂಕಿ ಬೆಣ್ಣೇನಾ ಒಟ್ಟಿಗೆ ಇಟ್ಟ ತಪ್ಪು ನನ್ನದು, ಶಶಿಯಣ್ಣನ ಹೆಂಡತಿಯ ಬಾಳು ಕಮರಿ ಹೋಗುಬಾರದು ಅನ್ನೋ ಆಸೆಯಿಂದ ತಾನೇ ನಾನು ಇದನ್ನೆಲ್ಲ ಮಾಡಿದ್ದು, ನೀವು ಅವಳನ್ನು ಮದುವೆಯಾಗೀ ನಿಮ್ಮಂತಹ ಒಳ್ಳೆಯ ಗಂಡ ಸಿಕ್ಕಿದರೆ ತಾರಾಳ ಬದುಕು ಸುಂದರವಾಗೇ ಇರುತ್ತೆ"[೨] ಎನ್ನುತ್ತಾಳೆ.

ಮಹೇಂದ್ರ "ಇಂಥ ಸಣ್ಣ ತಪ್ಪಿಗೆ ಇಷ್ಟು ದೊಡ್ಡ ಶಿಕ್ಷೆನಾ: ಆದರೆ ನೋವು ನಿನಗೆ ಹೆಚ್ಚು ಬೀಳೋದು" ಎಂದು ದೀಪುವಿನ ನಿರ್ಧಾರ ಬದಲಿಸಲು ಪ್ರಯತ್ನಿಸುತ್ತಾನೆ. ಆಗ ದೀಪು ಗಂಡನನ್ನು ಕುರಿತು ವ್ಯಂಗ್ಯವಾಗಿ "ತಪ್ಪಿನಲ್ಲೂ ಸಣ್ಣದು ದೊಡ್ಡದೂಂತ ಇದೆಯಾ? ನಾನು ನಿಮ್ಮನ್ನು ದೂಷಿಸುತ್ತಿಲ್ಲ ನಿಮ್ಮ ದೌರ್ಬಲ್ಯ ಇಲ್ಲಿಗೆ ಮುಕ್ತಾಯವಾಗಲಿ ತಾರಾಗಾದರೂ ಪ್ರಾಮಾಣಿಕರಾಗಿರಿ"[೩] ಎಂದು ಬುದ್ಧಿ ಹೇಳುತ್ತಾಳೆ. 'ತಾರಾನ ಮದುವೆಯಾಗಿ ನಿನ್ನನ್ನು ದೂರ ಮಾಡಿಕೋ ಅಂತಿಯಾ' ಎಂದಾಗ "ಈಗ ತಾನೇ ನಾನು ನಿಮಗೆ ಹತ್ತಿರವಾಗಿದ್ದೀನಾ"[೪] 'ಪುನಃ ಯಾಕೆ ಅದೆಲ್ಲ ರಾದ್ಧಾಂತ ಕೊಚ್ಚೆನಾ ಕೆದಕ್ತಾ ಹೋದರೆ ಅದೇ ಗಬ್ಬು, ನೀವು ಈ ಮದುವೆಗೆ ಒಪ್ಪದೆ ಹೋದರೆ ಕಾನೂನಿನ ಪ್ರಕಾರನೇ ನೀವು ಒಪ್ಪುವ ಹಾಗೇ ಮಾಡಬೇಕಾಗುತ್ತದೆ."[೫] ಎಂದು ಧೈರ್ಯವಾಗಿ ನುಡಿದು ಗಂಡನ ಜಾರತನಕ್ಕೆ ತಾನು ಅವನನ್ನು ಬಿಡುವ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಗೊಳಿಸುತ್ತಾಳೆ.

ಆರು ತಿಂಗಳಿಗೆ ವಿಚ್ಛೇದನ ಸಿಕ್ಕಿ ತಾರಾ ಮಹೇಂದ್ರರ ಸರಳ ವಿವಾಹವಾಗುತ್ತದೆ. ದೀಪು ಲೆಕ್ಚರರ್ ಆಗಿ ಬೇರೆ ಊರಿಗೆ ಹೊರಡುತ್ತಾಳೆ ಗಂಡ ಮತ್ತೊಮ್ಮೆ 'ನನ್ನ ಸಣ್ಣ ತಪ್ಪಿಗೆ ಎಂತಹ ಶಿಕ್ಷೆ ವಿಧಿಸಿಬಿಟ್ಟೆ ಎಂದಾಗ "ಅದೆಲ್ಲಾ ಮುಗಿದು

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪ್ರೀತಿ ಮತ್ತು ಸಾವು, ಅನುಕ್ತ, ಪುಟ. ೪೦.

೨. ಅದೇ.,

೩. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪ್ರೀತಿ ಮತ್ತು ಸಾಪ್ತ ಅನುಕ್ತ, ಪು. ೪೦–೪೧.

೪. ಅದೇ, ಪುಟ. ೪೧

೫. ಅದೇ.,

ಹೋದ ಕತೆ ಮಹೇಂದ್ರ ನನ್ನ ಬಾಳಿನ ಕತೆಯನ್ನೆಲ್ಲಾ ತಿಳಿದರೂ ನನ್ನ ಪ್ರೀತಿಸಿ ಕೈಹಿಡಿಯುವಂಥ ಗಂಡು ಸಿಕ್ಕೇ ಸಿಗ್ತಾನೆ ಎನ್ನುವ ಆತ್ಮವಿಶ್ವಾಸದಿಂದ ಹೊಸ ಬಾಳನ್ನು ಅರಸಿ ಹೊರಟಿರುವಾಗ ಆ ಮಾತೆಲ್ಲ ಬೇಡ, ನೀವಿಬ್ಬರೂ ಸುಖವಾಗಿದ್ದರೆ ನನಗಷ್ಟೇ ಸಾಕು"[೧] ಎಂದು ಅವರಿಂದ ಬೀಳ್ಕೊಂಡು ರೈಲು ಹತ್ತುತ್ತಾಳೆ. ಈ ಕತೆಯನ್ನು ಓದಿದ ರವಿಗೆ ಮಂಜುವನ್ನು ಕುರಿತು ಒಳ್ಳೆಯ ಭಾವನೆ ಮೂಡುತ್ತದೆ. ತಾನೇ ಅವಳನ್ನು ವರಿಸಲು ಮುಂದಾಗುತ್ತಾನೆ. ಇಲ್ಲಿ ಮಂಜು ಇಚ್ಛಿಸಿದಂತೆ ಅರ್ಥ ಮಾಡಿಕೊಳ್ಳುವ ವ್ಯಕ್ತಿಯಾಗಿ ರವಿ ಕಾಣಿಸಿಕೊಂಡು ಮಂಜುವಿನ ಬಾಳು ಸುಗಮವಾಗಿ ಸಾಗಲು ಕಾರಣನಾಗುತ್ತಾನೆ.

ಇಲ್ಲಿ ಹೆಣ್ಣು ಬರಿಯ ಗಂಡಿನ ಗುಲಾಮಳಲ್ಲ. ಅವನು ಮಾಡಿದ್ದನೆಲ್ಲ ಸಹಿಸಿಕೊಂಡು ನಡೆಯುವವಳಲ್ಲ. ಅಬಲೆಯಲ್ಲ ಅವಳಿಗೂ ಸಹ ತನ್ನದೇ ಆದ ವ್ಯಕ್ತಿತ್ವವಿದೆ ಎಂಬುದನ್ನು ಈ ಕತೆ ಎತ್ತಿ ತೋರಿಸುತ್ತದೆ. ಪ್ರಬುದ್ಧ ಸ್ವಾಭಿಮಾನಿ ಹೆಣ್ಣಾಗಿ ಇಲ್ಲಿನ ಮಂಜು ಚಿತ್ರಿತಗೊಂಡಿದ್ದಾಳೆ.

ಪ್ರೀತಿ ಮತ್ತು ಸಾವು ಕತೆಯಲ್ಲಿನ ಸ್ಫೂರ್ತಿ ರಾಮಕೃಷ್ಣ ತನ್ನನ್ನು ಪ್ರೀತಿಸುತ್ತಿದ್ದಾನೆಂದು ತಿಳಿದರೂ ಸಹ ತಾನು ಪ್ರೀತಿಸುತ್ತಿದ್ದೇನೆ ಎಂಬ ಮಾತನ್ನು ಹೇಳುವುದಿಲ್ಲ. ಪಿಯುಸಿ ಫೇಲಾದ ರಾಮಕೃಷ್ಣನನ್ನು ಪಿಯುಸಿ ಪಾಸಾಗಾಕೆ ಆಗದೆ ಪ್ರೀತಿ ಮಾಡ್ತಾನಂತೆ ಎಂದು ಹಾಸ್ಯ ಮಾಡಿದ್ದಳು. ಅದೇ ಹಟದಿಂದ ಪಿಯುಸಿ ಪಾಸಾಗಿ ಎಂ.ಬಿ.ಬಿ.ಎಸ್. ಮುಗಿಸಿ ತಾನು ಅವಳನ್ನು ನೆನೆದು ರಾಮಕೃಷ್ಣ ಅವಳು ತನ್ನನ್ನ ರೇಗಿಸಿದ್ದು ತಾನು ಅವಳನ್ನು ಗೋಳು ಹೊಯ್ದುಕೊಂಡದ್ದು ನೆನಪಾಗಿ ಮನೆಗೆ ಹೋಗುವಾಗ ಈಗಲಾದರೂ ಸ್ಫೂರ್ತಿಮನೆಯವರ ಜೊತೆ ಮಾತಾಡಿ ಮದುವೆ ಮಾಡಿಕೊಳ್ಳಬೇಕೆಂದುಕೊಂಡಾಗ ಅಲ್ಲಿ ಅವಳಿಗೆ ಕ್ಯಾನ್ಸರ್ ಎಂದು ತಿಳಿದು ಆಸ್ಪತ್ರೆಗೆ ಅವಳನ್ನು ನೋಡಲು ಹೋದಾಗ ಅವಳು ತನ್ನಲ್ಲಿಯೇ ಇದ್ದ ಪ್ರೀತಿಯನ್ನು ವ್ಯಕ್ತಪಡಿಸಿದಾಗ ಇಬ್ಬರು ಅಳುತ್ತಾರೆ. ಇಲ್ಲಿ ಪ್ರೀತಿ ಮತ್ತು ಸಾವು ಒಂದು ದುರಂತ ಕತೆಯಾಗಿ ಮೂಡಿಬಂದಿದೆ.

ಇಲ್ಲಿ ಆಸ್ಪತ್ರೆಗೆ ಬಂದ ಕೃಷ್ಣನನ್ನು ಸ್ಫೂರ್ತಿ "ಬಾಬಾ ರಾಮಕೃಷ್ಣ ಅಲ್ಲವಾ? ಓದೆಲ್ಲಾ ಮುಗೀತಾ? ರಿಸಲ್ಟ್ ಯಾವಾಗ?"[೨] ಎಂದು ಸ್ವಾಗತಿಸುತ್ತಾಳೆ. ಅದಕ್ಕೆ ಪ್ರತಿಯಾಗಿ "ಹುಷಾರಾಗಿದ್ದೀಯಾ ಸ್ಫೂರ್ತಿ" ಎಂದು ರಾಮಕೃಷ್ಣ ವಿಚಾರಿಸುತ್ತಾನೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪ್ರೀತಿ ಮತ್ತು ಸಾವು, ಅನುಕ್ತ, ಪುಟ. ೪೧.

೨. ಎಂ.ಎಸ್.ವೇದಾರ ಪ್ರೀತಿ ಮತ್ತು ಸಾವು ಕಥಾಸಂಕಲನದ ಪ್ರೀತಿ ಮತ್ತು ಸಾವು, ಪುಟ. ೬೮.

ಸಂಜೆ ಅವಳಿಗಾಗಿ ಹಣ್ಣುಗಳನ್ನು ಹಿಡಿದುಬಂದಾಗ "ಪುನಃ ಯಾಕೆ ಬರೋಕೆ ಹೋದೆ" ಎನ್ನುತ್ತಾಳೆ. ರಾಮಕೃಷ್ಣನೇ ಅವಳನ್ನು ಸುತ್ತಾಡಿಸಲು ಬಂದಾಗ "ಯಾಕ್ ರಾಮಕೃಷ್ಣ ಏನೂ ಮಾತಾಡಲ್ಲ"[೧] ಎನ್ನುತ್ತಾಳೆ. ತಾನೆ ಮಾತು ಮುಂದುವರೆಸಿ "ನನಗೆ ಬದುಕು ಇರೋದೆ ಬಹಳ ಸೀಮಿತ ಅಂತ ತಿಳಿದ ಮೇಲೆ ನನಗಂತೂ ಎಷ್ಟು ಮಾತನಾಡಿದರೂ ಸಾಲದಂತಾಗಿದೆ. ಮೊದಲ್ಲೆಲ್ಲ ಮೌನಗೌರಿಯಾಗಿದ್ದೆ. ಏನೋ ನೂರಾರು ವರ್ಷ ಬಾಳ್ತೀನಿ ಸ್ಟಾಕ್ ಇರಲಿ ಅನ್ನೋ ಹಾಗೆ. ಆದರೆ ಈಗ?"[೨] ಎಂದಾಗ ರಾಮಕೃಷ್ಣ "ಹಾಗೆಲ್ಲ ಮಾತನಾಡಬಾರದು ಸ್ಫೂರ್ತಿ" ಎಂದು ದುಃಖದಿಂದ ನುಡಿಯುತ್ತಾನೆ.

ಅದಕ್ಕೆ ಪ್ರತಿಯಾಗಿ ಸ್ಫೂರ್ತಿ 'ನೀನೂ ನನ್ನ ಬಾಯಿ ಮುಚ್ಚಿಸ್ತೀಯೊ? ನಂಗಂತೂ ಈಗ ಯಾರ ಭಯ, ಆತಂಕ, ಅಂಜಿಕೆಗಳೂ ಇಲ್ಲ. ಈ ಧೈರ್ಯನೇ ನನಗೆ ಮೊದಲಿನಿಂದಲೂ ಇದ್ದಿದ್ದರೆ ನನ್ನ ಬಾಳಿನ ಪರೀನೇ ಬೇರೆಯಾಗಿ ಕ್ಯಾನ್ಸರ್ ಕೂಡ ನನಗೆ ಹೆದರಿ ನನ್ನ ಹತ್ತಿರ ಸುಳೀತಾ ಇರಲಿಲ್ಲವೇನೋ? ನಿನಗೆ ಗೊತ್ತಾ? ಸಾವಿನ ನಿರೀಕ್ಷೆಯಲ್ಲಿರೋ ನನಗೆ ಈಗ ಖಂಡಿತ ಸಾವಿನ ಭಯಾನೂ ಇಲ್ಲ. ಪರಿಮಿತವಾದರೂ ಈ ಜೀವನದಲ್ಲಿ ಯಾರಿಗೂ ಇಲ್ಲದಂತಹ ಸ್ವಾತಂತ್ರ್ಯ ಸಾವಿನ ನೆರಳಲ್ಲಿ ನನಗೆ ಸಿಕ್ಕಿದೆ. ಸಾವು ಆಕಸ್ಮಿಕವಾಗಿ ಬರೋಕು, ನಿಯೋಜಿತವಾಗಿ ಬರೋಕೂ ಎಷ್ಟು ಅಂತರ ಇದೆ. ಸಾವು ಒಂದು ಅನನ್ಯ ಅನುಭವ ಅನ್ನೋದು ನಿಜ. ಅದನ್ನ ಅನುಭವಿಸಿ ಅದರಿಂದ ದೂರ ನಿಂತು ಅನುಭವದ ನೆಲೆಯಲ್ಲಿ ವಿಶ್ಲೇಷಿಸೋಕೆ ಯಾರಿಗೂ ಆಗಲ್ಲ. ಆದರೆ ನನಗೆ ಅದು ಸಾಧ್ಯ ಆಗ್ತಿದೆ. ನೀನು ಬರ್ತೀಯಾ ಎನ್ನೋ ನಿರೀಕ್ಷಣೆಯಲ್ಲಿ ಇದ್ದೆ. ನೀನು ಬಂದಾಗ ನನ್ನ ಜನ್ಮ ಸಾರ್ಥಕವಾಯ್ತು ಅನ್ನುವಷ್ಟು ಸುಖವಾಯಿತು. ಸಾವಿನ ನಿರೀಕ್ಷಣೆಯಲ್ಲಿ ಕೂಡ ನನಗೆ ಇಂತಹುದೇ ಖುಷಿ ಸಿಗ್ತಾ ಇದೆ. ಪ್ರಾಯಶಃ ಬದುಕುವಾಗ ಎಲ್ಲರೂ ಮರೆಯುವ ವಿಷಯಾನಾ ನಾನು ನೆನಪಿಸಿಕೊಳ್ಳುತ್ತಲೇ ಬದುಕ್ತಾ ಇದ್ದೀನಿ ಕೃಷ್ಣಾ" ಎಂದು ಹೇಳುತ್ತಾಳೆ.

"ರಾಮಕೃಷ್ಣ, ನಾನು ಸತ್ತರೆ ನೀನೂ ಅಳ್ತೀಯಾ" ಎಂದು ಕೇಳುತ್ತಾಳೆ. ಅದಕ್ಕೆ ಪ್ರತಿಯಾಗಿ ರಾಮಕೃಷ್ಣ "ಬಹುಶಃ ನಿನ್ನ ಸಾವಿನೊಡನೆ ನನ್ನ ನಿಜವಾದ ಬದುಕೂ ಅಂತ್ಯವಾಗುತ್ತೆ ಸ್ಫೂರ್ತಿ" ಎಂದು ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಾಗ ಅದಕ್ಕೆ ಸ್ಫೂರ್ತಿಯು "ನೀನು ಬರ್ತೀಯಾ ಅನ್ನೋ ನಿರೀಕ್ಷೇಲೇ ನಾನು ಕಾದಿದ್ದು ಮದುವೆ

---

೧. ಎಂ.ಎಸ್.ವೇದಾರ ಪ್ರೀತಿ ಮತ್ತು ಸಾವು ಕಥಾಸಂಕಲನದ ಪ್ರೀತಿ ಮತ್ತು ಸಾವು, ಪುಟ. ೬೮.

೨. ಅದೇ ಪುಟ. ೬೯.

ಮನೆ ಬಯಸಿದವಳಿಗೆ ಮಣ್ಣಿನ ಮನೆ ಸಿಕ್ಕಿಬಿಡ್ತು" ಎಂದು ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ.

"ನೀನಿಲ್ಲದ ಬದುಕನ್ನ ನಾನು ಹೇಗೆ ಊಹಿಸಿಕೊಳ್ಳಲಿ ಸ್ಫೂರ್ತಿ. ನನ್ನ ಪ್ರೀತಿ, ಬಾಳು ಎಲ್ಲ ಚಿಗುರೋಕೆ ಮುಂಚೇನೇ ಸುರುಟಿಹೋಯ್ತು" ಎಂದು ಅಳುತ್ತಾನೆ. ಕೃಷ್ಣನಿಂದ ನನ್ನನ್ನು ಪೂರ್ತಿ ಎಂದು ಕರೆ ಎಂದು ಹೇಳಿ ಕರೆಸಿಕೊಂಡು ತನ್ನ ಆಸೆಯನ್ನು ಈಡೇರಿಸಿಕೊಳ್ಳುತ್ತಾಳೆ.

ರಾಮಕೃಷ್ಣ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದರೂ ತಾನು ತನ್ನ ಪ್ರೀತಿಯನ್ನು ಹೇಳುವ ಧೈರ್ಯ ಮಾಡುವುದಿಲ್ಲ. ಅಂದರೆ ಇಲ್ಲಿ ಹೆಣ್ಣಿನ ಸಹಜ ಸ್ವಭಾವಗಳನ್ನು ಕಾಣಬಹುದು. ಹೆಣ್ಣು ತಾನು ಯಾವುದೇ ವಿಚಾರವನ್ನು ಹೇಳುವಂತಹ ಸ್ವತಂತ್ರವನ್ನು ಈ ಸಮಾಜ ನೀಡಿಲ್ಲ. ಆದರೆ ಇಲ್ಲಿನ ವಿಧಿಯಾಟ ಹೇಗಿರುತ್ತದೆ ಎಂದರೆ ಅಂತೆಯೇ ಪ್ರೀತಿಯ ಮಧ್ಯೆ ಯಾವ ಯಾವ ರೀತಿಯ ಅಡೆತಡೆಗಳು ಬರುತ್ತವೆ ಎಂಬುದನ್ನು ಸ್ಫೂರ್ತಿಯ ಕ್ಯಾನ್ಸರ್‌ನಿಂದ ನರಳುತ್ತಿದ್ದ ಆರು ತಿಂಗಳಲ್ಲಿ ಸಾಯುವ ಸ್ಥಿತಿಯೊಂದಿಗೆ ತನ್ನ ಗೆಳೆಯನನ್ನು ನೋಡಿ ತನ್ನ ಪ್ರೀತಿಯನ್ನು ಹಂಚಿಕೊಳ್ಳುವ ಚಿತ್ರಣವನ್ನು ಕತೆಗಾರ್ತಿ ಮನೋಜ್ಞವಾಗಿ ಓದುಗರ ಕಣ್ಣಲ್ಲಿ ಹನಿಗೂಡುವಂತೆ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ವೇದಾರವರ 'ಪ್ರೀತಿ ಮತ್ತು ಸಾವು' ಕತೆಯಲ್ಲಿನ ಸ್ಫೂರ್ತಿ ಅಥವಾ ಪೂರ್ತಿ ಎಂಬ ತುಂಟಾಟದ ಹುಡುಗಿ ಅನಿರೀಕ್ಷಿತ ಖಾಯಿಲೆಗೆ ಒಳಗಾಗಿ ಸ್ತ್ರೀಸಹಜ ನಾಚಿಕೆ ಚಿಂತನೆಯನ್ನು ಸಾವಿನ ನೆರಳಿನಿಂದಾಗಿ ಬಿಡುತ್ತಾಳೆ. ಹೊಸ ಬಾಳಿನ ಹೊಸ್ತಿಲಿನಲ್ಲಿ ನಿಲ್ಲಬೇಕಾದವಳು ಸಾವಿನ ಕದ ತಟ್ಟುವ ಸಂದರ್ಭದಲ್ಲಿ ಧೈರ್ಯವಂತಳಾಗಿ ಬಂದ ದುರಂತವನ್ನು ಸ್ವೀಕರಿಸುವ ಹೆಣ್ಣಾಗಿ ಕಾಣಬರುತ್ತಾಳೆ.

ಇವರ **ಪಾರೋತಿಯೂ ಪ್ಯಾದೆ ಪಾಪಣ್ಣನೂ** ಕತೆಯಲ್ಲಿ ಪಾರೋತಿ ಪುಟ್ಟಾಜಮ್ಮನ ಮಗಳು. ಇವಳು ಅಪ್ಪ ಸತ್ತ ಮೇಲೆ ಹುಟ್ಟಿದವಳೆಂದು ಊರಿನಲ್ಲಿ ಹೇಳಿಕೆಯಿರುತ್ತದೆ. ಇವಳು ಕೂಲಿನಾಲಿ ಮಾಡಿಕೊಂಡು ಬೆಳೆದವಳು. ತನ್ನ ತಾಯಿ ಗುರಪ್ಪನೊಂದಿಗೆ ಕೂಡಾವಳಿ ಮಾಡಿಕೊಂಡಿದ್ದು ಇಷ್ಟವಾಗದೇ ತಾಯಿಯಿಂದ ದೂರ ಉಳಿಯಲು ಬಯಸುತ್ತಾಳೆ.

ಇಲ್ಲಿ ಪಾರೋತಿ ಧೈರ್ಯದಿಂದ ಕೂಡಿದ ದಿಟ್ಟ ಹೆಣ್ಣಾಗಿ ಕಂಡುಬರುತ್ತಾಳೆ. ದೊಡ್ಡವಳಾದರೂ ಆರೈಕೆ ಕಾಣದೆ ಹೊಲದಲ್ಲಿ ದುಡಿಯುತ್ತಾಳೆ. ನರಸೇಗೌಡ ತನ್ನನ್ನು ಕೆಣಕಲು ಬಂದಾಗ ಹದ್ದಿನಂತೆ ಅವನ ಮೇಲೆ ಆರ್ಭಟ ವ್ಯಕ್ತಪಡಿಸುತ್ತಾಳೆ. ಜೊತೆಗೆ ಸಿಟಿಯನ್ನು ಸುತ್ತಿ ಬಂದಿದ್ದ ಪ್ಯಾದೆ ಪಾಪಣ್ಣ ಅವಳನ್ನು ಇಷ್ಟಪಟ್ಟು ಅವಳು ಕೆರೆಗೆ

ಹಾರಿದಾಗ ಅವಳನ್ನು ಕಾಪಾಡಿ ಅವಳೊಂದಿಗೆ ಸಲಿಗೆಯಿಂದ ನಡೆದಾಗ ಅವನಿಗೆ ಬೈದು ಬರುವ ದಿಟ್ಟ ಹೆಣ್ಣು.

ಆದರೆ ಮಾರಣ್ಣನ ಮೋಸಕ್ಕೆ ಬಲಿಯಾಗಿ ಅವಳು ಗರ್ಭಿಣಿಯಾಗಿರುತ್ತಾಳೆ. ಆಗ ಊರಲ್ಲಿ ಪಂಚಾಯ್ತಿ ಸೇರಿ ಯಾರು ಇದಕ್ಕೆಲ್ಲ ಕಾರಣ ಎಂದು ಕೇಳಿದಾಗ ಅವಳು ಬಹಳ ಸಮಯದ ನಂತರ ಪ್ಯಾದೆ ಪಾಪಣ್ಣನ ಹೆಸರು ಹೇಳುತ್ತಾಳೆ. ಆದರೆ ಪ್ಯಾದೆ ಪಾಪಣ್ಣ ಅದನ್ನು ಒಪ್ಪುವುದಿಲ್ಲ. ಆದರೆ ಎಲ್ಲರೂ ಅವನಿಗೆ ಗದರಿದಾಗ ಅವನು ನಿರಾಕರಿಸುವುದಿಲ್ಲ. ಆತ ಮೆಲ್ಲನೆ ಕರಗಿದಾಗ ಇವಳಿಗೆ ಸಂತೋಷವಾಗುತ್ತದೆ.

ಇಲ್ಲಿ ವೇದಾರವರು ಗ್ರಾಮೀಣ ಪ್ರದೇಶದ ಜೀವನ ಅಲ್ಲಿನ ಕಾನೂನು ಪದ್ಧತಿಗಳು, ಸಮಸ್ಯೆಗಳನ್ನು ಹಳ್ಳಿಗರು ಹೇಗೆ ಬಗೆಹರಿಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಸುವುದರ ಜೊತೆಗೆ ಹಳ್ಳಿಗಳಲ್ಲಿ ಗೌಡರು ಎನ್ನಿಸಿಕೊಂಡವರು ನ್ಯಾಯ ಹೇಳುವಂತವರು ಹೇಗಿರುತ್ತಾರೆಂಬುದನ್ನು ತೋರಿಸಲು ಹೊರಟಿದ್ದಾರೆ. ಇಲ್ಲಿ ಪಾರೋತಿ ಬಡಕುಟುಂಬದ ಹುಡುಗಿ ಅವಳು ತಾನು ತನ್ನ ಅವ್ವನಂತೆ ಕೆಟ್ಟವಳು ಎನ್ನಿಸಿಕೊಳ್ಳಬಾರದೆಂಬ ಕಾರಣದಿಂದ ಒಳ್ಳೆಯ ರೀತಿಯಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡಿಕೊಂಡು ತಾಯಿಯೊಂದಿಗೆ ಇರದೆ ತಾವೇ ಬೇರೆ ಕೆಲಸ ಮಾಡುತ್ತಿರುತ್ತಾಳೆ. ನರಸೇಗೌಡ, ಪ್ಯಾದೆ ಪಾಪಣ್ಣ ಮುಂತಾದ ಕಾಮದ ದೃಷ್ಟಿಯಿಂದ ತಪ್ಪಿಸಿಕೊಂಡು ಧೀರಳಂತೆ ಮೆರೆದಿದ್ದಳು. ಹೆಣ್ಣೆಂದರೆ ಬರಿ ಭೋಗದ ವಸ್ತುವಲ್ಲ ಎಂದು ಬುದ್ಧಿ ಹೇಳಿ ಸರಿಯಾಗಿ ಪಾಠ ಕಲಿಸಿದ್ದಳು. ಇಲ್ಲಿ ಪಾರೋತಿಗೆ ಹೆಣ್ಣಿನ ಸಹಜ ಭಾವನೆಗಳಿದ್ದವು ಎಂಬುದನ್ನು "ದ್ಯಾವ್ರೆ, ನನ್ನೂ ಬ್ಯಾಗ ದೊಡ್ಡೋಳ್ ಮಾಡಪ್ಪಾ"[೧] ಎಂಬ ಮಾತುಗಳಲ್ಲಿ ಕಾಣಬಹುದು.

ಪಾರೋತಿ ಅತಿಚಿಕ್ಕ ಪ್ರಾಯಕ್ಕೆ ಅತಿ ಎತ್ತರಕ್ಕೆ ಬೆಳೆದು, ಹಿರಿಯವಳಾದ ನಂತರ ಗಂಡಸರು "ಭೀಮನ ಪಾಲ್ಲು ಕೊಟ್ಟರಂತೆ, ಮಾಡ್ತೀಯಾ ಪಾರೋತಿ" ಎಂದು ಚುಡಾಯಿಸಿದಾಗ "ಅದಕ್ಕೇನಂತೆ ಮಾಡುವ ಕಣನಾ. ನೀ ಬಂದೀಯಾ ಸಿಕಂಡಿ ಪಾಲ್ಲು ಕೊಟ್ಟಾರಂತೆ"[೨] ಎಂದು ತಿರುಗಿಸಿ ಬಿಸಿಮುಟ್ಟಿಸುತ್ತಿದ್ದಳು.

ತಾಯಿ ಗುರಪ್ಪಾನೊಟ್ಟಿಗೆ ಕೂಡಾವಳಿ ಮಾಡ್ಕೊಂಡು ತಾಯಿ ಬಸಿರಾದಾಗ ತಾಯಿಯ ಬಾಣಂತನ ಮಾಡಲು ಕರೆಯುತ್ತಾನೆ. ಪಕ್ಕದ್ಮನೆ ಚಿಂಕ್ರಿ ಬಂದು ಪಾರೋತಿ ಮೈನೆರೆದು ಮೂರು ದಿನ ಆಗಿದೆ. ಹಾಗಾಗಿ ನಿನ್ನ ತಾಯಿ ಕರ್ಕೊಂಡ್ ಬಂದು ತಾಯಿ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾರೋತಿಯೂ ಪ್ಯಾದೆ ಪಾಪಣ್ಣನೂ, ಪು. ೯೧.
೨. ಅದೇ, ಪು. ೬೧.

ಮಗಳಿಬ್ಬರಿಗೆ ಆರೈಕೆ ಮಾಡಿಸು ಎಂದಾಗ ಗುರಪ್ಪ ಸಿಟ್ಟು ವ್ಯಕ್ತಪಡಿಸುತ್ತಾನೆ. ಪುಟ್ಟಿಗೂ ಆರೈಕೆ ಮಾಡೋದೆ ಕಷ್ಟ ಆಗಿರುವಾಗ ಇವಳ ಆರೈಕೆ ನಾನೇಕೆ ಮಾಡಿಸಬೇಕು. ಇವಳಿಗೂ ನನಗೂ ಏನು ಸಂಬಂಧ ಎಂದು ಸಿಟ್ಟು ಹರಿಯಬಿಡುತ್ತಾನೆ. ಆಗ ಪಾರೋತಿ "ಹ್ವಾಗಾ ಗಂಡ್ಸೆ ನಂಗೂ ನಿಂಗೂ ಯಾನಾ ಸಂಬಂಧಂತ ನನ್ನ ಕರಿಯಾಕ್ ಬಂದಿದ್ದಯಿ? ನೀ ಜಾಗ ಕೊಡಾದು ಬ್ಯಾಡಾ ನಾ ಅತ್ತಿತ್ತ ಸರಿ ಅನ್ನಾದು ಬ್ಯಾಡಾ ಸಾಕಾಕ್ ತಾಕತ್ತು ಇಲ್ಲದ ಮ್ಯಾಗೆ ಪುಟ್ಟಿನ್ಯಾಕೆ ಬಸ್ರುಮಾಡಿ ಕಟ್ಟಿಕೊಂಡೆ ಯೊಳು. ನಂಗೆ ನೀನೂ ಹಿಟ್ ಕಾಣಿಸಬ್ಯಾಡ ಅವ್ವ ಅವ್ವಲ್ಲಾ ಆ ನಿನ್ನ ರೆಂಭೆ ಆ ಪುಟ್ಟೀನೂ ನಂಗೆ ಹಿಟ್ ಕಾಣಿಸದ್ ಬ್ಯಾಡಾ ವುಟ್ಟಿಸಿದ್ ದ್ಯಾವ್ರು ವುಲ್ಲು ಮೇಯ್ಸದೆ ಇದ್ದಾನಾ ಕೂಲಿ ಕಂಬಳ ಮಾಡ್ಕಂಡು ನನ್ನ ವಟ್ಟೆ ನಾ ವರ್ಕಂತೀನಿ ತಗಾ"[೧] ಎಂದು ಆಕ್ರೋಶ ವ್ಯಕ್ತಪಡಿಸಿ ಗುರಪ್ಪನೊಂದಿಗೆ ಹೋಗಲು ನಿರಾಕರಿಸುತ್ತಾಳೆ.

ತನ್ನ ಮಗಳು ಬಾಣಂತನಕ್ಕೆ ಬರಲಿಲ್ಲ ಎಂಬ ಸಿಟ್ಟಿನಿಂದ ತಾಯಿ ಪುಟ್ಟಿ ಎರಡು ತಿಂಗಳ ನಂತರ "ಎಲ್ಲಿಗ್ ಹೋಯ್ತಾ ಇದ್ದಿಯಾ ನೀನು" ಎಂದು ಕೆಣಕಿದಳು.[೨]

ಅದಕ್ಕೆ ಪಾರೋತಿ 'ನೀ ಮದೆ ಮಾಡಿದ್ದಿಯಲ್ಲ ಪಟ್ಟದ ರಾಜಕುಮಾರಂಗೆ, ಅವನ ಅರ್ಮನಿಗೆ ಹೊಂಟಿವ್ನಿ"[೩] ಎಂದು ಪ್ರತಿಭಟನಾತ್ಮಕ ಉತ್ತರವನ್ನು ಕೊಡುತ್ತಾಳೆ. ಸಂತೆಯಿಂದ ತಂದ ಸೋಪು ಜಾರಿ ನೀರಲ್ಲಿ ಬಿದ್ದಾಗ ಅದನ್ನು ಹಿಡಿಯಲು ಹೋಗಿ ಮುಳುಗಿದ ಪಾರೋತಿಯನ್ನು ಪ್ಯಾದೆ ಪಾಪಣ್ಣ ರಕ್ಷಿಸಿ ಅವಳಿಗೆ ಮುತ್ತಿಟ್ಟಾಗ "ಕಚ್ಚೆ ಹರುಕ ನನ್ಮಗನೆ ನನ್ನ ಮುಟ್ಟೀಯಾ, ನಾಯೇನ್ ನೀನ್ ಮದುವೆಯಾದ ಹೆಂಡ್ರಾ ಕೆರಾ ತಗಂಡು ಹಾಕ್ತೀನಿ ನೋಡು"[೪] ಎಂದು ಅಬ್ಬರಿಸುತ್ತಾಳೆ. ಮುಂದೆ ಪ್ಯಾದೆ ಪಾಪಣ್ಣ ಅವಳನ್ನು ನಾನಾ ಬಗೆಯಲ್ಲಿ ಚುಡಾಯಿಸಿ ಆಡಿಕೊಂಡು ನಕ್ಕಾಗ ಮಾರಪ್ಪನೊಂದಿಗೆ ಸೌಖ್ಯ ಬೆಳೆಸಿ ಬಸಿರಾದ ಪಾರೋತಿ ಪಂಚಾಯತಿ ಕಟ್ಟೆಯಲ್ಲಿ ತನ್ನ ಬಸಿರಿಗೆ 'ಪ್ಯಾದೆ ಪಾಪಣ್ಣ' ಕಾರಣ ಎಂದು ಸುಳ್ಳುಹೇಳಿ ಬಿಡುತ್ತಾಳೆ. ಮಾರಣ್ಣನಿಗೆ ಈಗಾಗಲೇ ಮೂರು ಹೆಂಡಿರಿದ್ದು ತಾನು ಆದರೆ ನಾಲ್ಕನೇಯವಳಾಗಿ ಬಿಡುವ ಅಪಾಯ. ಕೂಡಿಕೆ ಮಾಡಿಕೊಳ್ಳಬಹುದಾದ ಸಾಧ್ಯತೆ ಅರಿತು ಪಾರೋತಿ ತಲೆ ಓಡಿಸಿ, ಸಿಟಿಯವನಾದ ಪ್ಯಾದೆ ಪಾಪಣ್ಣನ ಮದುವೆಯಾಗಲು ಯೋಚನೆ ರೂಪಿಸಿಬಿಡುತ್ತಾಳೆ. ಪಾಪಣ್ಣನ ಕುಚೇಷ್ಟೆಯಿಂದ "ತಬ್ಕೊಂಡು ಮುತ್ತು ಕೊಟ್ಟ ಮಾತ್ರಕ್ಕೆ ಹೆಂಡಿರೇ ಆಗಬೇಕೇನೆ.

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾರೋತಿಯೂ ಪ್ಯಾದೆ ಪಾಪಣ್ಣನೂ, ಪು. ೯೫.
೨. ಅದೇ, ಪುಟ. ೧೦೩
೩. ಅದೇ,
೪. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾರೋತಿಯೂ ಪ್ಯಾದೆ ಪಾಪಣ್ಣನೂ, ಪು. ೯೫.

ಹೆಂಡತೀರಿಗೆ ಮಾತ್ರ ಮುದ್ದಿಸಬೇಕೇನೆ" ಎಂಬ ಮಾತಿಗೆ ತಕ್ಕ ಪಾಠ ಕಲಿಸುವ ನಿರ್ಭಿಡೆಯ ಹೆಣ್ಣಾಗಿ ಪಾರೋತಿ ಇಲ್ಲಿ ಕಾಣಿಸುತ್ತಾಳೆ.

ಒಂಟಿ ಮೋಡಗಳು ಕತೆಯಲ್ಲಿ ಬರುವಂತಹ ನಾಗೇಂದ್ರಪ್ಪ ದಂಪತಿಗಳಿಗೆ ೨ ಗಂಡು ಮಕ್ಕಳಿದ್ದರು. ನಾಗೇಂದ್ರಪ್ಪನವರ ಹೆಂಡತಿ ಬೇರೆ ಗಂಡಸಾದ ಒಬ್ಬ ಟೈಲರ್‌ನಿಗೆ ಮನಸೋತು ಓಡಿಹೋಗುತ್ತಾಳೆ. ಇದೇ ಕೊರಗಿನಲ್ಲಿದ್ದ ನಾಗೇಂದ್ರಪ್ಪನವರಿಗೆ ಮಕ್ಕಳು ಸಮಾಧಾನ ಹೇಳುತ್ತಿರುತ್ತಾರೆ. ಅವಳನ್ನು ಕೆಲವು ವರ್ಷಗಳ ನಂತರ ಟೈಲರ್, ಆತನ ಹೆಂಡತಿ, ಮಕ್ಕಳೆಲ್ಲಾ ಬೈದು ಅವಳನ್ನ ಇವರ ಮನೆಯ ಮುಂದೆ ಆಟೋದಿಂದ ಇಳಿಸಿ ಹೋಗುತ್ತಾರೆ. ನಂತರ ನಾಗೇಂದ್ರಪ್ಪನ ಸಲಹೆಯಂತೆ ಸಾಮಾನುಗಳನ್ನು ಹಾಕಲು ಇದ್ದ ರೂಂನಲ್ಲಿ ಅವರಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಅನಾರೋಗ್ಯದಿಂದ ಬಳಲುತ್ತಿದ್ದ ನಾಗೇಂದ್ರಪ್ಪನಿಗೆ ಅವಳ ಮುಖ ನೋಡಲು ಇಷ್ಟವಿರುವುದಿಲ್ಲ. ಅವಳ ಮೋಸ, ವಂಚನೆ ನೆನಪಿಗೆ ಬರುವ ಕಾರಣದಿಂದ ಅವರು ನೋಡುವುದಿಲ್ಲ. ಮಕ್ಕಳಾದ ವಿವೇಕ್, ಗೌರವ ಮಾತ್ರ ಅಮ್ಮನೊಂದಿಗೆ ಮಾತನಾಡುತ್ತಾರೆ. ರೂಂನಲ್ಲಿ ನಾಗೇಂದ್ರಪ್ಪನ ಹೆಂಡತಿಗೆ ಕೆಲಸದವಳು "ವಸಿ ಆ ಕಡೆ ಜರೀಕಳ್ರವ್ವಾ" ಎಂದಾಗ "ಮನೆಯೊಳಗೆ ಯಾರೂ ಇಲ್ಲವಾ"[೧] ಎಂದು ಹೇಳುತ್ತಾಳೆ.

ಇಲ್ಲಿ ತಳಮಳಗೊಂಡ ಹೆಣ್ಣಿನ ಚಿತ್ರಣ ಮತ್ತು ಚಂಚಲತೆಯನ್ನು ತೋರಿಸುವ ಮೂಲಕ ಆಕರ್ಷಣೆಗಾಗಿ ಒಳಗಾಗಿ ಬೇರೊಬ್ಬನೊಂದಿಗೆ ಓಡಿಹೋಗಿ ನಾಗೇಂದ್ರಪ್ಪನವರ ಹೆಂಡತಿಯ ಸ್ಥಿತಿಯನ್ನು ಸಾರಲು ಹೊರಟಿದ್ದಾರೆ.

ಟೈಲರ್‌ನೊಟ್ಟಿಗೆ ಓಡಿಹೋಗಿದ್ದ ನಾಗೇಂದ್ರಪ್ಪನ ಪತ್ನಿಗೆ ಸುಂದರವಾದ ಪತಿ, ಮುದ್ದಾದ ಮಕ್ಕಳು. ಅಂದು ಮಹತ್ವದ್ದಾಗಿ ಕಾಣಿಸುವುದಿಲ್ಲ. ಈಗ ಟೈಲರ್‌ನ ನಿರಾಕರಣೆಯಿಂದ ಮತ್ತೆ ಹಳೆಯ ಗಂಡನ ಮನೆಗೆ ಬಂದವಳಿಗೆ ತನ್ನ ಮಕ್ಕಳು ಸೊಸೆಯಂದಿರ ಪ್ರೀತಿ ಆರೈಕೆಯಿಂದ ಪಶ್ಚಾತ್ತಾಪಪಡುತ್ತಾಳೆ. ತಾನು ಆರಿಸಿಕೊಂಡ ವ್ಯಕ್ತಿ, ಬದುಕು ಕ್ಷುಲ್ಲಕವಾದದ್ದು ಎಂದು ಹಾಳಾದ ಮೇಲೆ ಅರಿವಾಗುತ್ತದೆ. ನಾಗೇಂದ್ರಪ್ಪನವರು ತನ್ನನ್ನು ನೋಡಲು ನಿರಾಕರಿಸಿದಾಗ ಆ ಮನೆಯಲ್ಲಿ ಅನ್ನ ಉಣ್ಣುವುದು ಅರ್ಥಹೀನ ಎಂದು ಭಾವಿಸಿ ಮನೆಯಿಂದ ಹೊರಬರುತ್ತಾಳೆ. ಪಶ್ಚಾತ್ತಾಪದಿಂದ ದಹಿಸಿ, ತನ್ನಿಂದ ಮನೆಯ ಯಜಮಾನನಿಗೆ ನೋವುಂಟು ಮಾಡಬಾರದೆಂದು ಅವಳು ತೆಗೆದುಕೊಂಡ ನಿರ್ಧಾರ ಈ ಬಾರಿ ಸರಿಯಾಗಿರುತ್ತದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ ಪ್ರೀತಿ ಮತ್ತು ಸಾವು ಒಂಟಿ ಮೋಡಗಳು, ಪು. ೧೦೩.

ಕೊನೆಗೂ ವಿವೇಚನೆಯುಕ್ತ ಹೆಣ್ಣಾಗಿ ಆಕೆ ಕಾಣಬರುತ್ತಾಳೆ. ಆದರೆ ಅದೇ ವೇಳೆಗೆ ಆಕೆಯ ಪತಿ ನಾಗೇಂದ್ರಪ್ಪನವರೂ ಸಹ ನಸುಕಿನಲ್ಲೇ ಮನೆಬಿಟ್ಟು ಹೊರಟುಬಿಡುತ್ತಾರೆ.

ಎಂ.ಎಸ್.ವೇದಾರ **ಪಾಲು** ಕಥಾಸಂಕಲನದಲ್ಲಿನ **'ಗೌರಿ ಬಂದಳು ಯಾತರ ಮೇಲೆ'** ಎಂಬ ಕತೆಯಲ್ಲಿ ಟೇಜು ಅಜ್ಜಅಜ್ಜಿಯ ಜೊತೆಯಲ್ಲಿ ಇರುತ್ತಾಳೆ. ಇವಳು ಅಜ್ಜಅಜ್ಜಿಯ ಮಗಳು ಗೌರಿಯ ಮಗಳು ಗೌರಿಹಬ್ಬದ ದಿನ ಟೇಜು ಎಚ್ಚರಗೊಳ್ಳುವ ಹೊತ್ತಿಗೆ ಹಬ್ಬದ ಸಡಗರ. ಅಂತಹ ಸಂದರ್ಭದಲ್ಲಿ ಟೇಜು ತಾನು ತಾತನೊಂದಿಗೆ ಸಂತೆಗೆ ಹೋಗಿ ಕೊಂಡ ವಸ್ತುಗಳ ಬಗ್ಗೆ ನೆನೆದು ಸಂತೋಷಗೊಳ್ಳುತ್ತಾಳೆ. ಆದರೆ ಅಜ್ಜ ಅಜ್ಜಿ ಯಾವುದೋ ಚಿಂತೆಯಲ್ಲಿ ಮುಳುಗಿರುವಂತೆ ಅನ್ನಿಸುತ್ತದೆ. ಅದೆಂದರೆ ಮಗಳಾದ ಗೌರಿಯ ಯೋಚನೆ "ನಮ್ಮ ಗೌರಿ ಯಾವತ್ತ್ ಬಂದಳೋ ಕಾಣೆ. ಈ ಸಲವಾದ್ರೂ ಕಿವಿನಾಗೆ ವಾಲೆ ಇಟ್ಕಂಡು ಬಂದಳೋ ಇಲ್ಲವೋ ಕಾಣೆ"[೧] ಎಂದು ಚಿಂತಿಸುತ್ತಿರುತ್ತಾರೆ. ಅಂದರೆ ಗೌರಿಯ ಗಂಡ ಸರಿಯಿರಲಿಲ್ಲ. ಕುಡುಕ, ಹೆಂಗಸಿನ ಚಟ ಇನ್ನೂ ಅನೇಕ ಕೆಟ್ಟ ಚಟಗಳನ್ನು ಕಲಿತು ಹೆಂಡತಿಗೆ ತೊಂದರೆ ಕೊಡುವಂತವನು.

"ಅದೆಲ್ಲಂತಾ ಆ ಸಿವಾ ನನ್ನ ಮಗೀಗೆ ಆ ರಾಕ್ಷಸನ್ನ ಅಂಟಾಕ್ದ ಅದೆಷ್ಟ್ ಜಲ್ಮದ್ ಪಾಪ ಮಾಡಿತ್ತು ನನ್ನೆಣ್ಣು. ಮದಿವಿಯಾದಾಗಿಂದ ಇವೊತ್ತಿನ ತಂಕಾ ಅಗ್ದು ವುಣ್ಣಾಕ್ ಬುಡ್ನಿಲ್ಲ. ನಿನ್ದು ತಿರುಗಾಡಾಕ್ ಬುಡ್ನಿಲ್ಲಾ. ಮ್ಯಾಲೆ ಗಾಂಡು ಸೋಕಿ ಬ್ಯಾರೆ. ಹತ್ತಾರ ಸಾವ್ರ ಸುರಿ ಅಂಗ್ಡಿ ಇಡು. ಇಂವಾ ಎಲ್ಲ ನೆಕ್ಕು. ಹತ್ತಾರ ಸಾವ್ರ ಸುರಿ ಅಂಗ್ಡಿ ಇಡು ಇಂವಾ ಎಲ್ಲ ನೆಕ್ಕು – ಇದೇ ಆಗೋಯ್ತು ಅವ್ನ ಅಣೆಬರಾ ವಾಗ್ಲಿ ವಳ್ಳೇತನಾನಾರ ಇದ್ದದಾ. ಮೈಯೆಲ್ಲಾ ಸುಳ್ಳು. ಸಿವಾ ಸಿವಾ ಅದ್ಯಾವ ಸೂಳಮಗ ಅವುನ್ ಬಾಯ್ಗ ಬೆಟ್ಟು ಹಾಕುದ್ನೋ? ಮೈಯೆಲ್ಲಾ ಸುಳ್ಳು. ಇವೆಲ್ಲಾ ಸಾಲ್ದೂಂತ ಹಾದ್ರುತನ. ನಮ್ ಗೌರಿ ಹೆಂಗಿತ್ತು. ಕೈತೊಳ್ದು ಮುಟ್ಟಿ ಹಂಗಿತ್ತು. ಮೂಳ ಚಕ್ಕಳ ಮಾಡಿಬುಟ್ಟೋನೆ. ಮೊದ್ಲೆ ಸುಂದರಮ್ಯಾಲೆ ಮೆಳ್ಳಗಣ್ಣು ಅಂತಿದ್ದರು ಹಂಗೆ ಇವೆಲ್ಲಕ್ಕೂ ಸಿಕುರದಂಗೆ ಕೊಡುಗುನ್ನ ಹೆಂಗುಸನ್ನ ವಡನಾಟ"[೨] ಎಂದು ದುಃಖಿಸುತ್ತಾರೆ. ಮಗಳ ಸ್ಥಿತಿಗಾಗಿ ಹಲುಬುತ್ತಾರೆ.

"ನನ್ನ ಕಂದಾ ವಸಾಸೀರೆ ವುಟ್ಕಂಡು ಕೈತುಂಬಾ ಬಳ ಹಾಕ್ಕಂಡು ಕಾಲ್ಗೆಜ್ಜೆ ಝುಲ್ ಝುಲ್ ಅನ್ನಿಸ್‌ಕಂಡು ವಾಡಾಡ್ತ ಇದ್ದರೆಯೇ ಒಂದು ಚೆಂದಿತ್ತು. ಈಗ್ಲೂ

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, 'ಗೌರಿಬಂದಳು ಯಾತರ ಮ್ಯಾಲೆ', ಪು. ೨೫೦.
೨. ಅದೇ, ಪು. ೨೫೨.

ಬತ್ತದೆ, ಕಿವಿಗಿಲ್ಲ, ಮೂಗಿಗಿಲ್ಲ. ಅವುಂಗೆ ಮಾರಣ ಬರಾಂವಾ ಧಾರೆಸೀರ್‍ಯಾ ಅಡಾ ಇಟ್ಕಂಡೋನಂತಲ್ಲಾ. ಅದುಕ್ಕಿಂತ ಬ್ಯಾರೆ ಬೇಕಾಗದ ಕೇಡು"[೧] ಎಂದು ಅಜ್ಜಿ ಗೊಳೋ ಎಂದು ಅಳತೊಡಗಿದಳು. ಅಜ್ಜಿ ಮಾತು ಮುಂದುವರೆಸಿ "ನನ್ನ ಮಗ್ಳು ವರುಸುಕ್ಕೊಂದು ಹಬ್ಬಾನೂ ನೆಟ್ಟಕ್ಕೆ ಮಾಡುವಂಗಿಲ್ಲ. ಅರಗಿಣಿ ಸಾಕಿ ಹದ್ದುಗ್ ಕೊಟ್ಟಂಗಾಯ್ತು ನಮ್ಮಥೆ. ಮುಖ್ಯಾ ಅವುಳ ಹಣೇಬರಾ ಸರಿಯಿಲ್ಲ. ಅದ್ನೆಲ್ಲಾ ನೋಡ್ಕಂಡು ಇನ್ನೂ ಬದುಕಿರಬ್ಯೆಕಂತಾ ಬರ್‍ದೋನಲ್ಲ ಆ ಸಿವಾ ನಮ್ಮ ಹಣೇಬರಾನೂ ಸರೀಯಿಲ್ಲ"[೨] ಎಂದುಕೊಳ್ಳುತ್ತಾಳೆ ಅಜ್ಜಿ.

ಮಾರನೆಯ ದಿನ ಗೌರಮ್ಮ ಬರುವವಳಿದ್ದಳು. ಅಜ್ಜಿ ಹಳೆಯದಾದ ರೇಶಿಮೆ ಸೀರಿ ಉಟ್ಟಳು. ತೇಜು ರೆಡಿಯಾಗಿ ಗೌರಮ್ಮನನ್ನು ತರಲು ತಾತನೊಂದಿಗೆ ಹೊರಟ ರೀತಿಯನ್ನು ಲೇಖಕಿ ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

'ತಾತಾ ಚಡಾವು ಮೆಟ್ಟುತ್ತಾ ನುಡಿದಾಗ ಟೇಜು ಸಟಕ್ಕನೆ ಯೆದ್ದು ನಿಂತು ಮಳೆನೀರು ತನ್ನ ರೇಸುಮೆ ಲಂಗುವ ತಾಗದಂತೆ ಎಡಗೈಯಿಂದ ಮೊಣಕಾಲ ತನಕ ಮೇಲೆತ್ತಿದವಳಾಗಿ ಬಲಗೈಯಿಂದ ತಾತನ ಕೈಹಿಡಿದು ರಸ್ತೆಗಿಳಿಯುತ್ತಾಳೆ.

ಗ್ರಾಮೀಣರಲ್ಲಿ ಗೌರಿಹಬ್ಬದ ದಿನ ನೀರಿನಲ್ಲಿ ಮುಳುಗಿ ಮಣ್ಣಿನ ಗೌರಿ ತರುವ ವಾಡಿಕೆ ಇರುತ್ತದೆ. ಹಾಗಾಗಿ ಸಿವ್ಲಿಂಗ ಎಂಬುವನು ನೀರಲ್ಲಿ ಮುಳುಗಿದಾಗ "ಯಾತರ ಮೇಲೆ ಬಂದಳು ಗೌರಿ" ತಾತ ಆತಂಕದಿಂದ ಕೇಳಿದಾಗ "ಬಿದುರು ಕಣಪ್ಪಯೋ" ಎಂದು ಸಿವ್ಲಿಂಗ ಹೇಳಿದಾಗ "ಮತ್ತೆ ಮುಳುಗಿ ಕರಿಮಣಿ, ಬಳೆಚೂರಿನೊಂದಿಗೆ ಮಣ್ಣಿನ ಗೌರಿಯನ್ನು ತೆಗೆ" ಎಂದು ತಾತ ಹೇಳಿದಾಗ ಸಿವ್ಲಿಂಗ ಹಾಗೆ ಮತ್ತೊಮ್ಮೆ ತೆಗೆದರೂ ಸಹ ಬಿದಿರಿನ ಚೂರು ಬಂದಾಗ ಎಲ್ಲರೂ ಆತಂಕಕ್ಕೆ ಒಳಗಾಗುತ್ತಾರೆ.

ಆ ರೀತಿ ಬಿದಿರಿನ ಮೇಲೆ ಗೌರಿ ಬಂದರೆ ಸಾವು ನೋವು ಸಂಭವಿಸುತ್ತದೆಂಬುದು ಗ್ರಾಮೀಣ ಪ್ರದೇಶದವರ ನಂಬಿಕೆಯಾದ್ದರಿಂದ ಹಾಗೆ ಹೆದರುತ್ತಾರೆ. ಜೊತೆಗೆ ತಾತನ ಮಗಳಾದ ಗೌರಿಯ ಜೀವನಕ್ಕೂ, ಹಬ್ಬಕ್ಕೆಂದು ತಂದ ಗೌರಿಗೂ ಕತೆಗಾರ್ತಿ ಇಲ್ಲಿ ತಳುಕು ಹಾಕಿದ್ದಾರೆ. ಗೌರಿಯದು ಕಷ್ಟದ ಜೀವನ. ಅದಕ್ಕಾಗಿ ಅವರ ತಂದೆ ತಾಯಿಗಳು ಸಂಕಟಪಡುವಂತಹ ಕೌಟುಂಬಿಕ ಸಮಸ್ಯೆಯನ್ನು ಇಲ್ಲಿ ಕಾಣಬಹುದು.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, 'ಗೌರಿಬಂದಳು ಯಾತರ ಮ್ಯಾಲೆ', ಪು. ೨೫೦.
೨. ಅದೇ, ಪು. ೨೫೨.

ಬೆಳಿಗ್ಗಿನಿಂದ ಯಾತರ ಮ್ಯಾಲೆ ಬಂದಳು ಗೌರಿ ಎಂದು ಜನ ಕೇಳಲು ಈಸಲು ಬಿದಿರಿನ ಮ್ಯಾಲೆ ಎಂಬ ನುಡಿಗಳು ಅಜ್ಜಅಜ್ಜಿಗೆ ಕಂಠಪಾಠವಾಗಿರುತ್ತವೆ.

ಹೀಗಿರುವಾಗ ಹಬ್ಬದ ಊಟದ ಸಮಯಕ್ಕೆ ಮಗಳು ಗೌರಿ ಬರುತ್ತಾಳೆಂದು ಮನೆಯ ಅಜ್ಜಅಜ್ಜಿ ಟೇಜೂ ಎಲ್ಲರೂ ಕಾಯುತ್ತಿರುತ್ತಾರೆ. ಅವಳು ಬರದಿದ್ದಾಗ ಎಲ್ಲರೂ ಕಾದು ನಂತರ ಊಟ ಮಾಡುತ್ತಾರೆ. ಸಂಜೆ ತಡವಾಗಿ ಕತ್ತಲಾದ ಮೇಲೆ ಮಗಳು ಗೌರಿ ಬಂದಾಗ ಅಜ್ಜಿ "ಯಾವಾಗ ಬಂದೆ ತಾಯಿ"[೧] ಅಜ್ಜಿ ಕೇಳಿದಾಗ ತಾತಾ ಯಾವುದರ ಮೇಲೆ ಎಂದಾಗ ಅಜ್ಜಿ ಬಿದಿರಮ್ಯಾಲೆ ರೂಢಿಮಾತಿನಿಂದ ಹೇಳಿಬಿಟ್ಟಾಗ ಮಗಳು ಗೌರಿ "ಬಿದಿರ ಮ್ಯಾಲೇಂತಾ ಯಾಕಂತೀಯವ್ವಾ ಕಾಲಮ್ಯಾಲೆ ಅನ್ನು. ಕಾಲ್ನಾಗೆ ನೀವು ಕೊಟ್ಟಿರಾ ಸಕ್ತಿ ಅದೆ, ದುಡದ್ ತಿಂತೀನಿ"[೨] ಎಂದು ದೃಢ ಮನಸ್ಸಿನಿಂದ ನುಡಿಯುತ್ತಾಳೆ. ಕುಡುಕ ಜೂಜೂಕೋರ ಗಂಡನೊಟ್ಟಿಗಿನ ಸಂಸಾರ ನರಕವಾದರೂ ಬದುಕಿಗೆ ಬೆನ್ನು ತಿರುಗಿಸದೆ ಸಮಸ್ಯೆಗೆ ವ್ಯಥೆಪಡದೆ ಇದ್ದು ಬಾಳ ಜಯಿಸುತ್ತಾಳೆ ಎಂಬ ಪ್ರಬುದ್ಧ ಚಿಂತನೆಯನ್ನು ಈ ಪಾತ್ರದಲ್ಲಿ ಗುರುತಿಸಬಹುದು.

ಕ್ಷಿತಿಜದಾಜಿನ ನೋಟಗಳು ಎಂಬ ಕತೆಯಲ್ಲಿ ಮನು ಪ್ರಹೇಲಿಯೊಮದಿಗೆ ಸುಂದರ ಜೀವನ ನಡೆಸುತ್ತಿರುತ್ತಾಳೆ. ಅದಕ್ಕೆ ಸಾಕ್ಷಿಯೆಂಬಮತೆ ನಿಜ್ಞೂ ಎಂಬ ಒಂದು ಮಗುವು ಇರುತ್ತದೆ. ಇಂತಹ ಸಂಸಾರದಲ್ಲಿ ಅಲೆ ಎಬ್ಬಿಸುವಂತಹ ಮಾತು ಮಿಸಸ್ ಕೊರೆಯದು. ಅದೆಂದರೆ "ನನ್ನ ಫ್ರೆಂಡ್ ಜಾಹ್ನವಿ ಗೊತ್ತಲ್ಲ ಅವಳ ನರ್ಸಿಂಗ್ ಹೋಂನಲ್ಲಿ ನಿನ್ನ ಗಂಡ ಯಾವುದೋ ಹೆಂಗಸಿನ ಜೊತೆ ಕಾಣಿಸಿಕೊಂಡಿದ್ದನಂತೆ ರಿಜಿಸ್ಟರ್‌ನಲ್ಲಿ ಮಿಸೆಸ್ ಪ್ರಹೇಲಿ ಅಂತ ಎಂಟ್ರಿ ಇದೆ. ಮುದ್ದಾದ ಹೆಣ್ಣು ಮಗು. ನೀನೇನು ನಿದ್ದೆ ಮಾಡ್ತಿದ್ದೀಯೋ ಹೇಗೆ ಅಂತ"[೩] ಎಂಬುದಾಗಿ ಎಚ್ಚರಿಸುತ್ತಾಳೆ.

ಆದರೆ ಮನು ಪ್ರಹೇಲಿಯ ಗುಣ ಒಳ್ಳೆಯದು. ಅವನು ಈ ರೀತಿ ಕೆಲಸಮಾಡಲು ಸಾಧ್ಯವಿಲ್ಲವೆಂಬಂತೆ, ಪ್ರಹೇಲಿಯ ಪ್ರಾಮಾಣಿಕತೆ ಚೂರಾದರೆ ನನ್ನ ಸಂಸಾರದ ಗತಿಯೇನು? ಎನ್ನಿಸಿದರೂ ಅದರ ಹಿಂದೆಯೇ "ತಾನು ದುಡಿಯುತ್ತೇನೆ. ನಿಜ್ಞೂ ಹಿರಿಯವನಿದ್ದಾನೆ. ಇದನ್ನೆಲ್ಲಾ ಅರ್ಥಮಾಡಿಕೊಳ್ಳಬಲ್ಲ. ಪ್ರಹೇಲಿಯೊಡನೆ ಮುಖಾಮುಖಿಯಾಗಿ ಆತನ ಅಪ್ರಾಮಾಣಿಕತೆಯನ್ನು ಎದುರಿಸಬೇಕಾದ ನರಕಯಾತನೆಯೇ ಬೇಡ"[೪] ಎಂದು ಆಲೋಚನೆ ಹೊಳೆಯುತ್ತದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, 'ಗೌರಿಬಂದಳು ಯಾತರ ಮ್ಯಾಲೆ', ಪು. ೨೫೫.
೨. ಅದೇ.,
೩. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಕ್ಷಿತಿಜದಾಜಿನ ನೋಟಗಳು, ಪು. ೨೬೮.
೪. ಅದೇ., ಪು. ೨೬೯

ಜೊತೆಗೆ ಮಿಸೆಸ್ ಕೊರೆಯ ಮಾತಿಗೆ ಪ್ರತಿಯೆಂಬಂತೆ "ಪ್ರಹೇಲಿ ಮತ್ತೊಬ್ಬ ಹೆಂಗಸಿನೊಂದಿಗೆ ಸಂಬಂಧ ಬೆಳೆಸಿರಬಹುದು. ನಿನ್ನ ಗಂಡನಿಗೆ ಕುಡಿಯುವುದರಲ್ಲಿ ಸುಖ ಸಿಕ್ಕಂತೆ ಅವನಿಗೆ ಅದರಲ್ಲಿ ಖುಷಿ ಸಿಕ್ಕಿದ್ರೆ ನಾನ್ಯಾಕ್ ಮಾತಾಡಬೇಕು ಹೇಳು"[೧] ಎಂಬ ಪ್ರಹೇಲಿಯ ಮೇಲಿನ ನಂಬಿಕೆಯಿಂದ ಜೋಕಾಗಿ ನುಡಿಯುತ್ತಾಳೆ.

ಆದರೆ ಮಿಸೆಸ್ ಕೋರೆಯ ಬಲವಂತಕ್ಕಾಗಿ ಮನು ಆ ರಿಜಿಸ್ಟರ್‌ನಲ್ಲಿದ್ದ ಅಡ್ರೆಸ್ ಹುಡುಕುತ್ತಾ ಬಂದು ಅಡ್ರಸ್ ಸಿಕ್ಕಿದಾಗ ಆ ಮನೆಯ ಬಾಗಿಲು ಬಡಿಯುತ್ತಾಳೆ. ಅಲ್ಲಿ ಬಾಗಿಲು ತೆಗೆದವಳು ಅವಳ ಹಳೆಯ ಗೆಳತಿ ಮೌನ. ಅವಳು ಪ್ರಹೇಲಿ ಮನುವಿನ ಗಂಡ ಎಂಬುದನ್ನು ತಿಳಿಯದೆ ಇರುವ ವಿಚಾರಗಳನ್ನು ಇರುವ ಹಾಗೆಯೇ ಹೇಳುತ್ತಾಳೆ. ತಾನು ಬ್ಯಾಂಕ್ ಆಫೀಸರ್ ಆದದ್ದು ಮದುವೆ ಬಗ್ಗೆ ಯೋಚಿಸದೇ ಇದ್ದದ್ದು. ಹೆಣ್ತನ ಗೆದ್ದಷ್ಟು ತಾಯ್ತನ ಗೆಲ್ಲಲ್ಲಿಕೆ ಆಗಲಿಲ್ಲ. 'ತೋಟ ತೆಗೆದುಕೊಳ್ಳುವ ವಿಚಾರದಲ್ಲಿ ಸಾಲಕ್ಕಾಗಿ ಪ್ರಹೇಲಿ ಅರ್ಜಿ ಹಾಕಿದ್ದರು. ಅವರ ಒಳ್ಳೆತನ, ಆಕರ್ಷಕ ವ್ಯಕ್ತಿತ್ವದ ಆಕರ್ಷಣೆಗೆ ಒಳಗಾಗಿ ತನಗೀಗ ನೆಮ್ಮದಿ. ಸಂತೃಪ್ತಿ ಸಿಕ್ಕ ವಿಷಯ ಹೇಳುತ್ತಾಳೆ. "ಪ್ರಹೇಲಿಯಿಂದ ನನಗೊಂದು ಮಗು ಸಿಕ್ಕಿದೆ. ಅದೇ ದೊಡ್ಡನಿಧಿ ನನಗೆ, ನನ್ನ ಬದುಕಿಗೆ ಪರಿಪೂರ್ಣತೆ ತಂದುಕೊಟ್ಟ ಪ್ರಹೇಲಿಯ ಬದುಕಿಗೆ ನಾನು ಯಾವತ್ತೂ ಮುಳ್ಳಾಗಲ್ಲ. ಟ್ರಾನ್ಸ್‌ಫರ್‌ಗೆ ಪ್ರಯತ್ನ ಪಡ್ತಾ ಇದ್ದೀನಿ"[೨] ಎಂದು ಮುಕ್ತ ಮನಸ್ಸಿನಿಂದ ಗೆಳತಿ ಮನು ಪ್ರಹೇಲಿಯ ಹೆಂಡತಿ ಎಂಬುದು ತಿಳಿಯದೆ ಹೇಳಿಬಿಡುತ್ತಾಳೆ. ಗೆಳತಿಯನ್ನು ಕಳಿಸುವ ಸಂದರ್ಭದಲ್ಲಿ ಪ್ರಹೇಲಿಯ ಗಾಡಿ ಕಂಡು "ಅರೆ ಅವರ ವೆಹಿಕಲ್ ಇಲ್ಲೇ ಇದೆ"[೩] ಎಂದಾಗ ಎಲ್ಲಾ ವಿಷಯ ತಿಳಿದ ಮೌನ ಮನುವಿನ ಬದುಕಿನಿಂದ ದೂರವಾಗುವ ಪ್ರಬುದ್ಧ ನಿರ್ಧಾರ ತಳೆಯುತ್ತಾಳೆ. ತನ್ನ ಮಗಳಿಗೂ ಮನುವೆಂದೇ ಹೆಸರು ಇಡುತ್ತಾಳೆ.

ತಾನು ಮೌನಳನ್ನು ಭೇಟಿಮಾಡಿದ್ದಕ್ಕೆ ಪ್ರಹೇಲಿಯಲ್ಲಿ ಕ್ಷೇಮ ಕೇಳುತ್ತಾಳೆ. ಈ ಎಲ್ಲಾ ವಿಚಾರಗಳು ಹೆಂಡತಿಗೆ ತಿಳಿದಿವೆಯೆಂದು ತಿಳಿದು ತನ್ನ ತಪ್ಪಿನ ಅರಿವಾಗಿ ತಾನು ಮೌನಳನ್ನು ಬಿಡುವ ನಿರ್ಧಾರ ಮಾಡಿ ಅವನು ಅಲ್ಲಿಗೆ ಹೋದಾಗ ಅಲ್ಲಿ ಮನೆಗೆ ಬೀಗ ಹಾಕಿದ್ದು, ಬಾಗಿಲಿನಲ್ಲಿದ್ದ ಪತ್ರದಲ್ಲಿ ಹೀಗೆ ಬರೆದಿತ್ತು.

"ಪ್ರೀತಿಯ ಪ್ರಹೇಲಿ. ಮನು ನಿನ್ನ ಹೆಂಡತಿಯೆಂದು. ನನಗೆ ತಿಳಿದಿರಲಿಲ್ಲ. ನನ್ನ ನಿಮ್ಮ ನಡುವಿನ ಸಂಬಂಧವನ್ನು ಅವಳು ಸ್ವೀಕರಿಸಿದ ರೀತಿಯಲ್ಲಿ ನಾನು ಬಹಳ

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲು, ಕ್ಷಿತಿಜದಾಚಿನ ನೋಟಗಳು, ಪು. ೨೬೮.
೨. ಅದೇ., ಪು. ೨೭೯.
೩. ಅದೇ,

ಕುಬ್ಜಳೆನ್ನಿಸಿಬಿಟ್ಟಿತು. ಮನುವಿನ ಸೌಜನ್ಯಕ್ಕೆ, ವ್ಯಕ್ತಿತ್ವಕ್ಕೆ ನಾನೇ ಪರಿಮಿತಿಯಾಗಬೇಕಿದೆ. ಅವಳ ಗುಣಗಳನ್ನು ದೌರ್ಬಲ್ಯವಾಗಿಸುವುದು ದುರುಪಯೋಗಪಡಿಸುವುದು ಬೇಡ" ಎಂಬುದಾಗಿತ್ತು. ಇಲ್ಲಿ ಸ್ನೇಹಿತೆಗೆ ಮೋಸ ಮಾಡಬಾರದೆಂಬ ಉದ್ದೇಶದಿಂದ ಸ್ನೇಹಿತೆಯ ಜೀವನ ಚೆನ್ನಾಗಿರಬೇಕೆಂಬ ಆಸೆಯಿಂದ ಮೌನ ಅಲ್ಲಿಂದ ವರ್ಗಾವಣೆ ಪಡೆದು ಹೊರಟುಹೋಗುತ್ತಾಳೆ.

ಮನು ಕೂಡ "ಪ್ರಹೇಲಿ, ತನ್ನ ಹೆಂಡತಿಯಲ್ಲಿ ಏನೋ ಕೊರತೆ ಕಂಡು ಮೌನಳತ್ತ ಹೋಗಿಲ್ಲ. ಮೌನಳ ಕೊರತೆ ತುಂಬೋಕೆ ಹೋಗಿದ್ದಾರೆ. ಅಂತ ನನಗೆ ಸಮಾಧಾನ ಇದೆ ಯೋಚನೆ ಮಾಡೋದು ಇನ್ನೂ ಯಾಕೇಂತಾ?"[೧] ಎಂದು ಗಂಡನ ತಪ್ಪನ್ನು ಕ್ಷಮಿಸುವ ಔದಾರ್ಯ ತೋರುತ್ತಾಳೆ. ಅವಳ ಈ ಒಂದು ಉದಾರಭಾವ ಪ್ರಹೇಲಿಗೆ ತನ್ನ ತಪ್ಪಿನ ಅರಿವು ಮೂಡಿಸಿದರೆ, ಮೌನಳಿಗೆ ಗೆಳತಿಯ ಒರಳಲ್ಲಿ ಮುಳ್ಳಾಗಬಾರದೆಂಬ ಚಿಂತನೆ ಮೂಡುತ್ತದೆ.

ಹೀಗೆ ವೇದಾರವರು ಚಿತ್ರಿಸಿರುವ ಈ ಎರಡು ಸ್ತ್ರೀಪಾತ್ರಗಳು, ಆಧುನಿಕ ಮಹಿಳೆಯರ ತಾರ್ಕಿಕ ಚಿಂತನೆಗೆ, ವಿಶಾಲಪರ ಮನೋಭೂಮಿಕೆಗೆ ಇಂಬನ್ನು ನೀಡುವಂತಹವು.

ಸೃಷ್ಟಿ ಕತೆಯಲ್ಲಿ ಬರುವ ಅನುವಿನ ಪಾತ್ರ ತುಂಬಾ ಸೂಕ್ಷ್ಮತನದ ಚಿಂತನೆಯನ್ನು ಒಳಗೊಂಡಿರುವಂತದ್ದು. ಇಲ್ಲಿನ ಅನು ತನ್ನ ಅನುಭವವನ್ನು ಮತ್ತು ತಾನು ಭಾರತಿ ಆಂಟಿ ಎಲ್ಲರೂ ಒಟ್ಟಿಗೆ ಪ್ರಯಾಣ ಮಾಡಿದ್ದು ಅಂತೆಯೇ ಎಡಿಟರ್ ಅಂಕಲ್ ಮಂಗಳೂರಿನ ಕಥಾಶಿಬಿರದ ಚರ್ಚೆಯಲ್ಲಿ "ಹುಡುಗಿ ಬರೆಯುತ್ತಾಳೆಂದೇ ನಿಂತುಹೋದ ಮದುವೆ"[೨] ಎಂದು ಹೇಳಿದ್ದನ್ನು ಜ್ಞಾಪಿಸಿಕೊಳ್ಳುತ್ತಾಳೆ. ಭಾರತಿಯ ಬಗ್ಗೆ ಹೇಳುತ್ತಾ "ನಾಲ್ಕು ಜನರ ನಡುವೆ ಕಿರುಬೆರಳ ಗಾತ್ರದ ಜಡೇನಾ ಪಿಣ್ಣಂತ ಹೆಣೆದುಕೊಂಡು ಗಮಾರಳಾಗಿ ಹೋಗೋದೇ ನನಗೆ ತ್ರಾಸವಾಗಿತ್ತು. ಕೀಳಿರಮೆ ಅನಿಸ್ತಿತ್ತು. ಮನೇಲಿ ಬೈಯ್ದರು. ಜಗಳವಾಡಿದರು. ಆದ್ರೆ ನನಗೆ ಜುಟ್ಟು ಬಿಟ್ಟು ಬಾಯ್ಕಟ್ ಮಾಡಿಸೋದು ತೀರಾ ಅಗತ್ಯ ಅನ್ನಿಸ್ತು. ಅದಕ್ಕೆ ಕಟ್ ಮಾಡಿಸಿಯೇ ಬಿಟ್ಟೆ" ಎಂದು ಭಾರತಿ ಹೇಳಿದ್ದು ಇವರಿಗೆ ಅಚ್ಚರಿ ಉಂಟುಮಾಡುತ್ತದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ ಪಾಲು, ಕ್ಷಿತಿಜದಾಚಿನ ನೋಟಗಳು, ಪು. ೨೭೮.
೨. ಅದೇ, ಪು. ೨೭೯.

ಅಂತೆಯೇ ಇವಳ ಬಾಂಬೆ ಹುಡುಗನೊಂದಿಗೆ ಮದುವೆಯಾಗಿ "ಮದುವೆಯಾಯ್ತೇ ಅನು, ನನ್ನದು"[೧] ಎಂದು ಹೇಳಿದ್ದು. ಅವಳ ವೇಷಭೂಷಣ ದಂಗುಬಡಿಸುತ್ತದೆ.

ಅನುವಿನೊಂದಿಗೆ ಮದುವೆ ಬಗ್ಗೆ ಮಾತನಾಡುತ್ತಾ "ಇಲ್ಲ ಅನು, ಇಷ್ಟು ಮುಗ್ಧತೆ, ಮೃದುತನ, ಕೋಮಲತೆ, ನಮ್ಮ ಬದುಕನ್ನು ಬೇರಾರೋ ನಡೆಸುವ ಪರಿ – ಕಡಿಮೆಯಾಗಬೇಕು. ನಾವುಗಳು ಸ್ವಲ್ಪವಾದರೂ ಸ್ವಾರ್ಥಿಗಳಾಗಬೇಕು"[೨] ಎಂದು ಬುದ್ಧಿಹೇಳುತ್ತಾಳೆ.

ಇಲ್ಲಿ ಭಾರತಿ ಗಟ್ಟಿತನದ ಹುಡುಗಿ ಎಲ್ಲಾ ಸಂಪ್ರದಾಯಗಳನ್ನು ತೂರಿ ಹೊರಗೆ ಬಂದು ದಿಟ್ಟತನದಿಂದ ಜೀವನ ನಡೆಸುತ್ತಿದ್ದ ಹುಡುಗಿಯಾಗಿದ್ದಳು. ಅವಳಿಗೆ ಈ ಸಂಪ್ರದಾಯ ಕಟ್ಟುಪಾಡು ಯಾವುದರಲ್ಲಿಯೂ ನಂಬಿಕೆಯನ್ನು ಇಟ್ಟುಕೊಂಡಿರಲಿಲ್ಲ. ಸ್ವತಂತ್ರ ಪ್ರವೃತ್ತಿ ಹೊಂದಿದ್ದಳು. ಅನು ನೇಹಾಳ ಜೀವನವನ್ನು ಜ್ಞಾಪಿಸಿಕೊಳ್ಳುತ್ತಾಳೆ.

ಇಲ್ಲಿ ಮುಖ್ಯವಾಗಿ ಸಮಾಜ ಯಾವ ರೀತಿ ಹೆಣ್ಣನ್ನು ಬಂಧನದಲ್ಲಿಡಲು ಬಯಸುತ್ತದೆ. ಆ ಬಂಧನದಿಂದ ಹೊರಗೆ ಬಂದು ಕೆಲವರು ಮಾತ್ರ ಸ್ವತಂತ್ರ ಜೀವನ ನಡೆಸುತ್ತಿರುತ್ತಾರೆ. ಅಂತೆಯೇ ಕೆಲವರು ಆ ಬಂಧನದೊಲಗೆ ಸಿಲುಕಿ ಹೊರಬರಲಾರದೇ ಯಾವ ರೀತಿ ಯಾತನೆ ಅನುಭವಿಸುತ್ತಾರೆ ಎಂಬುದನ್ನು ಚಿತ್ರಿಸಿದ್ದಾರೆ.

ಬರಹಗಾರ್ತಿ ಬದುಕಿನ ನಾನು ಸೂಕ್ಷ್ಮತೆಗಳನ್ನು ಕತೆಗಾರ್ತಿ ಇಲ್ಲಿನ 'ಅನು' ಪಾತ್ರದ ಮುಖೇನ ಬಿಚ್ಚಿಡುವ ಪ್ರಯತ್ನ ಅದ್ಭುತವನ್ನು ಹೆಣ್ಣಿನ ಆಂತರಂಗಿಕ ಒಳತೋಟಗಳು ವೇದಾರವರ ಕತೆಗಳಲ್ಲಿ ಸಮರ್ಪಕವಾಗಿ ಮೂಡಿಬಂದಿರುವುದನ್ನು ಈ ಕತೆಯಲ್ಲಿ ಕಾಣಬಹುದಾಗಿದೆ.

ಗಂಭೀರ ಚಿಂತನೆಯುಳ್ಳ, ವಿದ್ಯಾವಂತ ಸೂಕ್ಷ್ಮ ಮನಸ್ಸಿನ ಹೆಣ್ಣಿನ ಚಿತ್ರಣ ಈ ಕತೆಯಲ್ಲಿ ಬಂದಿದೆ.

ಅನುಷಂಗಿಕದವಳ ಅಧ್ಯಾಹಾರ ಕತೆಯಲ್ಲಿ ಕತೆಗಾರ್ತಿ. ಪುರಾಣದ ಕತೆಗಳನ್ನು ತೆಗೆದುಕೊಂಡು ಇಂದಿನ ಸಮಾಜಕ್ಕೆ ಅನ್ವಯಿಸಿ ಬರೆದಿದ್ದಾರೆ. ಇದು ರಾಮಾಯಾಣ–ದಲ್ಲಿ ಬರುವಂತಹ ಊರ್ಮಿಳೆ ಸೀತೆ, ರೈತಕೀರ್ತಿ, ಮಾಂಡವಿಯರ ಕತೆಯಾಗಿದೆ.

---

೧. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಪಾಲ್ತು, ಕ್ಷಿತಿಜದಾಜಿನ ನೋಟಗಳು, ಪು. ೨೭೯.

೨. ಅದೇ,

ಇವರ ಸ್ಥಾನ ಎಂತಹುದು. ಇವರನ್ನು ಅರಮನೆಗಳಲ್ಲಿ ಮದುವೆಯಾದ ಮೇಲೆ ಹೇಗೆ ನಡೆಸಿಕೊಂಡರು ಯಾವ ರೀತಿ ಕಷ್ಟ ಅನುಭವಿಸಿದರು ಎಂಬುದನ್ನು ಚಿತ್ರಿಸಿದ್ದಾರೆ.

ಇಲ್ಲಿ ಊರ್ಮಿಳೆಯನ್ನು ಮಾಂಡೂ "ಯಾಕ್ ಊಮಕ್ಕ ಸೀತೆ ಅಂದ್ರೆ ಅಷ್ಟು ಬೇಸರ ನಿಂಗೆ?"[೧] ಎಂದು ಕೇಳುತ್ತಾಳೆ. "ಊರ್ಮಿಳಾ ಯಾರಜ್ಜಿ? ಕುಂಭಕರ್ಣನ ಹೆಂಡತಿಯಾ" ಎಂದು ಮಕ್ಕಳು ಕೇಳಿದಾಗ ಮಾಂಡೂ "ಮಕ್ಕಳು ತಿಳೀಯದೆ ಆಡಿದವು, ತಪ್ಪು ತಿಳೀಬೇಡ ಊಮಕ್ಕ"[೨] ಎಂದು ಸಮಾಧಾನಪಡಿಸುತ್ತಾಳೆ.

ಇಲ್ಲಿ ಮುದುಕರಾದ ಊರ್ಮಿಳೆ ಮಾಂಡೂ, ಶೃತಕೀರ್ತಿ ತಾನೇ ಮಾತನಾಡಿಕೊಳ್ಳುತ್ತಾರೆ.

"ಅದ್ರಲ್ಲಿ ತೆಪ್ಪೇನು ಬಂತು ತಗೋ ಮಾಂಡು. ಊರ್ಮಿಳಾ ಯಾರ ಮಗಳು? ಯಾರ ಹೆಂಡತಿ? ಯಾರ ಸೊಸೆ? ಇವೆಲ್ಲಾ ಎಲ್ಲಿ ಗುರುತಾಗಿತು"[೩] ಎಂದು ತನ್ನ ದುಃಖವನ್ನು ವ್ಯಕ್ತಪಡಿಸುತ್ತಾಳೆ. ಅಲ್ಲಿ ತನಗಿದ್ದ ಸ್ಥಾನವನ್ನು ನೆನೆದು ದುಃಖಿಸುತ್ತಾಳೆ. ಅವಳಿಗೆ ಹಸಿರನ್ನು ನೀಡುವಂತದ್ದು ಸೀತೆಯ ವಿಚಾರಗಳು ಅವಳಿಗೆ ಸೀತೆಯನ್ನು ಕಂಡರೆ ತುಂಬಾ ಪ್ರೀತಿ.

ರಾಮ ಕಾಡಿಗೆ ಹೋಗುವಾಗ ಇವಳು ಹೇಳುವುದು "ಭಾವನಿಗೆ ತಂದೆಯ ಸತ್ಯ ಕಾಪಾಡಬೇಕಾದ ಕರ್ತವ್ಯವಿತ್ತು. ಅಕ್ಕನಿಗೆ ಭಾವನ ಹಿಂದೆ ಹೋಗಬೇಕಾದ ಬಾಧ್ಯತೆ ಇತ್ತು. ತನ್ನ ಗಂಡನಿಗಾರ ಅಣತಿಯಿತ್ತು? ಅಕ್ಕ ಹೊರಡಲು ಭಾವನ ಒಪ್ಪಿಗೆ ಇದ್ದರೆ. ಇವರು ಹೊರಡಲು ತನ್ನ ಒಪ್ಪಿಗೆ ಬೇಕಿರಲಿಲ್ಲವಾ ದೇವರೆ? ಬೇಡಾ "ಹೋಗಿ ಬರಲೇ" ಎಂಬ ಒಂದೇ ಒಂದು ಮಾತು ..!? ಬೇಡಾ . ಆ ಭಾವ ಮೂಡಿಸುವ ಒಂದೇ ಒಂದು ನೋಟ"[೪] ಎಂದು ದುಃಖಿಸುತ್ತಾಳೆ.

"ನಿಮ್ಮ ಮಗ ಮಾಡಿದ್ದು ಸರಿಯೇ ಅತ್ತೆ" ಎಂದು ಅತ್ತೆಯನ್ನೆ ಪ್ರಶ್ನಿಸುವಂತಹ ಧೈರ್ಯಗಾರಿಕೆಯನ್ನು ತೋರಿಸುತ್ತಾಳೆ. ಸೀತೆ ಬಂದಾಗ ಸೀತೆಯ ಕುಶಲೋಪರಿ ವಿಚಾರಿಸುತ್ತಾಳೆ. ಹಾಗೆಯೇ ಸೀತೆ ಯಾವ ರೀತಿಯಲ್ಲಿ ರಾವಣನಿಂದ ಅಪಹೃತಳಾಗಿ ಯಾವ ರೀತಿ ಅನುಮಾನಕ್ಕೆ ಗುರಿಯಾಗಿ ಕಾಡಿಗೆ ಹೋದಳು. ರಾಮ ರಾವಣನಿಗಿಂತ

---

೧. ಎಂ.ಎಸ್.ವೇದಾರ ಸಣ್ಣಕತೆಗಳು, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ಅನುಷಂಗಿಕದವಳ ಅಧ್ಯಾಹಾರ, ಪು. ೩೭೬.

೨. ಅದೇ, ಪು. ೩೭೭.

೩. ಅದೇ,

೪. ಎಂ.ಎಸ್.ವೇದಾರ ಸಣ್ಣಕತೆಗಳು, ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ, ಅನುಷಂಗಿಕದವಳ ಅಧ್ಯಾಹಾರ, ಪು. ೩೯೧.

ಹೇಗೆ ಕೀಳು ಎಂಬುದನ್ನು ಊರ್ಮಿಳೆ ಮಾತಾಡುವ ಮೂಲಕ ಚಿತ್ರಿಸಿದ್ದಾರೆ. ಊರ್ಮಿಳೆ ಯಾವ ರೀತಿ ಕಾಲ ಕಳೆದಳು ಎಂಬುದನ್ನು ಚಿತ್ರಿಸಿ ಅವಳನ್ನು ಒಂದು ಕಂಬಕ್ಕೆ ಹೋಲಿಸಿದ್ದಾರೆ.

ಹೀಗೆ ಎಂ.ಎಸ್.ವೇದಾರವರು ಹೆಣ್ಣಿನ ನಾನ ಮುಖಗಳ ಅನಾವರಣವನ್ನು ಮಾಡಿದ್ದಾರೆ. ಅಂತೆಯೇ ಆಕೆ ಅನುಭವಿಸುವ ಕಷ್ಟಗಳು, ಶೋಷಣೆಗಳನ್ನು ಹೇಳಿರುವಂತೆಯೇ ಅದರಿಂದ ಹೇಗೆ ಹೊರಬರಬೇಕು. ಅದರ ವಿರುದ್ಧ ಹೇಗೆ ಪ್ರತಿಭಟಿಸಿ ನಿಂತು ಹೋರಾಡಬೇಕೆಂಬುದನ್ನು ಮನೋಜ್ಞವಾಗಿ ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ.

ಅಧ್ಯಾಯ – ೫

ಡಾ. ಎಂ.ಎಸ್.ವೇದಾರವರ ಸ್ತ್ರೀ ಪಾತ್ರಗಳ ಒಟ್ಟು ವಿವೇಚನೆ

ಎಂ.ಎಸ್.ವೇದಾರವರ ಕತೆಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಬದುಕನ್ನು ಕಟ್ಟಿಕೊಡುವಂತಹ ಪಾತ್ರಗಳಾಗಿವೆ. ಅಂತಹ ಪಾತ್ರಗಳನ್ನು ಅನುಕ್ತ, ಉರಿದವರು, ಪ್ರೀತಿ ಮತ್ತು ಸಾವು, ಮಳೆಯ ಒಂದು ರಾತ್ರಿಯಲ್ಲಿ, ಕುರುಕ್ಷೇತ್ರವೂ ಕುಂಯ್ಯನೆಂಬ ಬಾಲನ ಕತ್ತಲ ಲೋಕವೂ, ಹಂದಿ ಮತ್ತು ದಯಾದಿ ಮುಂತಾದ ಕತೆಗಳು. ಇವುಗಳಲ್ಲಿ ಭಾಷೆಯ ಬಳಕೆಯ ವೈವಿಧ್ಯತೆಯನ್ನು ಗುರುತಿಸಬಹುದು. ಇವು ಪರಂಪರಾಗತ ಬದುಕನ್ನೂ, ಸಮೃದ್ಧವಾಗಿ ಸಾಂಸ್ಕೃತಿಕ ವಿವರಗಳನ್ನೂ ನೀಡುವುದರಲ್ಲಿ ಇವರ ಕತೆಗಳು ಕಲಾತ್ಮಕತೆಯಿಂದ ಕಂಗೊಳಿಸುತ್ತವೆ.

"ವೇದಾ ಅವರ ಕಥಾಸಾಹಿತ್ಯದ ಕೇಂದ್ರವೇ ಬದುಕಿನ ವಿವಿಧ ನೆಲೆಗಳು ಅದರಲ್ಲೂ ಮಹಿಳಾ ಸಮುದಾಯದ ವಿವಿಧ ಆಯಾಮಗಳನ್ನು ಅವರು ತಮ್ಮ ಕತೆಗಳಲ್ಲಿ ಹೆಕ್ಕಿ ತೆಗೆಯುತ್ತಾರೆ. 'ಅನುಕ್ತ', 'ಉರಿದವರು', 'ಮಳೆಯ ಒಂದು ರಾತ್ರಿಯಲ್ಲಿ', 'ಪಾರೋತಿಯೂ ಪ್ಯಾದೆ ಪಾಪಣ್ಣನೂ'– ಮುಂತಾದ ಕತೆಗಳಲ್ಲಿ ಸ್ತ್ರೀ ಶೋಷಣೆಯ ಸಂಗತಿ, ಅದಕ್ಕೆ ಉಂಟಾಗುವ ಪ್ರತಿರೋಧ ಸಹಜವಾಗಿಯೇ ಅಭಿವ್ಯಕ್ತಗೊಂಡಿರುವುದನ್ನು ಗುರುತಿಸಬಹುದು. ಮಂಜು ಪಾತ್ರದಲ್ಲಿ(ಅನುಕ್ತ) ತ್ಯಾಗದೊಂದಿಗೆ ಪ್ರತಿಭಟನೆಯೂ ವ್ಯಕ್ತಗೊಳ್ಳುವುದರಿಂದ ಸ್ತ್ರೀಪರ–ಜೀವಪರ ಪ್ರಗತಿಪರವಾದ ಬದುಕಿನ ನಡಿಗೆಯೂ ವ್ಯಕ್ತವಾಗದಿರದು. ಅನುಕ್ತದ ಮಂಜುವಿನ ಪಾತ್ರಕ್ಕೆ ವಿರುದ್ಧವಾದ ವ್ಯಕ್ತಿತ್ವವುಳ್ಳ ಪಾತ್ರವೆಂದರೆ 'ಉರಿದವರು' ಕತೆಯ ಅನುವಿನದು. ಈ ಪಾತ್ರದ ಮೂಲಕ ಪುರುಷನಿಗೆ ಸಮಾನವಾಗಿ ದುಡಿಯಲು ಹೊರಟ ಹೆಣ್ಣು ಎದುರಿಸುವ ಸವಾಲುಗಳನ್ನು ಚಿತ್ರಿಸಲಾಗಿದೆ. 'ಮಳೆಯ ಒಂದು ರಾತ್ರಿಯಲ್ಲಿ' ಅನುಕ್ತ, ಉರಿದವರು ಕತೆಗಳಿಗಿಂತ ಭಿನ್ನವಾದ್ದು. ಇಲ್ಲಿ ಚಿತ್ರಾಳ ಬದುಕಿನ ತಳಮಳಕ್ಕೆ ಶಿಕ್ಷಣವಿಲ್ಲದ್ದೇ ಕಾರಣವಾಗುತ್ತದೆ. ಹಾಗೆಯೇ ಶಿಕ್ಷಣ ಪಡೆದವರೆಲ್ಲರೂ ಸಜ್ಜನಿಕೆಯಿಂದ ಕೂಡಿದವರಾಗಿದ್ದಾರೆಂದು ಹೇಳುವಂತಿಲ್ಲ. ಅದಕ್ಕೂ ವಸಂತ, ಪಾಟೀಲರೆಂಬ ಅಧ್ಯಾಪಕರ ಮೂಲಕ ಮಾದರಿಗಳು ದೊರಕುತ್ತವೆ. 'ಒಂಟಿ ಮೋಡಗಳು', ಚೆಲುವೆ ಮುತ್ತಮ್ಮನ ಪರಸಂಗ'–ಇವೆರಡೂ ಕತೆಗಳು ಕೌಟುಂಬಿಕ ಹಿನ್ನೆಲೆಯನ್ನು ಒಳಗೊಂಡಿದ್ದು ಮಹಿಳಾ ಕೇಂದ್ರಿತವಾದುವೇ ಆಗಿವೆ. 'ಒಂಟಿ ಮೋಡಗಳು'ನಲ್ಲಿ ಪ್ರೀತಿ ನಂಬಿಕೆಗಳು ಒಂದುಗೂಡಲಾರದಂತಿದ್ದರೆ ಚೆಲುವೆ ಮುತ್ತಮ್ಮನ ಪರಸಂಗದಲ್ಲಿ ಅವನ್ನ ರೂಪಿಸಬಯಸಿ, ಅದು ಸಾಧ್ಯವಾಗದಾಗ ವೈರಾಗ್ಯ ಹೊರಡುವ ಬಗೆ ಇದೆ.

ಜೀವನದಲ್ಲಿ ನಿರೀಕ್ಷೆ ಮೀರಿದ ಬವಣೆಗಳೇ ಎದುರಾಗುತ್ತಿರುತ್ತವೆ. ಆದರೆ ಅವು 'ಪ್ರೀತಿಸುವ ಹೃದಯಗಳ ಬಂಧನಗಳನ್ನು ಕಳಚಿಹಾಕುವುದು ಬದುಕಿನ ಬಹುದೊಡ್ಡ ದುರಂತವೇ ಸರಿ. 'ಸ್ಫೂರ್ತಿಯಿಂದ ಕೀರ್ತಿವಂತನಾದ ರಾಮಕೃಷ್ಣ. (ಪ್ರೀತಿ ಮತ್ತು ಸಾವು) ಸ್ಫೂರ್ತಿಯ ಪ್ರೀತಿಗೆ ಸಾಂಗತ್ಯಕ್ಕೆ ಸಮೀಪಿಸುತ್ತಿದ್ದಂತೆ ಸ್ಫೂರ್ತಿ ಸಾವಿನ ಸಾಂಗತ್ಯದೆಡೆಗೆ ಸಾಗುವುದು ಬಹುದೊಡ್ಡ ದುರಂತ. ಪ್ರೇಮದ ವಿವಿಧ ಆಯಾಮಗಳು ಕತೆಯಲ್ಲಿ ವೈರುಧ್ಯದ ನೆಲೆಯಲ್ಲಿ ಸಾಗಿದರೂ ಆಂತರ್ಯದಲ್ಲಿ ಅದು ಯಶಸ್ಸಿನತ್ತ ಸಾಗುತ್ತಲೇ ಬರುತ್ತದೆ. ಸ್ತ್ರೀಯೊಬ್ಬಳ ಭಾವ ಲೋಕಕ್ಕೆ ಲಗ್ಗೆ ಹಾಕಿ ಉನ್ನತ ವ್ಯಾಸಂಗದ ಸಲುವಾಗಿ ಅವಳಿಂದ ದೂರವಾಗಿ ಊರಿಗೆ ಮರಳುವ ರಾಮಕೃಷ್ಣನ ವಿಚಿತ್ರ ಸುಖದ ಮರುಕಳಿಕೆ ಕಥೆಯಲ್ಲಿ ಆಪ್ತ ವಿವರಗಳಲ್ಲಿ ತೆರೆದುಕೊಳ್ಳುತ್ತವೆ."[೧]

ಮಳೆಯ ಒಂದು ರಾತ್ರಿಯಲ್ಲಿ ಕಥಾನಾಯಕಿ ಚಿತ್ರ ಶೋಷಣೆಯ ವಿರುದ್ಧ ತಿರುಗಿ ನಿಂತವಳು. ನೋವು ನಿರಾಶೆಗಳ ನಡುವೆಯೂ ಸಹ ಪುಟಿಯುವ ಜೀವನೋತ್ಸಾಹ ಇಟ್ಟುಕೊಂಡು ಗಂಡನಿಂದ ತನಗೆ ಈ ಸ್ಥಿತಿ ಬಂದಿದ್ದರೂ ಸಹ ಅವನೆ ತನ್ನನ್ನು ಆಡಿಕೊಳ್ಳುವುದನ್ನು, ಕುಹಕದ ಮಾತುಗಳನ್ನು ಸಹಿಸಿ ಸಹಿಸಿ ಸಾಕಾಗಿ ಕೊನೆಗೆ ಗಂಡನ ತಪ್ಪಿಗಾಗಿ ಅವನ ಕೆನ್ನೆಗೆ ಬಾರಿಸಿ ಆ ಮನೆಯಿಂದ ಹೊರ ಹೋಗುವ ಪ್ರಯತ್ನ ಮಾಡುವ ದಿಟ್ಟ ಹೆಣ್ಣಾಗಿ ಕಾಣಿಸುತ್ತಾಳೆ.

ಎಂ.ಎಸ್.ವೇದಾರವರ ಕತೆಗಳು ಸಾಮಾಜಿಕ ಬದುಕು ಮತ್ತು ಅದರ ಸಾಂಸ್ಕೃತಿಕ ಚಿತ್ರಣವನ್ನು ಕಟ್ಟಿಕೊಡುವಂತಹು, ಪಾಲು, ಗೌರಿಬಂದಳು ಯ್ಯಾತರ ಮೇಲೆ? ಅಲಕಾಳ ಡೈರಿಯ ಪ್ರೀತಿಯ ಪುಟಗಳು, ಹೋಗಿ ಬರಲೆ ಭರತ, ಮರಳಿ ಬಾರದ ಶಾಕುಂತಲೆ ಇತ್ಯಾದಿ, ಇವುಗಳು ಗ್ರಾಮೀಣ ಬದುಕಿನ ಚಿತ್ರವನ್ನು ಅಲ್ಲಿಯ ಭಾಷೆಯಲ್ಲಿಯೇ ಕಟ್ಟಿಕೊಡುತ್ತವೆ. ಅಂತೆಯೇ ಹೆಣ್ಣಿನ ಭಾವನೆಗಳನ್ನು ಸಮಾಜ ಹೇಗೆ ಯಾವ ರೀತಿ ನಿಯಂತ್ರಿಸುತ್ತದೆ ಎಂಬುದನ್ನು ತೋರಿಸುವುದರ ಜೊತೆಗೆ ಹಿಂದಿನವರ ಕಟ್ಟುಪಾಡುಗಳು ಮುಂದಿನ ಪೀಳಿಗೆಗೆ ಯಾವ ರೀತಿ ಸಮಸ್ಯೆಯನ್ನು ತಂದೊಡ್ಡುತ್ತದೆ ಎಂಬುದನ್ನು ಎಂ.ಎಸ್.ವೇದಾರವರ ಕತೆಗಳು ಚಿತ್ರಿಸುತ್ತವೆ.

"ವೇದಾ ಅವರು ಪುರಾಣ ಪ್ರಸಂಗಗಳನ್ನು ಸಮಕಾಲೀನಗೊಳಿಸಬಲ್ಲರು. ಕತೆಗಳಲ್ಲಿ ಸನ್ನಿವೇಶಗಳನ್ನು, ಪಾತ್ರಗಳನ್ನು ಪೌರಾಣಿಕ ಸನ್ನಿವೇಶ ಪಾತ್ರಗಳಿಗೆ ಹೋಲಿಸಿ ನಿರ್ವಚಿಸಬಲ್ಲರು. 'ಹೋಗಿ ಬರಲೇ ಭರತ' ಮರಳಿ ಬಾರದ ಶಾಕುಂತಲೇ' ಈ ಎರಡೂ ಕತೆಗಳಲ್ಲಿ ಶಾಕುಂತಲೆಯ ಬದುಕಿನ ಚಿತ್ರಣವನ್ನು ಪೌರಾಣಿಕ ಪಾತ್ರಕ್ಕಿಂತಲೂ

೧. ಎಂ.ಎಸ್.ವೇದಾರ ಸಣ್ಣ ಕತೆಗಳು ಈ ತನಕ, ಸಂವಹನ, ಮೈಸೂರು, ೨೦೧೦.

ವಿಭಿನ್ನ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. 'ಹೋಗಿ ಬರಲೆ ಭರತ' ಎನ್ನುವ ಶಕುಂತಲೆಯ ಮಾತಿನಲ್ಲಿ ಮಗನ ಮೇಲಿನ ಭರವಸೆ ವ್ಯಕ್ತವಾಗುತ್ತದೆ. ತನ್ನನ್ನು ಕರೆಸಿಕೊಳ್ಳುವುದಾಗಿ ಮಾತು ಕೊಟ್ಟು ಮರೆತ ರಾಜನ ನಡತೆಯಿಂದ ಮೊದಲೇ ನೊಂದ ಶಕುಂತಲೆಯನ್ನು ಆಸ್ಥಾನದಲ್ಲಿ ಆತ ನಡೆಸಿಕೊಳ್ಳುವ ರೀತಿಗೆ ಆಕೆ ತೋರುವ ಪ್ರತಿಕ್ರಿಯೆ ಅವಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತದೆ. ಅವಳ ನಿಷ್ಠುರತೆ, ಸ್ವಾಭಿಮಾನದ ಸಂಕೇತವಾಗುತ್ತದೆ. ಈ ಕತೆಯ ಮುಂದುವರಿದ ಭಾಗವಾಗಿ 'ಮರಳಿ ಬಾರದ ಶಾಕುಂತಲೆ' ಕಾಣಿಸುತ್ತದೆ. ವಿಶ್ವಾಮಿತ್ರ ದುಷ್ಯಂತ ಹಾಗೂ ಭರತ ಈ ಮೂವರಿಂದಲೂ ಶಕುಂತಲೆಗೆ ಯಾವ ರಕ್ಷಣೆಯೂ ಸಿಗಲಿಲ್ಲ. ಆದರೆ ತನ್ನ ವ್ಯಕ್ತಿತ್ವಕ್ಕೆ ಕುಂದು ಬರುತ್ತದೆಂದಾಗ ಯಾರ ಮುಲಾಜಿಗೂ ಒಳಗಾಗದೆ ತನ್ನಿಷ್ಟದಂತೆ ನಡೆಯುವ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಶಕುಂತಲೆ ಸ್ವತಂತ್ರ ಮನೋಧರ್ಮದ ಪ್ರತೀಕವಾಗಿ ಕಾಣಿಸುತ್ತಾಳೆ."[೧]

ಎಂ.ಎಸ್.ವೇದಾರವರ ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ ಮೊದಲೆರಡು ಕಥಾಸಂಕಲನಗಳಿಗಿಂತ ವಿಭಿನ್ನತೆಯಿಂದ ಕೂಡಿದ್ದು, "ಇವರ ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ ಕತೆಯಲ್ಲಿ ಹೆಣ್ಣಿನ ಮಾನಸಿಕ ವಿಶ್ಲೇಷಣಾ ವಿಧಾನವನ್ನು ಕತೆಗಾರ್ತಿ ತಂದಿದ್ದಾರೆ."[೨]

"ಮಾತೃ ಪ್ರೇಮವೇ ಮಾನವತಾ ಪ್ರೇಮ. ಮಾನವತಾ ಪ್ರೇಮವೇ ಮಾತೃ ಪ್ರೇಮವೆಂಬ ಆಶಯದ ಕತೆ. ಮದ್ಲಿಂಗನ ಮಾತೃ ಪ್ರೇಮವೂ ಮತ್ತು ಮನೋ ವಿಜ್ಞಾನವೂ ಗ್ರಾಮೀಣ ಪರಿಸರದಲ್ಲಿ ಅರಳುವ ಈ ಕತೆ ತನ್ನ ಪರಿಸರಲ್ಲೇ ಅಡಗಿರುವ ಸತ್ವಯುತವಾದ ಸಾಂಗತ್ಯವನ್ನೂ ಆಧುನಿಕ ಅರಿವಿನೊಂದಿಗೆ ಆತುಕೊಳ್ಳುತ್ತದೆ."[೩]

"ಮನೋದೈಹಿಕ ಏರುಪೇರುಗಳ ಬಗ್ಗೆ ವೈಜ್ಞಾನಿಕವಾಗಿ ತಿಳಿಸುವ ಅಗತ್ಯವಿದೆ. ಇಲ್ಲವಾದರೆ ಅಪ್ರಬುದ್ಧ ಮನಸ್ಸುಗಳು ದಿಕ್ಕು ತಪ್ಪುವ ಸಂಭವ ಹೆಚ್ಚು. ಈ ಮನಸ್ಸುಗಳ ದ್ವಂದ್ವಗಳನ್ನು ವಿವೇಕದಿಂದ ಪರಿಹರಿಸಿದಾಗ ಮಾತ್ರ ಉತ್ತಮ ಭವಿಷ್ಯ ನಿರ್ಮಾಣ ಸಾಧ್ಯವಾಗುತ್ತದೆಂಬ ವಿವೇಕದ ಆಶಯವನ್ನು 'ನೀರು' ಕತೆ ಒಳಗೊಂಡಿದೆ."[೪]

ಮರದೊಳಗೆ ಮರಹುಟ್ಟಿ ಕತೆಯಲ್ಲಿನ ಹೆಣ್ಣಿನ ತಾಯ್ತನವನ್ನು ಹೇಳುವುದರ ಜೊತೆಗೆ ತಾಯಿಯಾಗುವವಳ ಪಾಡನ್ನು ಸಹ ಮನೋಜ್ಞವಾಗಿ ಚಿತ್ರಿಸಿದ್ದಾರೆ.

---

೧. ಎಂ.ಎಸ್.ವೇದಾರ ಸಣ್ಣ ಕತೆಗಳು ಈ ತನಕ, ಸಂವಹನ, ಮೈಸೂರು, ೨೦೧೦. ಪು.೧೯

೨. ಡಿ.ಸುಮಂಗಳ ಆಧುನಿಕ ಮಹಿಳಾ ಕಥಾ ಸಾಹಿತ್ಯದಲ್ಲಿ (ಸಣ್ಣಕತೆಗಳು) ಪ್ರತಿಭಟನೆಯ ವಿನ್ಯಾಸಗಳು ಮೈ.ವಿ.ವಿ. ಮೈಸೂರು, ೨೦೦೯, ಪು. ೩೩೦

೩. ಎಂ.ಎಸ್.ವೇದಾರ ಸಣ್ಣ ಕತೆಗಳು ಈ ತನಕ ಸಂವಹನ ೨೦೧೦, ಪು.೨೦

೪. ಅದೇ, ಪು. ೨೧

ಎಂ.ಎಸ್.ವೇದಾರವರ 'ಮುಳ್ಳು ಮನೆಯ ಮೇಲೆ' ಕತೆಗಳು ಕೌಟುಂಬಿಕ ಹಿನ್ನೆಲೆಯಿಂದ ಆರಂಭವಾಗಿ ನಂತರ ಸಾಮಾಜಿಕ ಚೌಕಟ್ಟನ್ನು ಪಡೆಯುತ್ತವೆ. ಉದಯೋನ್ಮುಖ ಕಥೆಗಾರನೊಬ್ಬನ ಕಥಾಪ್ರಸಂಗ'ದಲ್ಲಿ ಹೊಸದಾಗಿ ಬರೆಯ ಹೊರಟ ವಿಶ್ವನಾಥನಿಗೆ ಯಾವ ರೀತಿ ಕಷ್ಟಗಳು ಎದುರಾಗುತ್ತವೆ. ಅಂತೆಯೇ ಯಾವುದೇ ಕಥೆಗಳನ್ನು ಬರೆಯುವಾಗ ಯಾವ ರೀತಿ ಬರೆಯಬೇಕೆಂಬುದನ್ನು ತಿಳಿಸುತ್ತದೆ.

'ಎಲ್ಲೋ ಜೋಗಪ್ಪ ನಿನ್ನ ಅರಮನೆ' ದುಡಿಯುವ ವರ್ಗದ ಸಂಕಷ್ಟಗಳನ್ನು ಹೇಳುವಂತದ್ದಾಗಿದೆ. ಅವರಿಗೆ ಎಂತಹ ಸಂಕಷ್ಟಗಳು ಎದುರಾಗುತ್ತವೆಂಬುದನ್ನು ಕತೆ ಚಿತ್ರಿಸುತ್ತದೆ.

''ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೊಡೆ' ಕತೆಯಲ್ಲಿನ ಶಿವಮ್ಮ ಗ್ರಾಮೀಣ ಸ್ತ್ರೀಯರ ಮುಗ್ಧತೆ, ಧೈರ್ಯ, ಸಾಧನೆಗಳಿಗೊಂದು ಪ್ರತೀಕವಾಗಿದ್ದಾಳೆ. ನಮ್ಮ ಸಮಾಜದಲ್ಲಿ ಸಮಾನತಾದೃಷ್ಟಿ ಇಲ್ಲದೆ ಶ್ರೇಣೀಕರಣದ ಕ್ರಮವಿದೆ. ಬಡವರಿಗೆ ತಾವು ಬದುಕುವುದೇ ಒಂದು ಪ್ರಶ್ನೆ ಸವಾಲಾಗಿದೆ. ಹಸಿವು ಕೊಡುವ ಅನುಭವ ಹಸಿದವನಿಗೆ ಗೊತ್ತ ಎಂಬ ಧೋರಣೆ ಕತೆಯಲ್ಲಿ ವ್ಯಕ್ತವಾಗಿದೆ.

ಹೀಗೆ ಎಂ.ಎಸ್.ವೇದಾರವರ ಬಹುಪಾಲು ಕತೆಗಳು ಸ್ತ್ರೀ ಪಾತ್ರ ಕೇಂದ್ರಿತ ಕತೆಗಳಾಗಿವೆ. ಪುರುಷ ಪಾತ್ರಕ್ಕಿಂತ ಸ್ತ್ರೀ ಪಾತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಇವರ ಕತೆಗಳಲ್ಲಿ ಹೆಣ್ಣು ಶತಶತಮಾನಗಳಿಂದಲೂ ಸಹ ಯಾವ ರೀತಿಯ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ತಮ್ಮ ಕಥೆಗಳ ಮೂಲಕ ಹೇಳುತ್ತಾ ಹೋಗುತ್ತಾರೆ. ಅಂತೆಯೇ ಕೆಲವು ಕತೆಗಳಲ್ಲಿ ಸ್ತ್ರೀ ಶೋಷಣೆಯ ವಿರುದ್ಧ ಪುಟಿದೆದ್ದು ಯಾವ ರೀತಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ ಎಂಬುದನ್ನು ಸಹ ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಅಂತೆಯೇ ದಲಿತ ಸ್ತ್ರೀ ಪಾತ್ರಗಳ ಶೋಷಣೆಯ ವಿವಿಧ ನೆಲೆಗಳನ್ನು ಶೋಧಿಸುವಂತಹ ಕತೆಗಳನ್ನು ಸಹ ಕಾಣಬಹುದು.

ಇಲ್ಲಿನ ಒಟ್ಟಾರೆ ಕತೆಗಳು ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬದುಕಿನ ಹಲವಾರು ರೂಪಗಳನ್ನು ಬಿತ್ತರಿಸುವಂತಹ ಕಥೆಗಳಾಗಿವೆ. ನಂಜನಗೂಡಿನ ಸುತ್ತಮುತ್ತಲ ಗ್ರಾಮೀಣ ಭಾಷೆಯನ್ನು ತಮ್ಮ ಕತೆಗಳಲ್ಲಿ ಬಳಸಿ ಮನೋಜ್ಞವಾಗಿ ಪಾತ್ರಗಳನ್ನು ಚಿತ್ರಿಸಿದ್ದಾರೆ.

ಉಪಸಂಹಾರ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಮತ್ತು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಇದು ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಸ್ತ್ರೀವಾದಿ ಚಿಂತನೆ ಎಂಬ ಎಲ್ಲಾ ಪ್ರಕಾರಗಳಲ್ಲಿಯೂ ತನ್ನದೇ ಆದ ಛಾಪನ್ನು ಮೂಡಿಸುತ್ತಾ ಬಂದಿದೆ.

ಸಣ್ಣ ಕಥೆ ಸಾಹಿತ್ಯ ಪ್ರಕಾರವು ವಸ್ತು, ಭಾಷೆ, ತಂತ್ರ ಧೋರಣೆ ಎಲ್ಲದರಲ್ಲೂ ತನ್ನದೇ ಆದ ಭಿನ್ನತೆಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಕಥಾ ಸಾಹಿತ್ಯದ ಕತೆಗಾರ್ತಿಯರಲ್ಲಿ ಮೂರನೇ ತಲೆಮಾರಿಗೆ ಸೇರಿದ ಇವರು ಸ್ತ್ರೀವಾದಿ ಚಿಂತನೆಗಳು ಪರಿಪಕ್ವವಾಗಿದ್ದ ಸಂದರ್ಭದಲ್ಲಿ ಕಥಾಲೋಕಕ್ಕೆ ಪಾದಾರ್ಪಣೆ ಮಾಡಿದ ಎಂ.ಎಸ್.ವೇದಾರವರು ದಲಿತ ಬಂಡಾಯ ಸಾಹಿತ್ಯದಿಂದ ಸ್ಫೂರ್ತಿ ಪಡೆದವರೂ ದೇವನೂರು ಮಹಾದೇವ ಅವರ ಕಥನಾಶೈಲಿಯನ್ನು ಹೋಲುವಂತಹ ಕಥೆಗಳನ್ನು ರಚಿಸಿದ್ದಾರೆ. ನಂಜನಗೂಡಿನ ಸುತ್ತಮುತ್ತಲ ಅಚ್ಚ ಗ್ರಾಮೀಣ ಭಾಷಾ ಸೊಗಡನ್ನು ಇವರ ಹೆಚ್ಚಿನ ಕತೆಗಳಲ್ಲಿ ಗುರುತಿಸಬಹುದು.

ಇವರ ಕತೆಗಳಲ್ಲಿ ಸ್ತ್ರೀಪಾತ್ರಗಳು ಕೆಳವರ್ಗದ ಬಡತನ ರೇಖೆಯಲ್ಲಿರುವ ಶ್ರಮಿಕ ವರ್ಗಕ್ಕೆ ಸೇರಿದಂಥವುಗಳು. ಗ್ರಾಮೀಣ ಆಚಾರ–ವಿಚಾರಗಳು ನಂಬಿಕೆಗಳು ಸಹಜವಾಗಿ ರೂಪುಗೊಂಡಿವೆ. ಇವರ ಕತೆಗಳಲ್ಲಿ ಮುಖ್ಯವಾಗಿ ಸ್ತ್ರೀಕೇಂದ್ರಿತ ಪಾತ್ರಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಇವರ ಕತೆಗಳಲ್ಲಿ ಹೆಣ್ಣು ಸಹನೆಯನ್ನು ಮೀರಿ ನಿಂತು ಸಾವಿನಲ್ಲಿ ಅಂತ್ಯವಾದ ಸಂಗತಿ ಸ್ತ್ರೀ ಶೋಷಣೆಯ ಒಂದು ಭಾಗವಾಗಿಯೇ ಮೂಡಿಬಂದಿದೆ. ಅಂತೆಯೇ ಪೌರಾಣಿಕ ಪುರಾಣಗಳಿಂದ ಉದಾಹರಣೆ ನೀಡುವುದರ ಮೂಲಕವಾಗಿ ಶತಶತಮಾನಗಳಿಂದ ಹೆಣ್ಣು ಯಾವ ರೀತಿ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ಬಿಂಬಿಸುತ್ತದೆ.

ಇವರ ಕತೆಗಳಲ್ಲಿ ಸ್ತ್ರೀ ಶೋಷಣೆಯ ವಿವಿಧ ನೆಲೆಗಳನ್ನು ಕಾಣುವಂತೆ ದಲಿತ ಪಾತ್ರಗಳ ಬವಣೆಗಳನ್ನು ಸಹ ಕಾಣಬಹುದು. ಇಲ್ಲಿ ಬರುವಂತಹ ದಲಿತ ಸ್ತ್ರೀ ಪಾತ್ರಗಳು ಅನ್ಯಾಯ ಅಕ್ರಮಗಳನ್ನು ಕಂಡಾಗ ಧೈರ್ಯದಿಂದ ಪ್ರಶ್ನೆಯನ್ನು ಕೇಳುವಂತಹ ಪಾತ್ರಗಳಾಗಿವೆ.

ಈ ಪಾತ್ರಗಳು ಛಲ, ಆತ್ಮ ವಿಶ್ವಾಸಗಳಿಂದ ತಮ್ಮ ಬದುಕನ್ನು ರೂಪಿಸಲು ಹೋಗುವಂತವು. ಜೊತೆಗೆ ಎಂ.ಎಸ್.ವೇದಾರವರ ಕತೆಗಳು ಹೆಣ್ಣಿನ ಒಳಜಗತ್ತಿನ

ತಳಮಳಗಳನ್ನು ಚಿತ್ರಿಸುವುದರ ಜೊತೆಗೆ ಹೆಣ್ಣು ಯಾವ ರೀತಿ ಗಟ್ಟಿತನವನ್ನು ರೂಢಿಸಿಕೊಂಡು ಜೀವನ ಸಾಗಿಸಬೇಕೆಂಬುದನ್ನು ತೋರಿಸುತ್ತವೆ.

ಇವರ ಕತೆಗಳಲ್ಲಿ ಆಧುನಿಕ ಉದ್ಯೋಗಸ್ಥ ಮಹಿಳೆಯರ ಕಥಾ ಪಾತ್ರಗಳು ಬಹುತೇಕ ಕಡಿಮೆ. ಇಲ್ಲಿ ಅವಿದ್ಯಾವಂತ ಶ್ರಮಿಕ ಮಹಿಳೆಯರು ಕೂಲಿನಾಲಿ ಮಾಡಿಕೊಂಡು ಜೀವನ ನಡೆಸುವಂತಹ ಪಾತ್ರಗಳು, ಗಂಡನಿದ್ದರೂ ಸಹ ಅವನು ಯಾವುದಕ್ಕೂ ಪ್ರಯೋಜನವಿಲ್ಲದೇ ಹೆಂಡತಿಯಿಂದಲೇ ಹಣವನ್ನು ತೆಗೆದುಕೊಂಡು ಮೋಜನ್ನು ಮಾಡುವಂತಹ ಪಾತ್ರಗಳು ಕಂಡುಬರುತ್ತವೆ.

ಒಟ್ಟಾರೆ ಇವರ ಕತೆಗಳ ಬಗ್ಗೆ ಹೇಳುವುದಾದರೆ ಇವರ ಕತೆಗಳಲ್ಲಿನ ಸ್ತ್ರೀಪಾತ್ರಗಳು ಎಂತಹ ಕಷ್ಟಗಳು ಬಂದರೂ ಅದಕ್ಕೆ ಬೆನ್ನು ಮಾಡಿ ನಿಲ್ಲದೆ ಕಷ್ಟ ಸಹಿಷ್ಣುತೆಗಳು, ಅಡ್ಡಿ ಆತಂಕಗಳು ಎದುರಾದಾಗ ಹೆದರದೆ ಧೈರ್ಯದಿಂದ ಎದುರಿಸುವಂಥವು.

ಗಂಡನ ಉಡಾಫೆ ವರ್ತನೆ, ಪೆದ್ದು ಗಂಡನನ್ನು ಕಟ್ಟಿಕೊಂಡು ಹೋರಾಡಿ ಸ್ವಾವಲಂಬಿ ಬದುಕನ್ನು ನಡೆಸುವಂತವು, ರೋಗಿಷ್ಠ ಗಂಡನನ್ನು ಕಟ್ಟಿಕೊಂಡು ತಾವೇ ಧೈರ್ಯದಿಂದ ಗಂಡನ ಸ್ಥಾನದಲ್ಲಿ ನಿಂತು ದುಡಿಯುವಂತವು. ದಲಿತ ಮಹಿಳೆಯರ ಬವಣೆ, ಶೋಷಣೆ, ವೇದನೆಗಳ ಸ್ನಿಗ್ಧತೆಯನ್ನು ದಟ್ಟ ಗ್ರಾಮೀಣ ಪರಿಭಾಷೆಯನ್ನು ತಮ್ಮ ಕತೆಗಳಲ್ಲಿ ತರುವುದರ ಮೂಲಕ ಹೆಣ್ಣಿನ ಸೂಕ್ಷ್ಮಾತೀ ಸೂಕ್ಷ್ಮ ಸಂವೇದನೆಗಳನ್ನು ಅನಾವರಣಗೊಳಿಸಿದ್ದಾರೆ. ದಟ್ಟ ಸ್ತ್ರೀವಾದಿ ಪ್ರಜ್ಞೆಯನ್ನು ಇವರ ಕತೆಗಳಲ್ಲಿ ಗುರುತಿಸಬಹುದಾಗಿದೆ.

ಹೀಗೆ ಎಂ.ಎಸ್.ವೇದಾರವರು ಸ್ತ್ರೀವಾದಿ ಚಿಂತನೆ ಲೇಖಕಿಯಾಗಿ ಸ್ತ್ರೀ ಶೋಷಣೆಯ ವಿವಿಧ ಮಗ್ಗಲುಗಳನ್ನು ಸೂಕ್ಷ್ಮವಾಗಿ ಚಿತ್ರಿಸಿ. ಅಂತೆಯೇ ಅದರಿಂದ ಹೇಗೆ ಹೊರಗೆ ಬರಬೇಕು, ಸ್ವತಂತ್ರ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ತಮ್ಮ ಕಥೆಗಳ ಮೂಲಕ ಓದುಗರಿಗೆ ಹೇಳಿದ್ದಾರೆ.

ಮಹಿಳಾ ಪ್ರತಿಭಟನೆಯ ಸಶಕ್ತ ಮಾದರಿಗಳನ್ನು ತಮ್ಮ ಕತೆಗಳಲ್ಲಿ ಲೇಖಕಿಯವರು ಕಟ್ಟಿಕೊಡುವುದರಿಂದ ಮಹಿಳೆಯರು ಬರಿ ಬಲಿಪಶುಗಳಾಗದೆ ಬದುಕನ್ನು ಎದುರಿಸುವಂತಹ ಸೃಜನಾತ್ಮಕ ಕಲೆಯನ್ನು ಹೇಗೆ ಬೆಳೆಸಿಕೊಂಡಿದ್ದಾರೆ ಎಂಬುದು ಸಮಾಜದ ಆರೋಗ್ಯದ ಹಿತದೃಷ್ಟಿಯಿಂದ ಪ್ರಮುಖವಾದುದಾಗಿದೆ. ಮಹಿಳಾ ಪಾತ್ರಗಳು ಶೋಷಣೆಯಿಂದ ಹೊರಬರುವಲ್ಲಿ ತೋರಿದ ಅದಮ್ಯವಾದ ಪ್ರಯತ್ನಶೀಲತೆ, ಛಲ, ಭರವಸೆ, ಕನಸು ಹಾಗೂ ಆತ್ಮವಿಶ್ವಾಸಗಳು ಮಹಿಳಾ ಹೋರಾಟಕ್ಕೆ ಸ್ಫೂರ್ತಿದಾಯಕವಾಗಬಲ್ಲಂತವುಗಳಾಗಿವೆ.

ಪರಾಮರ್ಶನ ಗ್ರಂಥಗಳು

೧. ಎಲ್.ಎಸ್.ಶೇಷಗಿರಿರಾಯರು, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೨೦೦೭.

೨. ನರಸಿಂಹಮೂರ್ತಿ.ಕೆ, ಕನ್ನಡ ಕಥೆಯ ಸ್ವರೂಪ, ಪ್ರಬುದ್ಧ ಕರ್ನಾಟಕ, ೧೯೪೦, ಸಂ. ೨೧.

೩. ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ, ೧೯೯೦.

೪. ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಸಂವಹನ, ಮೈಸೂರು, ೨೦೧೦.

೫. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ (ಕನ್ನಡ ಸಾಹಿತ್ಯ ಪುನರ್ ಮೌಲೀಕರಣ ಮಾಲೆ) ಸುವರ್ಣ ಕರ್ನಾಟಕ, ೨೦೦೬.

೬. ಡಿ.ಸುಮಂಗಳ, ಆಧುನಿಕಾ ಮಹಿಳಾ ಕಥಾಸಾಹಿತ್ಯದಲ್ಲಿ (ಸಣ್ಣಕತೆಗಳು) ಪ್ರತಿಭಟನೆಯ ವಿನ್ಯಾಸಗಳು, ಮೈವಿವಿ, ಡಿಸೆಂಬರ್, ೨೦೦೯.

೭. ಅ.ನ.ಕೃ. ಕನ್ನಡದಲ್ಲಿ ಸಣ್ಣಕತೆಗಳು, ಜಯಕರ್ನಾಟಕ

೮. ವಿಜಯಶ್ರೀ ಸಬರದ, ಸಾಹಿತ್ಯ ಮತ್ತು ಮಹಿಳೆ

೯. ಅಮೂರ ಜಿ.ಎಸ್. ಕನ್ನಡ ಕಥನಸಾಹಿತ್ಯ, ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩.

೧೦. ಪ್ರಜಾವಾಣಿ (ಭೂಮಿಕಾ) ದಿನಪತ್ರಿಕೆ ಶನಿವಾರ ೩೦ನೇ ಏಪ್ರಿಲ್ ೨೦೧೧.